


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 20 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 64 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ವಸತಿಯಲ್ಲಿ ಅಲ್ಪಸಂಖ್ಯಾತರಿಗೆ
ಶೇ.15ರಷ್ಟು ಮೀಸಲು

● ಸಂಪುಟ ಸಭೆಯಲ್ಲಿ ನಿರ್ಧಾರ; ಇದುವರೆಗೆ ಶೇ.10 ಕಲ್ಪಿಸಲಾಗಿತ್ತು ● ಪರಿಶಿಷ್ಟ ಜಾತಿ, ಪಂಗಡಕ್ಕೂ ಮೀಸಲಾತಿ ನೀಡಲಾಗಿದೆ: ಸಮರ್ಥನೆ ● ಇದರಲ್ಲಿ ರಾಜಕೀಯ ಇಲ್ಲ; ಅರ್ಹರಿಗೆ ಸೌಲಭ್ಯ ಕಲ್ಪಿಸುವ ಉದ್ದೇಶವಷ್ಟೆ: ಸಚಿವ ಹೆಚ್.ಕೆ.ಪಾಟೀಲ್ ಸ್ಪಷ್ಟನೆ

ಬೆಂಗಳೂರು, ಜೂ.19(ಕೆಎಂಶಿ)– ನಗರ ಮತ್ತು ಗ್ರಾಮೀಣ ಪ್ರದೇಶದ ವಸತಿ ಯೋಜನೆಯಲ್ಲಿ ಅಲ್ಪಸಂಖ್ಯಾತರಿಗೆ ಶೇಕಡ 15ರಷ್ಟು ಮೀಸಲಿಡುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೈಗೊಂಡಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಸಾಮಾಜಿಕ ನ್ಯಾಯದಡಿ ಈ ಸಮುದಾಯಕ್ಕೆ ಶಾಶ್ವತ ಸೂರು ಕಲ್ಪಿಸುವ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಇದುವರೆಗೂ ಶೇಕಡಾ 10ರಷ್ಟು ಮೀಸಲಾತಿಯನ್ನು ಈ ಸಮುದಾಯಕ್ಕೆ ಕಲ್ಪಿಸಲಾಗಿತ್ತು, ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ನಡೆಸಿದ ಸಮೀಕ್ಷೆ ಆಧರಿಸಿ ಮೀಸಲಾತಿ ಪ್ರಮಾಣವನ್ನು ಶೇಕಡ 15ಕ್ಕೆ ಹೆಚ್ಚಿಸಲಾಗಿದೆ ಎಂದು ಸಮರ್ಥಿಸಿಕೊಂಡರು. ಸಂಪುಟದ ಈ ನಿರ್ಧಾರಕ್ಕೆ ಕಾನೂನು ತಿದ್ದುಪಡಿ ಅವಶ್ಯಕತೆ ಇಲ್ಲ. ಆದೇಶದ ಮೂಲಕ ಇನ್ನು ಮುಂದೆ ರಚನೆಗೊಳ್ಳುವ ಸರ್ಕಾರಿ ಬಡಾವಣೆಗಳಲ್ಲಿ ಶೇಕಡ 15ರಷ್ಟು ಮೀಸಲಾತಿ ದಕ್ಕಲಿದೆ.



ಬಸವ, ಡಾ.ಅಂಬೇಡ್ಕರ್ ಸೇರಿದಂತೆ ಕೆಲವು ನಿರ್ದಿಷ್ಟ ಸಮುದಾಯದ ಯೋಜನೆಗಳಡಿ ಆಯಾ ಸಮುದಾಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನಿವೇಶನ ಹಾಗೂ ಮನೆಗಳು ದೊರೆಯಲಿವೆ.

ಆಶ್ರಯ ಸೇರಿದಂತೆ ಸಾರ್ವಜನಿಕರಿಗೆ ನಿರ್ಮಿಸುವ ವಸತಿಗಳ ಹಂಚಿಕೆಯಲ್ಲಿ ಅಲ್ಪಸಂಖ್ಯಾತರಿಗೆ ಈ ಮೀಸಲಾತಿ ಕಡ್ಡಾಯಗೊಳಿಸಲಾಗಿದೆ. ಯಾವುದೇ ಸಮುದಾಯಕ್ಕೆ ಇಲ್ಲದ ಮೀಸಲಾತಿ ಈ ಸಮುದಾಯಕ್ಕೆ ಏಕೆ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೂ ಕೆಲವು ಯೋಜನೆಗಳಡಿ ಮೀಸಲಾತಿ ▶ 6ನೇ ಪುಟಕ್ಕೆ

ಜನಸಂದಣಿ ನಿಯಂತ್ರಣ ಸಂಬಂಧ ಮಸೂದೆ

ಬೆಂಗಳೂರು, ಜೂ.19–ಕಳೆದ ಜೂನ್ 4ರಂದು ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತದಲ್ಲಿ 11 ಜನರು ಸಾವನ್ನಪ್ಪಿದ ನಂತರ ಜನಸಂದಣಿ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಮಸೂದೆಯನ್ನು ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸುವ ಸಾಧ್ಯತೆಯಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ಗುರುವಾರ ತಿಳಿಸಿದ್ದಾರೆ.

ಅಲ್ಲದೆ, ತಪ್ಪು ಮಾಹಿತಿ ಅಥವಾ ನಕಲಿ ಸುದ್ದಿಗಳ ವಿರುದ್ಧದ ಮಸೂದೆಗಳು ಮತ್ತು ದ್ವೇಷ ಭಾಷಣಗಳು ಮತ್ತು ಅಪರಾಧಗಳು ಚರ್ಚಿಸಲ್ಪಡುವ ಸಾಧ್ಯತೆಯಿದೆ. ಇಂದು ನಾಲ್ಕು ಮಸೂದೆಗಳನ್ನು ಪ್ರಸ್ತಾಪಿಸಲಾಯಿತು – ಕರ್ನಾಟಕ ಜನಸಂದಣಿ ನಿಯಂತ್ರಣ, ಕಾರ್ಯಕ್ರಮಗಳಲ್ಲಿ ಜನಸಂದಣಿಯನ್ನು ನಿರ್ವಹಿಸುವುದು ಮತ್ತು ಸಾಮೂಹಿಕ ಸಭೆ ನಡೆಯುವ ಸ್ಥಳ ಮಸೂದೆ, ▶ 6ನೇ ಪುಟಕ್ಕೆ

ಸಂವಿಧಾನದ ಆಶಯಗಳಿಗೆ ಸಂಪೂರ್ಣ ವಿರುದ್ಧ

ಬೆಂಗಳೂರು, ಜೂ.19– ವಸತಿ ಯೋಜನೆಯಲ್ಲಿ ಮುಸ್ಲಿಮರ ಮೀಸಲು ಹೆಚ್ಚಳ ಮಾಡಿರುವುದು ಸಂವಿಧಾನಕ್ಕೆ ಮಾಡಿದ ಅಪಚಾರ. ಈ ಮೂಲಕ ಕಾಂಗ್ರೆಸ್ ಸರ್ಕಾರ ಜನರ ಹಕ್ಕನ್ನು ಕಸಿದಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬರೆದ ಸಂವಿಧಾನ ಪ್ರಕಾರ ಧರ್ಮಾಧಾರಿತವಾದ ಮೀಸಲು ನೀಡಲು ಸಾಧ್ಯವಿಲ್ಲ. ಕಾಂಗ್ರೆಸ್ ನಾಯಕರು ಸಂವಿಧಾನದ ಪುಸ್ತಕ ಹಿಡಿದುಕೊಂಡು ಸಂವಿಧಾನಕ್ಕೆ ಅಪಚಾರ ಮಾಡುತ್ತಿದ್ದಾರೆ. ವಸತಿ ಯೋಜನೆಯಲ್ಲಿ ಮುಸ್ಲಿಮರಿಗೆ ಶೇ.5ರಷ್ಟು ಮೀಸಲು ಹೆಚ್ಚಿಸಿರುವುದರಿಂದ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಿದೆ. ಮತಕ್ಕಾಗಿ ಇಂತಹ ನೀಚ ಕೆಲಸವನ್ನು ಸಿಎಂ ಸಿದ್ದರಾಮಯ್ಯ ಮಾಡಿದ್ದಾರೆ. ಆರ್‌ಸಿಬಿ ಸಂಭ್ರಮಾಚರಣೆಯಲ್ಲಾದ ಕಾಲ್ತುಳಿತ ದುರಂತವನ್ನು ಮುಚ್ಚಿ ಹಾಕಲು ಇಂತಹ ವಿವಾದವನ್ನು ಹರಿಬಿಡಲಾಗುತ್ತಿದೆ. ಇದು ನಾಡಿನ ಜನರ ಹಕ್ಕನ್ನು ಸರ್ಕಾರ ಕಸಿದಿದೆ ಎಂದರು.

ಹೀಗೆಯೇ ಮುಂದುವರಿದರೆ ಸಿದ್ದರಾಮಯ್ಯ ಕೇವಲ ಮುಸ್ಲಿಂ ಸಮುದಾಯಕ್ಕೆ ಮೀಸಲಾದ ಮುಖ್ಯಮಂತ್ರಿಯಾಗುತ್ತಾರೆ. ಈ ಹಿಂದೆಯೇ ಮೀಸಲು ಹೆಚ್ಚಳಕ್ಕೆ ಮಾನ್ಯತೆ ಸಿಕ್ಕಿಲ್ಲ. ಈಗ ಹೊಸ ರೀತಿಯ ಮೀಸಲು ತಂದಿದ್ದಾರೆ. ಅಕ್ಟೋಬರ್‌ನಲ್ಲಿ ಕುರ್ಚಿ ಬಿಟ್ಟುಕೊಡಬೇಕೆಂಬ ಕಾರಣಕ್ಕಾಗಿ ಹೀಗೆ ಮಾಡಿದ್ದಾರೆ. ಮುಸ್ಲಿಮರೆಲ್ಲರೂ ನನ್ನ ಜೊತೆ ಬರಬೇಕೆಂದು ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದರು. ಅಹಿಂದ'ದಲ್ಲಿ 'ಹಿಂದ' ಮಾಯವಾಯ್ತಾ ; ಇದ್ಯಾವ ಸೀಮೆ ಸಾಮಾಜಿಕ ನ್ಯಾಯ ಸಿದ್ದರಾಮಯ್ಯನವರೇ; ವೋಟ್ ಬ್ಯಾಂಕ್ ರಾಜಕಾರಣವನ್ನೇ ಬಂಡವಾಳವಾಗಿಸಿಕೊಂಡಿರುವ ಕಾಂಗ್ರೆಸ್ ಪಕ್ಷ ತನ್ನ ತುಷ್ಟೀಕರಣವನ್ನು ಮುಂದುವರೆಸಲು ದಿನಕ್ಕೊಂದು ಹೊಸ ದಾರಿ ಹುಡುಕಿಕೊಳ್ಳುತ್ತಿದೆ. ಸರ್ಕಾರಿ ಗುತ್ತಿಗೆ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ 4% ಮೀಸಲಾತಿ ▶ 6ನೇ ಪುಟಕ್ಕೆ

ಕೆಆರ್‌ಎಸ್ 45 ವರ್ಷಗಳ ದಾಖಲೆ ಬರೆಯುವ ಸಂಭ್ರಮ!



ಶ್ರೀರಂಗಪಟ್ಟಣ, ಜೂ.19(ವಿನಯ್)– ಕೊಡಗು ಜಿಲ್ಲೆ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ವ್ಯಾಪಕ ಮಳೆಯಿಂದ ರೈತರ ಜೀವನಾಡಿ ಕೆಆರ್‌ಎಸ್ ಜಲಾಶಯ 45 ವರ್ಷಗಳ ಬಳಿಕ ಜೂನ್ ತಿಂಗಳಲ್ಲೇ ಭರ್ತಿ ಯಾಗುವ ಕುತೂಹಲ ಮೂಡಿಸಿದೆ. ಪ್ರಸ್ತುತ 116.60 ಅಡಿ ನೀರಿದ್ದು, 29251 ಕ್ಯೂಸೆಕ್ ಒಳ ಹರಿವಿದೆ.

ಕೆಆರ್‌ಎಸ್ ಗರಿಷ್ಠ ಮಟ್ಟ 124.80 ಅಡಿ ಇದ್ದು ಸಂಪೂರ್ಣ ಭರ್ತಿಯಾಗಲು ಇನ್ನು 8.6 ಅಡಿಗಳು ಮಾತ್ರ ಬಾಕಿಯಿದೆ. ಇದೇ ರೀತಿ ಮಳೆ ಮುಂದುವರೆದರೆ ಇನ್ನು ನಾಲ್ಕೈದು ದಿನಗಳಲ್ಲಿ ಕೆಆರ್‌ಎಸ್ ಭರ್ತಿಯಾಗುವ ಸಾಧ್ಯತೆಗಳಿವೆ ಎಂದು ನೀರಾವರಿ ತಜ್ಞರು ತಿಳಿಸಿದ್ದಾರೆ. ಸಾಮಾನ್ಯವಾಗಿ ಕೆಆರ್‌ಎಸ್ ಭರ್ತಿಯಾಗುತ್ತಿದ್ದುದ್ದು ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ಮಾತ್ರ, ಕೆಲವು ವರ್ಷ ಜುಲೈನಲ್ಲಿ ಭರ್ತಿಯಾಗಿದ್ದ ಉದಾಹರಣೆಗಳಿವೆ. ಆದರೆ ಈ ಬಾರಿ ಜೂನ್ ತಿಂಗಳಲ್ಲೇ ಜಲಾಶಯ ಭರ್ತಿಯಾಗುವ ಹಂತಕ್ಕೆ ತಲುಪಿರುವುದು 45 ವರ್ಷಗಳ ಬಳಿಕ ದಾಖಲೆಯಾಗುವ ಸಾಧ್ಯತೆ ಇದೆ. ಕಾವೇರಿ ಜಲಾನಯನ ಪ್ರದೇಶ ಮತ್ತು ಕೊಡಗು ಜಿಲ್ಲೆಯಲ್ಲಿ ನಿರಂತರ ಮಳೆ ಸುರಿಯುತ್ತಿದ್ದು, ಕೆಆರ್‌ಎಸ್‌ಗೆ 29251 ಸಾವಿರ ಕ್ಯುಸೆಕ್ ಒಳ ಹರಿವಿದ್ದು, 1255 ಕ್ಯುಸೆಕ್ ನೀರನ್ನು ಮಾತ್ರ ಹೊರಬಿಡಲಾಗುತ್ತಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ಹಾರಂಗಿ ಜಲಾಶಯದಲ್ಲೂ ಹೊರಹರಿವು ಹೆಚ್ಚಾಗಿರುವ ಕಾರಣ ಕೆ.ಆರ್.ಸಾಗರ ಅಣೆಕಟ್ಟೆಯ ಒಳಹರಿವಿನಲ್ಲಿ ಹೆಚ್ಚಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ವರ್ಷ ಜೂನ್ ತಿಂಗಳ ಇದೇ ದಿನ ಕೆಆರ್‌ಎಸ್‌ನಲ್ಲಿ 87.20 ಅಡಿ ಮಾತ್ರ ನೀರಿತ್ತು ಒಳಹರಿವು 1209 ಕ್ಯುಸೆಕ್, ಹೊರಹರಿವು 951 ಕ್ಯುಸೆಕ್ ದಾಖಲಾಗಿತ್ತು.

ಅರಣ್ಯದಂಚಿನ ಜಮೀನಲ್ಲಿ ಹುಲಿ ದಾಳಿಗೆ ಮಹಿಳೆ ಬಲಿ

ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ





ಗುಂಡ್ಲುಪೇಟೆ, ಜೂ.19 (ಸೋಮ್.ಜಿ)– ಕುರಿ ಮೇಯಿಸುತ್ತಿದ್ದ ಆದಿವಾಸಿ ಮಹಿಳೆಯ ಮೇಲೆ ಹುಲಿ ದಾಳಿ ನಡೆಸಿ, ಕೊಂದು ಹಾಕಿದೆ. ಈ ಭಯಾನಕ ಘಟನೆ ಗುರುವಾರ ತಾಲೂಕಿನ ದೇಶೀಪುರ ಕಾಲೋನಿಯಲ್ಲಿ ಸಂಭವಿಸಿದೆ.

ದೇಶಿಪುರ ಕಾಲೋನಿಯ ಪುಟ್ಟಮ್ಮ(44) ಹುಲಿ ದಾಳಿಗೆ ಬಲಿಯಾದ ದುರ್ದೈವಿ. ಇತ್ತೀಚೆಗೆ ಗಂಡನನ್ನು ಕಳೆದುಕೊಂಡಿದ್ದ ಪುಟ್ಟಮ್ಮನಿಗೆ ಶರತ್ ಹಾಗೂ ಅಬ್ಬಾಯಿ ಇಬ್ಬರು ಮಕ್ಕಳಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ್ ವಲಯದ ಕಾಡಂಚಿನ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ಪುಟ್ಟಮ್ಮ ಕುರಿಗಳನ್ನು ಮೇಯಿಸುತ್ತಿದ್ದಾಗ ಹುಲಿ ಏಕಾಏಕಿ ದಾಳಿ ನಡೆಸಿ, ಕೆಲ ದೂರ ಕಚ್ಚಿ ಎಳೆದೊಯ್ದಿದೆ. ಮಹಿಳೆಯ ಆಕ್ರಂದನ ಕೇಳಿದ ಅಕ್ಕಪಕ್ಕದ ಜಮೀನುಗಳ ರೈತರು ಜೋರಾಗಿ ಕಿರುಚಾಡಿದರೂ ಬಿಡದೆ ಪುಟ್ಟಮ್ಮನನ್ನು ಕಾಡಿನತ್ತ ಎಳೆದೊಯ್ದು ಕುತ್ತಿಗೆ ಹಾಗೂ ಹೊಟ್ಟೆಯ ಭಾಗವನ್ನು ತಿಂದು ಹಾಕಿದೆ. ವಿಷಯ ತಿಳಿದು ತಹಸೀಲ್ದಾರ್ ಟಿ.ರಮೇಶ್ ಬಾಬು, ಓಂಕಾರ್ ವಲಯದ ▶ 6ನೇ ಪುಟಕ್ಕೆ

ಶಾಲೆ ಬಳಿ ಹುಲಿರಾಯ!

ಹುಣಸೂರು: ತಾಲೂಕಿನ ಬಿಳಿಕೆರೆ ಹೋಬಳಿ, ಧರ್ಮಾಪುರ ಸಾಮಾಜಿಕ ಅರಣ್ಯ ಬಳಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಳಿ ಹುಲಿ ಓಡಾಡಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಆತಂಕ ಮೂಡಿದೆ.

ಧರ್ಮಾಪುರ ಸಾಮಾಜಿಕ ಅರಣ್ಯದ ಪಕ್ಕದಲ್ಲೇ ಇರುವ ನಂಜಾಪುರ, ಗೌರಿಪುರ ಭಾಗದಲ್ಲಿ ಹುಲಿ ಓಡಾಡಿರುವ ಬಗ್ಗೆ ಕಳೆದ 15 ದಿನಗಳಿಂದ ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿತ್ತು. ಪರಿಶೀಲನೆಗೆ ಬಂದಿದ್ದ ಅರಣ್ಯ ಸಿಬ್ಬಂದಿ ಹುಲಿ ಹೆಜ್ಜೆ ಪತ್ತೆ ಮಾಡಿ, ರೈತರನ್ನು ಎಚ್ಚರಿಸಿದ್ದರು. ಈ ನಡುವೆ ಹುಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಾಂಪೌಂಡ್ ಹಾರಿ ಹೋಗಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ

ಈ ಬಾರಿ ದಸರಾ 11 ದಿನದ ಉತ್ಸವ!

ಎರಡು ದಿನ ಪಂಚಮಿ ತಿಥಿಯಾದ್ದರಿಂದ ಇದೇ ಮೊದಲು ಅಪರೂಪದ ಆಚರಣೆ

ಮೈಸೂರು, ಜೂ.19(ಆರ್‌ಕೆ)– 400 ವರ್ಷಗಳ ನಂತರ ಈ ಬಾರಿ ವಿಶ್ವ ಪ್ರಸಿದ್ಧ ಮೈಸೂರು ದಸರಾ ಉತ್ಸವ 9 ದಿನದ ಬದಲಾಗಿ 11 ದಿನ ನಡೆಯಲಿದೆ.



2025ರ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2 ರವರೆಗೆ 11 ದಿನಗಳ ಕಾಲ ದಸರಾ ಉತ್ಸವ ನಡೆಯಲಿದೆ. 2 ದಿನ ಹೆಚ್ಚುವರಿಯಾಗಿ ಸೇರ್ಪಡೆಯಾಗಿರುವುದು ಈ ಬಾರಿಯ ವಿಶೇಷ ಎಂದು ವಿದ್ವಾಂಸರು ತಿಳಿಸಿದ್ದಾರೆ.

ಚಂದ್ರನ ಚಕ್ರದಲ್ಲಿ ಶುಭ ದಿನವಾದ ಪಂಚಮಿ ತಿಥಿಯು ಸೆಪ್ಟೆಂಬರ್ 26 ಮತ್ತು 27ರಂದು ಎರಡು ದಿನಗಳು ಸಂಭವಿಸುವುದರಿಂದ ಈ ವಿಶೇಷ ಅನಿವಾರ್ಯ ಎಂಬುದನ್ನು ಪಂಚಾಂಗಗಳಲ್ಲಿ ನಮೂದಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ, ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಮೈಸೂರು ದಸರಾ ಮಹೋತ್ಸವ ಕೇವಲ ಒಂದು ಹಬ್ಬವಲ್ಲ, ಕೆಟ್ಟದ್ದನ್ನು ಸಂಹರಿಸಿ ಒಳ್ಳೆಯದರ ವಿಜಯ ಆಚರಿಸುವ ಜೀವಂತ ಆಚರಣೆ ಎಂದರು.

ಶತಮಾನಗಳಿಂದ ನವರಾತ್ರಿ ಹಾಗೂ ವಿಜಯದಶಮಿ ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ, ಈ ವರ್ಷ ಪಂಚಮಿ ತಿಥಿಗಳು 2 ದಿನ ಅತಿಕ್ರಮಿಸಲಿವೆ. ಆದ್ದರಿಂದ ಇಂತಹ ಸಂಚರಣೆಯು ಅತ್ಯಂತ ಅಪರೂಪ. 2025ರ ದಸರಾ ಉತ್ಸವದ ಎಲ್ಲಾ ಮುಹೂರ್ತಗಳೂ ಅನುಕೂಲಕರವಾಗಿವೆ ಎಂದು ತಿಳಿಸಿದ್ದಾರೆ.

ಹೆಚ್ಚುವರಿ ದಿನಗಳ ಬಗ್ಗೆ ಯಾರೂ ಚಿಂತಿಸಬೇಕಿಲ್ಲ. ಏಕೆಂದರೆ, ಇದು ಹಬ್ಬವನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತದೆ. ಈ ವರ್ಷದ ಆಚರಣೆ ಇನ್ನಷ್ಟು ಉಜ್ವಲವಾಗಿರುತ್ತದೆ. ಮೈಸೂರು ದಸರಾವನ್ನು ವಿಜಯನಗರ ಸಾಮ್ರಾಜ್ಯದ ಆಡಳಿತದಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ. ಮೈಸೂರು ಒಡೆಯರು 1910ರಿಂದ ವಿಧ್ಯುಕ್ತವಾಗಿ ಆಚರಿಸಿಕೊಂಡು ಬಂದಿದ್ದಾರೆ. ಅಂದಿನಿಂದ ದಸರಾವು ರಾಜ ಸಂಪ್ರದಾಯ ಹಾಗೂ ಗತವೈಭವದ ▶ 6ನೇ ಪುಟಕ್ಕೆ

ಇಂದು ಪೌರಕಾರ್ಮಿಕರಿಗೆ ಕಾಯಂ ಆದೇಶ

ಮೈಸೂರು, ಜೂ.19(ಎಸ್‌ಬಿಡಿ)– ಮೈಸೂರು ಪಾಲಿಕೆಯ ಸುಮಾರು 250 ಪೌರಕಾರ್ಮಿಕರಿಗೆ ಶುಕ್ರವಾರ ಕಾಯಂ ನೇಮಕಾತಿ ಪತ್ರ ವಿತರಿಸಲಾಗುತ್ತಿದೆ.

ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸಂಜೆ 4ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕಾಯಂ ಪೌರಕಾರ್ಮಿಕರಾಗಿ ನೇಮಕಾತಿ ಆದೇಶ ಪತ್ರ ವಿತರಿಸಲಿದ್ದಾರೆ. ಮೈಸೂರು ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ 1648 ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಇವರನ್ನು ಸರ್ಕಾರದ ಆದೇಶದನ್ವಯ ಹಂತ ಹಂತವಾಗಿ ಕಾಯಂ ಮಾಡಲಾಗುತ್ತಿದೆ.

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160





ಬೇಕಾಗಿದ್ದಾರೆ

ಚಿನ್ನ, ಬೆಳ್ಳಿ ಕೆಲಸ ಮಾಡಲು ಆಚಾರಿಗಳು ಬೇಕಾಗಿದ್ದಾರೆ
9164946160
8548089469

ಶ್ರೀಮತಿ ಲೀಲಾ ಶ್ರೀ ಹೆಚ್ ಚನ್ನಯ್ಯ ಕಲ್ಯಾಣ ಮಂಟಪ

ವಾಲ್ಮೀಕಿ ರಸ್ತೆ, ವಿನಾಯಕನಗರ (ಪಡುವಾರಹಳ್ಳಿ)
4 ಸಿಲಿಂಡರ್, ಕ್ಲೀನಿಂಗ್, ಅಡಿಗೆ ಪಾತ್ರೆಗಳು ಎಲ್ಲಾ ಸೇರಿ 1,20,000/- ರೂ ಗಳು.
ಅಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಖಾಲಿ ಇದೆ
ಮದುವೆ/ಶುಭ ಸಮಾರಂಭಗಳಿಗೆ ಲಭ್ಯವಿದೆ
ಸಂಪರ್ಕಿಸಿ: 8073929354 / 6362421885



ಮೈಸೂರು ಮಿತ್ರ
ಶುಕ್ರವಾರ 20 ಜೂನ್ 2025

ಕೊಡಗು ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಕೇಂದ್ರದ ಭರವಸೆ

ಸಂಸದ ಯದುವೀರ್ ಮನವಿಗೆ ಕೇಂದ್ರ ಜಲಶಕ್ತಿ ಸಚಿವರ ಸ್ಪಂದನೆ



ಕೊಡಗು ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಬಹು ಗ್ರಾಮ ಯೋಜನೆಗಳಿಗೆ ತ್ವರಿತವಾಗಿ ಅನುಮೋದನೆ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರಿಗೆ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಮನವಿ ಸಲ್ಲಿಸಿದರು.

ಮೈಸೂರು,ಜೂ.19–ಕೊಡಗು ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಬಹು ಗ್ರಾಮ ಯೋಜನೆ (ಎಂವಿಎಸ್)ಗಳಿಗೆ ತ್ವರಿತವಾಗಿ ಅನುಮೋದನೆ ನೀಡುವಂತೆ ಮಾಡಿದ ಮನವಿಗೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಈ ಯೋಜನೆಯಡಿ ಕೊಡಗು ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ನೀಗಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ, ಮನವಿ ಪತ್ರ ಸಲ್ಲಿಸಿದ ಬಳಿಕ ಅವರು ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಒದಗಿಸಲು ಎಂವಿಎಸ್‌ಗೆ ತ್ವರಿತ ಅನುಮೋದನೆ ಅಗತ್ಯವಿದೆ ಎಂದು ಮಡಿಕೇರಿ ವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ವಿಭಾಗದ ಅಧಿಕಾರಿಗಳು ನನಗೆ ಮಾಹಿತಿ ನೀಡಿದ್ದರು.

ಈ ಸಂಬಂಧ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇನೆ. ಅವರು, ಅತಿ ಶೀಘ್ರದಲ್ಲೇ ಯೋಜನೆಗೆ ಅನುಮೋದನೆ ನೀಡುವ ಭರವಸೆ ನೀಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಅತೀ ಶೀಘ್ರದಲ್ಲೇ ಪರಿಹಾರವಾಗಲಿದೆ ಎಂದು ಸಂಸದ ಯದುವೀರ್ ಒಡೆಯರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನೂರೊಂದು ಗಣಪತಿ ದೇವಸ್ಥಾನದಿಂದ ಎಂ.ಎ.ಶ್ರೀನಿವಾಸನ್ ವೃತ್ತದವರೆಗೆ

ರಸ್ತೆ, ಫುಟ್‌ಪಾತ್ ಒತ್ತುವರಿ

ಪಾದಚಾರಿಗಳು, ವಾಹನ ಸವಾರರು, ಸಾರಿಗೆ ಬಸ್‌ಗಳ ಓಡಾಟಕ್ಕೆ ತೀವ್ರ ತೊಂದರೆ

ಮೈಸೂರು, ಜೂ.19(ಎಸ್‌ಪಿಎನ್)–ಮೈಸೂರು ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದಿಂದ ಮೈಸೂರು–ಮಾನಂದವಾಡಿ ರಸ್ತೆಯ ಎಂ.ಎ.ಶ್ರೀನಿವಾಸನ್ ವೃತ್ತದವರೆಗೆ ಫುಟ್‌ಪಾತ್, ರಸ್ತೆ ಒತ್ತುವರಿ ತೆರವುಗೊಳಿಸುವಂತೆ ವಾಹನ ಸವಾರರು, ಪಾದಚಾರಿಗಳು, ಪಾಲಿಕೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಕಳೆದ 40 ವರ್ಷಗಳಿಂದ ಈ ಸಮಸ್ಯೆಯಿದ್ದು, ಇಲ್ಲಿನ ವ್ಯಾಪಾರಿಗಳು ತಮ್ಮ ಅಂಗಡಿ ಮುಂಭಾಗದ ಫುಟ್‌ಪಾತ್, ರಸ್ತೆಯನ್ನು ಆಕ್ರಮಿಸಿ ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಈ ರಸ್ತೆಯಲ್ಲಿ ಹೆಚ್.ಡಿ.ಕೋಟೆ, ಮಾನಂದವಾಡಿ, ಅಂತರಸಂತೆ, ಸರಗೂರು ಇತರೆ ಪ್ರದೇಶಗಳಿಗೆ ಓಡಾಡುವ ಸಾರಿಗೆ ಬಸ್ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ಅಲ್ಲದೆ, ಎಂ.ಎ.ಶ್ರೀನಿವಾಸನ್ ವೃತ್ತದಲ್ಲಿರುವ ಸೇಠ್ ಮೋಹನ್ ದಾಸ್ ತುಳಸಿದಾಸ್ ಮಕ್ಕಳ ಹೆರಿಗೆ ಆಸ್ಪತ್ರೆಗೆ ಬರುವ ಆಂಬುಲೆನ್ಸ್‌ಗಳು ಸರಾಗವಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ ಎಂದು ಪಾದಚಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಸರ್ಕಲ್ ಸುತ್ತುವರೆದ ಬೀದಿಬದಿ ವ್ಯಾಪಾರಿಗಳು: ಮೈಸೂರು–ಮಾನಂದವಾಡಿ ರಸ್ತೆಯ ನಂಜುಮಳಿಗೆ ವೃತ್ತ(ಕನಕದಾಸ ವೃತ್ತ) ಹಾಗೂ ಎಂ.ಎ.ಶ್ರೀನಿವಾಸನ್ ವೃತ್ತದವರೆಗೆ ಎರಡೂ ಬದಿ ಅಂಗಡಿ ಮಾಲೀಕರು ಫುಟ್‌ಪಾತ್, ರಸ್ತೆಯನ್ನು ಒತ್ತುವರಿ ಮಾಡಿ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲದೆ, ಎಂ.ಎ.ಶ್ರೀನಿವಾಸನ್ ವೃತ್ತದಲ್ಲಿ (ನಾದಬ್ರಹ್ಮ ಸಭಾಂಗಣದ ಎದುರು) ತರಕಾರಿ ವ್ಯಾಪಾರಿಗಳು ತಮ್ಮ ಗಾಡಿ ಮೂಲಕ ವೃತ್ತವನ್ನು ಸಂಪೂರ್ಣ ಸುತ್ತುವರೆದಿದ್ದಾರೆ. ಇಲ್ಲಿ ಸದಾ ಟ್ರಾಫಿಕ್ ಜಾಮ್ ಆಗುತ್ತಿದ್ದರೂ ಸಂಚಾರ ಪೊಲೀಸರು ಇತ್ತ ತಿರುಗಿಯೂ ನೋಡುತ್ತಿಲ್ಲ ಎಂದು ಪಾದಚಾರಿಗಳು ತಮ್ಮ ಅಳಲು ತೋಡಿಕೊಂಡರು.

ಯಾರ ಮಾತಿಗೂ ಕ್ಯಾರೆ ಎನ್ನದ ವರ್ತಕರು: ನಂಜುಮಳಿಗೆ ವೃತ್ತದಲ್ಲಿ ಕೆಲ ವರ್ತಕರು ಹಲವು ವರ್ಷಗಳಿಂದ ಅಂಗಡಿಗಳನ್ನು ಬಾಡಿಗೆಗೆ ಪಡೆದು ವ್ಯಾಪಾರ ಮಾಡುತ್ತಿದ್ದಾರೆ. ಈ ಕಟ್ಟಡ ಈಗ ಬೀಳುವ ಹಂತ ತಲುಪುತ್ತಿದ್ದರೂ ಇಲ್ಲಿನ ವರ್ತಕರು ಆ ಜಾಗವನ್ನು ಖಾಲಿ ಮಾಡುತ್ತಿಲ್ಲ. ಇದರಲ್ಲಿ ಕೆಲವರು ಮಾಲೀಕರ ವಿರುದ್ಧವೇ ಈ ಕಟ್ಟಡ ಜಾಗ ನಮಗೆ ಸೇರಬೇಕೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಸದರಿ ಸಮಸ್ಯೆ ಬಗೆಹರಿಸಲು ಈ ಭಾಗದ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಸಂಸದ ಯದುವೀರ್ ಒಡೆಯರ್ ನೇತೃತ್ವದಲ್ಲಿ ಖುದ್ದು ವರ್ತಕರ ಸಭೆ ನಡೆಸಿ ಫುಟ್‌ಪಾತ್ ಅತಿಕ್ರಮಿಸದಂತೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಾಹಿತಿ ನೀಡಿದರು.

ಆಸ್ಪತ್ರೆಗೆ ತೆರಳಲು ಹರಸಾಹಸ: ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಇಲ್ಲಿನ ಸಮಸ್ಯೆಗಳನ್ನು ಕೇಳಲು ಬಂದಾಗ ಜಾಗ ಖಾಲಿ ಮಾಡಲು ಈಗ–ಆಗ ಎನ್ನುವ ವ್ಯಾಪಾರಿಗಳು, ಅತ್ತ ತೆರಳಿದ ಮೇಲೆ ಮತ್ತೆ ಯಥಾಸ್ಥಿತಿ ಇರುತ್ತದೆ. ಇವರು ಯಾರ ಮಾತಿಗೂ ಬೆಲೆ ನೀಡದೇ, ರಾಜಾರೋಷವಾಗಿ ಫುಟ್‌ಪಾತ್, ರಸ್ತೆ ಒತ್ತುವರಿ ಮಾಡಿ ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ನೋಡಿಯೂ ನೋಡದಂತಿರುವ ಅಧಿಕಾರಿಗಳು ಈ ಮಾರ್ಗದಲ್ಲಿ ಓಡಾಡುವುದು ವಿಶೇಷ. ಅಲ್ಲದೆ, ಹೆಚ್.ಡಿ.ಕೋಟೆ ಮಾರ್ಗದಲ್ಲಿ ಬರುವ ಗ್ರಾಮಗಳಿಂದ ಗಂಭೀರ ಖಾಯಿಲೆಗಳಿಂದ ಬಳಲುವವರು ಜೆಎಸ್‌ಎಸ್ ಆಸ್ಪತ್ರೆ, ಸರ್ಕಾರಿ ಮಕ್ಕಳ ಹೆರಿಗೆ ಆಸ್ಪತ್ರೆಗೆ ತೆರಳಲು ರೋಗಿಗಳ ಪಾಡು ಹೇಳತೀರದು ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರು–ಮಾನಂದವಾಡಿ ರಸ್ತೆಯ ಎಂ.ಎ.ಶ್ರೀನಿವಾಸನ್ ವೃತ್ತದಲ್ಲಿ ವಾಹನಗಳ ಸಂಚಾರ ದಟ್ಟಣೆಯಿಂದ ಟ್ರಾಫಿಕ್ ಜಾಮ್ ಆಗಿರುವುದನ್ನು ಕಾಣಬಹುದು.

> “ನೂರೊಂದು ಗಣಪತಿ ದೇವಸ್ಥಾನದಿಂದ ಎಂ.ಎ.ಶ್ರೀನಿವಾಸನ್ ವೃತ್ತದವರೆಗೆ ರಸ್ತೆ, ಫುಟ್‌ಪಾತ್ ಒತ್ತುವರಿಯಾಗಿದೆ. ಇದನ್ನು ತೆರವುಗೊಳಿಸಲು ತಯಾರಿ ನಡೆಸಿದಾಗ ಹಲವು ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿವೆ. ನಾನು ಈ ಸಮಸ್ಯೆ ಬಗೆಹರಿಸಲು ಹಲವು ಬಾರಿ ಪ್ರಯತ್ನಪಟ್ಟರೂ ಸಾಧ್ಯವಾಗಿಲ್ಲ. ಈ ಜಾಗದಲ್ಲಿ ವಾಹನ ಸವಾರರಿಗೆ, ಪಾದಚಾರಿಗಳಿಗೆ ಹಾಗೂ ಗ್ರಾಮೀಣ ಪ್ರದೇಶಗಳಿಂದ ಬರುವ ಜನರಿಗೆ ಅನಾನುಕೂಲವಾಗುತ್ತಿರುವುದು ಸತ್ಯ. ಆದರೆ, ವಿಧಿಯಿಲ್ಲ ಅನುಭವಿಸಲೇಬೇಕು. ಫುಟ್‌ಪಾತ್ ತೆರವುಗೊಳಿಸಲು ಮುಂದಾದರೆ ಅವರ ವ್ಯಾಪಾರ ಜೀವನ ಪ್ರಶ್ನೆ ಎದುರಾಗುತ್ತದೆ.
>
> 
>
> – ಟಿ.ಎಸ್.ಶ್ರೀವತ್ಸ, ಶಾಸಕರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ

ಪೌರಕಾರ್ಮಿಕರು ಮಕ್ಕಳ ಶಿಕ್ಷಣವಂತರನ್ನಾಗಿಸಿ



ಪೌರಕಾರ್ಮಿಕರ ಮಕ್ಕಳಿಗೆ ಓದುವ ಸಾಮಗ್ರಿಗಳನ್ನು ವಿತರಿಸಲಾಯಿತು.

ಮೈಸೂರು,ಜೂ.19– ಪೌರಕಾರ್ಮಿಕರು ತಮ್ಮ ವೃತ್ತಿಯನ್ನು ಮಕ್ಕಳು ಅನುಸರಿಸುವಂತೆ ಮಾಡದೇ ಅವರಿಗೆ ಉತ್ತಮ ಶಿಕ್ಷಣ ಕೊಡಿಸಿ, ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಆರೋಗ್ಯ ಅಧಿಕಾರಿ ಶಿವಪ್ರಸಾದ್ ಸಲಹೆ ನೀಡಿದರು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಶ್ರೀ ಚಾಮುಂಡೇಶ್ವರಿ ಕಾರು ಮಾಲೀಕರು ಮತ್ತು ಚಾಲಕರ ಸಂಘ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧಿಕಾರಿ ವರ್ಗ ಹಾಗೂ ನೌಕರರ ವರ್ಗ, ಶ್ರೀ ಚಾಮುಂಡಿ ಬೆಟ್ಟದ ಬಳಗ ಹಾಗೂ ಸಂಜೆಯ ಗೆಳೆಯರ ಬಳಗ, ಮೈಸೂರಿನ ನಾನಾ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಸ್ನೇಹಿತರ ಬಳಗ ಹಾಗೂ ರವಿ ಸ್ನೇಹಬಳಗದ ಸಹಯೋಗದೊಂದಿಗೆ ಪೌರಕಾರ್ಮಿಕರ ಮಕ್ಕಳಿಗೆ ಓದುವ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಅವರು, ನಗರ ಸ್ವಚ್ಛವಾಗಿರುವುದಕ್ಕೆ ಪೌರಕಾರ್ಮಿಕರ ಶ್ರಮವೇ ಕಾರಣ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಎಂದು ಸಲಹೆ ಮಾಡಿದರು.

ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಾರು ಚಾಲಕರ ಮಾಲೀಕರ ಒಕ್ಕೂಟದ ಅಧ್ಯಕ್ಷ ರವಿ, ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಜತ್ತಿ ಪ್ರಸಾದ್, ನಿವೃತ್ತ ಶಿಕ್ಷಕರಾದ ಮಹದೇವಸ್ವಾಮಿ ಇನ್ನಿತರರು ಈ ವೇಳೆ ಹಾಜರಿದ್ದರು.

ನಾಳೆ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೈಸೂರಲ್ಲಿ ಗೃಹ ಕಾರ್ಮಿಕರ ಪ್ರತಿಭಟನೆ

ಮೈಸೂರು, ಜೂ.19(ಜಿಎ)–ಗೃಹ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಜೂ.21ರಂದು ಮೈಸೂರಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಅಖಿಲ ಕರ್ನಾಟಕ ಗೃಹ ಕಾರ್ಮಿಕರ ವೃತ್ತಿ ಸಂಘಟನೆ ಜಿಲ್ಲಾಧ್ಯಕ್ಷೆ ಲಲಿತಮ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶದಂತೆ ತಮಗೂ ಕನಿಷ್ಠ ವೇತನ ನೀಡಬೇಕು. ಆದರೆ ಯಾರೂ ಈ ಆದೇಶವನ್ನು ಪಾಲಿಸುತ್ತಿಲ್ಲ. ಹಲವಾರು ಕಡೆಗಳಲ್ಲಿ ಗೃಹ ಕಾರ್ಮಿಕರಿಗೆ ಲೈಂಗಿಕ ಕಿರುಕುಳ ನೀಡಲಾಗುತ್ತಿದೆ. ಇದರ ವಿರುದ್ಧ ದೂರು ನೀಡಲು ಯಾವುದೇ ಸಹಾಯವಾಣಿ ಇಲ್ಲ. ಸಹಾಯವಾಣಿ ಕೇಂದ್ರವನ್ನು ಆರಂಭಿಸಿದರೆ, ಗೃಹ ಕಾರ್ಮಿಕರು ಧೈರ್ಯದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಎಸ್‌ಐ ಯೋಜನೆ ಜಾರಿಗೊಳಿಸಬೇಕು, ಪಿಎಫ್, ಪಿಂಚಣಿ ನೀಡಬೇಕಿದೆ. ಈ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ದೊರಕಿಸಿಕೊಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದರು.

ಜೀವನಾಧಾರಿತ ಕೂಲಿ ಕೈಗೆಟುಕುವ ಮಟ್ಟದಲ್ಲಿ ನಿಗದಿಗೊಳಿಸಬೇಕು. ಜಾತಿ ತಾರತಮ್ಯ ಬಿಡಬೇಕು. ಕೆಲಸಗಾರ ಎಂದು ಗುರುತಿಸಬೇಕು. ವಾರ್ಷಿಕ ಬೋನಸ್ ನೀಡಬೇಕು. ವಲಸೆ ಕಾರ್ಮಿಕರನ್ನು ಗುರುತಿಸಿ ಅವರು ತಮ್ಮ ಅಪ್ರಾಪ್ತ ಮಕ್ಕಳನ್ನು ಮನೆ ಕೆಲಸಕ್ಕೆ ಕಳಿಸದಂತೆ ತಡೆಯೊಡ್ಡಬೇಕು, ಪಿಂಚಣಿ ನೀಡಬೇಕು, ವೇತನ ಸಹಿತ ರಜೆ ಸೌಲಭ್ಯ ದೊರಕಿಸಬೇಕು ಎಂದು ವಿವಿಧ ಬೇಡಿಕೆಗಳ ಮನವಿಯನ್ನು ಅಂದು ಬೆಳಗ್ಗೆ 11 ಗಂಟೆಗೆ ಚಾಮುಂಡಿವಿಹಾರ್ ಕ್ರೀಡಾಂಗಣದಿಂದ ಮೆರವಣಿಗೆ ಬಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಶಾರಾಣಿ, ಮಾಲಾಶ್ರೀ, ನಾಗಮ್ಮ, ಕೋಕಿಲಾ, ಕಾಮಾಕ್ಷಿ ಉಪಸ್ಥಿತರಿದ್ದರು.

ನೇಣು ಬಿಗಿದುಕೊಂಡು ಉದ್ಯಮಿ ಆತ್ಮಹತ್ಯೆ

ಮೈಸೂರು, ಜೂ.19(ಆರ್‌ಕೆ)–ಅನಾರೋಗ್ಯದಿಂದ ಬಳಲುತ್ತಿದ್ದ ಕೈಗಾರಿಕೋದ್ಯಮಿ ತಮ್ಮ ಕಾರ್ಖಾನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಜೂನ್ 16ರಂದು ಮುಂಜಾನೆ ಸಂಭವಿಸಿದೆ. ಮೈಸೂರಿನ ವಿವಿ ಮೊಹಲ್ಲಾದ ಅಪಾರ್ಟ್‌ಮೆಂಟ್‌ವೊಂದರ ನಿವಾಸಿ ಅರ್ಜುನ(40) ನೇಣಿಗೆ ಶರಣಾದವರು. ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಎಸ್‌ಎಸ್ ಇಂಡಸ್ಟ್ರೀಸ್ ನಡೆಸುತ್ತಿದ್ದ ಅರ್ಜುನ ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದು, ಆಗಾಗ್ಗೆ ಮೂರ್ಛೆ ಹೋಗುತ್ತಿದ್ದರು ಎಂದು ಹೇಳಲಾಗಿದೆ.

ಅಲ್ಲದೇ ಕಳೆದ 6 ತಿಂಗಳಿಂದ ಕಾರ್ಖಾನೆಯಲ್ಲೂ ಉತ್ಪನ್ನಗಳ ಮಾರಾಟವೂ ಕಡಿಮೆಯಾಗಿದ್ದರಿಂದ ಬೇಸತ್ತ ಅರ್ಜುನ, ಜೂನ್ 16ರಂದು ಮುಂಜಾನೆ ಮನೆಯಿಂದ ಹೋಗಿ ಕಾರ್ಖಾನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳು ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಿಎಂ, ಡಿಸಿಎಂ ಯಾಕೆ ರಾಜೀನಾಮೆ ನೀಡಬೇಕು

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಯಾವ ಕಾರಣಕ್ಕೆ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ನಾಯಕರನ್ನು ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್ ಪ್ರಶ್ನಿಸಿದ್ದಾರೆ.



ಎನ್.ಭಾಸ್ಕರ್

ಬಿಜೆಪಿ ಚರಿತ್ರೆಯನ್ನು ಅವಲೋಕಿಸಿದರೆ ಹೆಣದ ಮೇಲೆ ರಾಜಕೀಯ ಮಾಡುತ್ತ ಬಂದಿರುವುದನ್ನು ಅರಿಯಬಹುದು. ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಗೆ ಅವಕಾಶ ನೀಡುವಂತೆ ಪತ್ರ ಬರೆದು ಸರ್ಕಾರವನ್ನು ಒತ್ತಾಯಿಸಿದ್ದ ಬಿಜೆಪಿ ನಾಯಕರು, ಈಗ ಸರ್ಕಾರವನ್ನೇ ದೂಷಣೆ ಮಾಡುತ್ತಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಡಿಲೀಟ್ ಮಾಡಿರುವ ಪತ್ರವನ್ನು ಬಹಿರಂಗಪಡಿಸಬೇಕೆ? ಎಂದು ತಿಳಿಸಿದ್ದಾರೆ.

ಕುಂಭಮೇಳ ಕಾಲ್ತುಳಿತದಲ್ಲಿ ನೂರಾರು ಜನರು ಪ್ರಾಣ ಕಳೆದುಕೊಂಡರು. ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಏಕೆ ರಾಜೀನಾಮೆ ಕೊಡಲಿಲ್ಲ. ಪುಲ್ವಾಮಾ ದಾಳಿಯಿಂದ ವೀರ ಯೋಧರನ್ನು ಕಳೆದುಕೊಂಡೆವು. ಪಹಲ್ಗಾವ್‌ನಲ್ಲಿ ಭಯೋತ್ಪಾದಕರ ಗುಂಡಿಗೆ ಪ್ರವಾಸಿಗರು ಬಲಿಯಾದರು. ಯಾರಾದರೂ ಹೊಣೆ ಹೊತ್ತು ರಾಜೀನಾಮೆ ಕೊಟ್ಟರೇ. ಇದಕ್ಕೆಲ್ಲಾ ಬಿಜೆಪಿ ನಾಯಕರು ಉತ್ತರಿಸಬೇಕು ಎಂದು ಎನ್.ಭಾಸ್ಕರ್ ಆಗ್ರಹಿಸಿದ್ದಾರೆ.

ಬಿಜೆಪಿ ನಾಯಕರು ಮೊದಲಿಂದಲೂ ದ್ವಂದ್ವ ನಿಲುವುಗಳಿಂದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಹೆಣದ ಮೇಲೆ ರಾಜಕೀಯ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ಜನಪರತೆ ಸಹಿಸದ ಬಿಜೆಪಿ ನಾಯಕರು ಕೀಳು ಮಟ್ಟದ ಟೀಕೆಗೆ ಮುಂದಾಗಿರುವುದು ಖಂಡನೀಯ. ಸಿಎಂ, ಡಿಸಿಎಂ ರಾಜೀನಾಮೆ ಕೇಳುವ ನೈತಿಕತೆ ಬಿಜೆಪಿ ನಾಯಕರಿಗೆ ಇಲ್ಲ ಎಂದು ತಿಳಿಸಿದ್ದಾರೆ.

ಆಗಸ್ಟ್‌ನಲ್ಲಿ 'ಕುಂಭಸಂಭವ' ಬಿಡುಗಡೆ

ಮೈಸೂರು, ಜೂ.19(ಜಿಎ)–ಮಿಲ್ಕಿ ಮೂನ್ ಮೂವೀಸ್ ಅಡಿಯಲ್ಲಿ ನಿರ್ಮಿಸಿರುವ 'ಕುಂಭ ಸಂಭವ' ಚಲನಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಆಗಸ್ಟ್ ಮೊದಲ ವಾರ ತೆರೆ ಕಾಣಲಿದೆ ಎಂದು ನಿರ್ದೇಶಕ ನಾಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಮಂಡ್ಯ ಜಿಲ್ಲೆಯಿಂದ ರಾಜ್ಯ ಮಟ್ಟದಲ್ಲಿ ಸುದ್ದಿಯಾದ ಭ್ರೂಣ ಹತ್ಯೆ ಪ್ರಕರಣ ಕುರಿತು ಚಿತ್ರದ ಕಥೆ ಮಾಡಲಾಗಿದೆ. ಚಿತ್ರದಲ್ಲಿ ಅಂದು ಮಾಧ್ಯಮಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸಿ ಸೂಕ್ಷ್ಮವಾಗಿ ಚಿತ್ರಕಥೆ ಮಾಡಲಾಗಿದ್ದು, ಮಂಡ್ಯ, ಮದ್ದೂರು ಭಾಗದಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದರು.

ಚಿತ್ರದ ಪ್ರಮುಖ ಭೂಮಿಕೆಯಲ್ಲಿ ಹಿರಿಯ ಕಲಾವಿದರಾದ ಶಂಕರ್ ಅಶ್ವತ್ಥ್, ಶಿವಾಜಿ ರಾವ್ ಜಾಧವ್ ಮೊದಲಾದವರು ನಟಿಸಿದ್ದಾರೆ. ಎರಡು ಹಾಡು, ನಾಲ್ಕು ಸಾಹಸ ದೃಶ್ಯಗಳಿವೆ. ಭೀಮಾ ಚಿತ್ರ ಖ್ಯಾತಿಯ ಪ್ರಿಯಾ ಈ ಚಿತ್ರದಲ್ಲಿಯೂ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಬಹುತೇಕ ಕೆಲಸಗಳು ಮುಗಿದಿದ್ದು, ಆಗಸ್ಟ್ ಮೊದಲ ವಾರದಲ್ಲಿ ತೆರೆಗೆ ಬರುವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಗೋಷ್ಠಿಯಲ್ಲಿ ಕಲಾವಿದರಾದ ಶಂಕರ್ ಅಶ್ವತ್ಥ್, ಶಿವಾಜಿರಾವ್ ಜಾಧವ್, ಪ್ರಿಯಾ, ಶೋಭಿತಾ, ಮಧು, ಲಿಂಗರಾಜು, ಕಮಲ್, ನಾಗನಾಯಕ್ ಉಪಸ್ಥಿತರಿದ್ದರು.

ನಿಧನ

ಸುಬ್ರಹ್ಮಣ್ಯ ಭಟ್



ಮೈಸೂರು, ಜೂ.19–ಮೈಸೂರಿನ ಮಂಡಿಮೊಹಲ್ಲಾದ ಚಾಮಲ್ ಮಠ ರಸ್ತೆಯ ನಿವಾಸಿ ಸುಬ್ರಹ್ಮಣ್ಯ ಭಟ್ (65) ಬುಧವಾರ ನಿಧನರಾದರು. ಇವರು ಕಲ್ಯಾಣಗಿರಿಯ ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಅರ್ಚಕರಾಗಿದ್ದರು. ಮೃತರು ಪತ್ನಿ ರತ್ನಾವತಿ, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ವರ್ಗ ಅಗಲಿದ್ದಾರೆ. ಬುಧವಾರ ಸಂಜೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀನಿವಾಸ್



ಮೈಸೂರಿನ ಕನ್ನೇಗೌಡಕೊಪ್ಪಲಿನ ನಿವಾಸಿ ಮುದ್ದಮ್ಮನ ಮೂಗಪ್ಪ ಅವರ ಪುತ್ರ ಶ್ರೀನಿವಾಸ್ (50) ಹಾಲಿ ವಾಸವಿರುವ ಸರಸ್ವತಿಪುರಂನ ನಿವಾಸದಲ್ಲಿ ಇಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಲತಾ, ಮಕ್ಕಳಾದ ಹೇಮಂತ, ಅನಂತ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಕನ್ನೇಗೌಡಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು. ಮೃತರ ನಿಧನಕ್ಕೆ ಮಾಜಿ ಮೇಯರ್ ಆರ್.ಲಿಂಗಪ್ಪ, ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಎಂ.ಶ್ರೀನಿವಾಸ್‌ಕುಮಾರ್, ಎಲ್.ಭಾಸ್ಕರ್ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.06.2025 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಶಿಬಿರ, ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವಿಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಿನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ವೈಜ್ಞಾನಿಕ ಪ್ರಾಣಾಯಾಮ ಫೌಂಡೇಷನ್ ಟ್ರಸ್ಟ್, ಜೆಎಸ್‌ಎಸ್‌ಎಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಿಳಾ ಮಹಾವಿದ್ಯಾಲಯ :** ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ, ಯೋಗ ಪ್ರಾಣೋತ್ಸವ–2025, ಅಧ್ಯಕ್ಷತೆ : ಬೆಂಗಳೂರು ಕ್ಯಾನ್ಸರ್ ಕೇರ್ ಇಂಡಿಯಾ ನ್ಯೂರೋ ಸರ್ಜನ್ ಡಾ. ರಾಜಶೇಖರ್ ರೆಡ್ಡಿ ಪೊರೆಡ್ಡಿ, ಅತಿಥಿಗಳು : ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಮಹಾಮೇಧಾನಂದಜಿ, ಹಿರಿಯ ವೈದ್ಯಕೀಯ ಅಧಿಕಾರಿ ಡಾ. ಸೀತಾಲಕ್ಷ್ಮಿ, ಎಟಿಎಂಇ ಎಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ. ಎಲ್. ಬಸವರಾಜ್, ಸ್ಥಳ: ಜೆಎಸ್‌ಎಸ್‌ಎಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಮಹಿಳಾ ಮಹಾವಿದ್ಯಾಲಯ, ಮೇಟಗಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡು ಬರುವ ಹಸಿವಾಗದೆ ಇರುವುದು, ಅಜೀರ್ಣ, ಹೊಟ್ಟೆನೋವು, ಜಂತು ಹುಳುವಿನ ಬಾಧೆ, ರುಮಟೈಕ್ ಆರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಉತ್ತಮ ನಿದ್ರೆ ಅಭ್ಯಾಸ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ :** ಕವಿತಾ ರತ್ನ ಅವರ ಎವೆರಿ ಪೆಕ್ ಎ ರೈನ್‌ಬೋ ಕವನಗಳ ಸಂಗ್ರಹ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಡಾ. ಹೆಚ್.ಎಸ್. ಶಿವಣ್ಣ, ಉಪಸ್ಥಿತರು : ಶ್ರೀಮತಿ ಪ್ರೇಮಲತಾ ರತ್ನ, ಶ್ರೀಮತಿ ವಿಜಯಾ ಸಿಂಧುವಳ್ಳಿ, ಶ್ರೀಮತಿ ರತ್ನ ವಿಶ್ವನಾಥ್, ಪ್ರೊ. ಬಿ.ಎನ್. ಬಾಲಾಜಿ, ಡಾ. ಕೃಷ್ಣ ಮಳವಳ್ಳಿ, ಸ್ಥಳ:ಎ.ಸಿ. ದೇವೇಗೌಡ ಹಾಲ್, ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30 ರಿಂದ.

■ **ಜನಚೈತನ್ಯ ಫೌಂಡೇಷನ್ :**ಡಿಸ್ಕೋ, ಮೆಲೋಡಿ ಸಾಂಗ್ಸ್ ಮ್ಯೂಸಿಕಲ್ ಇವಿನಿಂಗ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 4.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ. ಎಂ.ಎನ್. ಚಿಕ್ಕಮಾಧು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ನಿತಿನ್ ರಾಜಾರಾಂಶಾಸ್ತ್ರೀ ಹಾಗೂ ಪಿ.ಎಸ್. ರಂಜನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು– ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿವಯೋಗ ಸಂದೇಶ–ಸುತ್ತೂರು ಮಹಾಸಂಸ್ಥಾನದ ಶ್ರೀ ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳಿಂದ, 8.50 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ ಶಿಶುಗಳಲ್ಲಿ ಶ್ರವಣಶಕ್ತಿ ತಪಾಸಣೆಯ ಅಗತ್ಯ ಮತ್ತು ಪರಿಹಾರ ಕುರಿತು ತಿಳಿಸಿಕೊಡಲಿದ್ದಾರೆ ಡಾ. ಅಜಿತ್ ಕುಮಾರ್ ಯು. ಮತ್ತು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ ಆರೋಗ್ಯ ರಕ್ಷಣೆ ಮತ್ತು ಹಠಯೋಗ ಕುರಿತು ಡಾ. ಟಿ.ಎನ್. ಮಂಜುನಾಥ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್.ಕೆ. ಪದ್ಮನಾಭ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು, ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಅಮೃತ ಯೋಜನೆ ಕುರಿತು ಮಾಹಿತಿ ಪತ್ರಕರ್ತರಾದ ಎಂ. ವಿನೋದ್ ಅವರಿಂದ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಹಾರಾಜಪುರಂ ಎಸ್. ರಾಮಚಂದ್ರನ್ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ವಿಶೇಷ ಚೇತನ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದಲ್ಲಿಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಜೆ.ಎಸ್.ಎಸ್. ವಿಶೇಷ ಚೇತನ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದ ಬಿ. ಇಲಂಗೋವನ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ ಹವಾಮಾನ ಮಿತ್ರ–ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಬೆಳೆ ಸಮೀಕ್ಷೆ, ಭಾಗವಹಿಸುತ್ತಾರೆ–ಜಂಟಿ ಕೃಷಿ ನಿರ್ದೇಶಕರಾದ ಶ್ರೀಮತಿ ಅಂಬರ್ ಫರೀದ್, ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 8.30 ಹಿಂದಿ ಚಿತ್ರಗೀತೆಗಳು, 9.30 ವಿಶೇಷ ಕಾರ್ಯಕ್ರಮ –ವಿಕಸಿತ ಭಾರತದ ಅಮೃತಕಾಲ ಸೇವೆ, ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ ಹನ್ನೊಂದು ವರ್ಷಗಳು, 10.00 ಜನಪದ ಸಂಗೀತ, 10.25 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗುಜರಾತ್ ಕಲಾ ಉತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀಮತಿ ಶಿಲ್ಪಾನಾಗ್, ಅಧ್ಯಕ್ಷತೆ : ಡಾ. ಸಂಜಯ್ ಜೋಷಿ, ಅತಿಥಿಗಳು : ಜವಳಿ ಅಭಿವೃದ್ಧಿ ಆಯುಕ್ತ ಡಾ. ಕೆ. ಜ್ಯೋತಿ, ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್, ಮುಖ್ಯ ಕಾರ್ಯಕಾರಿಣಿ ಅಧಿಕಾರಿ ಶ್ರೀಮತಿ ಕೆ. ಅನ್ನಪೂರ್ಣ, ಹೂಟಗಳ್ಳಿ ನಗರಸಭಾ ಕಾರ್ಯಾಲಯ ಆಯುಕ್ತ ಬಿ.ಎನ್. ಚಂದ್ರಶೇಖರ್, ಆರ್.ಎಸ್. ಶಾ, ವಿನೋದ್ ಕುಮಾರ್, ಡಾ. ಸ್ನೇಹಲ್ ಮಕ್ವಾನಾ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ರಿಂಗ್ ರಸ್ತೆ, ಸಂಜೆ 4 ರಿಂದ.

सत्यमेव जयते
Ministry of Ayush
Government of India

Yoga for One Earth, One Health

ಕ್ಷೇಮ ಹಾಗೂ ಏಕತೆಯ ಜಾಗತಿಕ ಅಲೆಯಲ್ಲಿ ನೀವೂ ಒಂದು ಭಾಗವಾಗಿ

ಯೋಗ 2025 ಅಂತಾರಾಷ್ಟ್ರೀಯ ದಿನಾಚರಣೆ

ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ, ಯೋಗ

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ

ಯೋಗ ಪ್ರದರ್ಶನಕ್ಕಾಗಿ **ವಿಶಾಖಪಟ್ಟಣಂನ** ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸಾವಿರಾರು ಉತ್ಸಾಹಿಗಳನ್ನು ಸೇರಿಕೊಳ್ಳುತ್ತಾರೆ

LIVE TELECAST on DD NEWS

21 ನೇ ಜೂನ್ | ಬೆಳಗ್ಗೆ 6 ಗಂಟೆ ಬಳಿಕ

ಭಾರತಾದ್ಯಂತ **8 ಲಕ್ಷಕ್ಕೂ ಅಧಿಕ** ಕಾರ್ಯಕ್ರಮಗಳು ಹಾಗೂ **175+ ದೇಶಗಳು** ಯೋಗ ಆಚರಿಸುತ್ತಿವೆ ಐಡಿವೈ 2025 ಜಗತ್ತಿನ ಪ್ರತಿ ಮೂಲೆಯಲ್ಲಿ ಪ್ರತಿಧ್ವನಿಸಲಿದೆ

ನೀವೂ ಸಮೀಪದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಿ ಮತ್ತು ನಿಮ್ಮ ಯೋಗ ಅನುಭವವನ್ನು ಹಂಚಿಕೊಳ್ಳಲು ಉಪಯೋಗಿಸಿ # ಐಡಿವೈ 2025

cbc 17201/13/0005/2526



moayush | ministryofayush | MinistryofAyushofficial

ನಕ್ಕರೆ ಅದೇ ಸ್ವರ್ಗ

ಗುಂಡ : ಪಕ್ಕದ ಮನೆಯಲ್ಲಿದ್ದ ಪಿಡಬ್ಲ್ಯುಡಿ ಅಧಿಕಾರಿ ಕೆಲಸ ಕಳೆದುಕೊಂಡ.
ತಿಮ್ಮ : ಹೌದಾ! ಏನ್ ಮಾಡಿದ್ನಂತೆ?
ಗುಂಡ : ಸುಳ್ಳು ಲೆಕ್ಕ ಬರೆದು ಸಿಕ್ಕಾಕ್ಕೊಂಡ್ನಂತೆ
ತಿಮ್ಮ : ಏನಂತ ಬರೆದಿದ್ನಂತೆ?
ಗುಂಡ : ರೋಡ್ ರೋಲರ್ ಪಂಚರ್ ಆಗಿದೆ
ಅಂತ ಲೆಕ್ಕದ ಪುಸ್ತಕದಲ್ಲಿ ಬರೆದಿದ್ನಂತೆ.

ಮೈಸೂರು ಮಿತ್ರ
ಶುಕ್ರವಾರ, 20 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸತ್ಯ ಬಯಲಿಗೆ ಬರೋವರೆಗೆ ಸುಳ್ಳಿನದೇ ಅಧಿಕಾರ... ನಿಜವನ್ನು ನಿರೂಪಿಸಲು ನಿರಂತರ ಪ್ರಯತ್ನ ಪಡಬೇಕು. ನೈಜ ವ್ಯಕ್ತಿತ್ವ ವ್ಯಕ್ತವಾಗಲು ಮುಖವಾಡ ಕಳಚುವವರೆಗೂ ಕಾಯಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಳಲಾರದವಳು ಬಾವಿಗೆ ಬಿದ್ದಳು... ನೀಸಲಾರದವಳು ನೀರಿಗೆ ಬಿದ್ದಳು...

ನಿಮ್ಮ ಪತ್ರಗಳು

ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿ ಎಸ್ಕಲೇಟರ್ ಅಳವಡಿಸಿ



ಮಾನ್ಯರೆ,

ಇದು, ಮೈಸೂರಿನ ಅಶೋಕಪುರಂ ರೈಲ್ವೇ ನಿಲ್ದಾಣ. ಇತ್ತೀಚೆಗೆ ಅತ್ಯಾಧುನಿಕ ವಿನ್ಯಾಸದಲ್ಲಿ ನಿರ್ಮಾಣಗೊಂಡಿದ್ದು, ಆರು ಫ್ಲಾಟ್ ಫಾರ್ಮ್‌ಗಳನ್ನು ಹೊಂದಿದೆ. ಈ ರೈಲು ನಿಲ್ದಾಣದಲ್ಲಿ ಎಸ್ಕಲೇಟರ್‌ನ ವ್ಯವಸ್ಥೆ ಇಲ್ಲದೇ 3 ರಿಂದ 6ನೇ ಫ್ಲಾಟ್ ಫಾರ್ಮ್‌ಗಳಿಗೆ ಹೋಗಲು ಮೆಟ್ಟಿಲುಗಳನ್ನು ಹತ್ತಿಕೊಂಡು ಹೋಗಬೇಕಾಗಿದೆ. ಹಿರಿಯ ನಾಗರಿಕರು, ವಯಸ್ಸಾದವರು, ವಿಶೇಷವಾಗಿ ದಿವ್ಯಾಂಗರು ಈ ಫ್ಲಾಟ್ ಫಾರ್ಮ್ ತಲುಪುವುದಾದರೂ ಹೇಗೆ? ಇದರ ಬಗ್ಗೆ ಕನಿಷ್ಠ ತಿಳುವಳಿಕೆಯಾದರೂ ರೈಲ್ವೆ ಇಂಜಿನಿಯರ್‌ಗಳಿಗೆ ಬೇಡವೇ. ಸಾರ್ವಜನಿಕರ ಉಪಯೋಗಕ್ಕೆ ಬಾರದ ಕೋಟಿಗಟ್ಟಲೇ ಹಣ ಖರ್ಚು ಮಾಡಿ ಹೊಸ ರೈಲ್ವೆ ನಿಲ್ದಾಣ ನಿರ್ಮಾಣ ಮಾಡಿರುವುದು ಕೇವಲ ಪ್ರಚಾರಕ್ಕಾಗಿಯೇ ಅಥವಾ ಅಲಂಕಾರಕ್ಕಾಗಿಯೇ? ಅಲ್ಲದೆ ಈ ರೈಲು ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಕನಿಷ್ಠ ಮೂಲ ಸೌಕರ್ಯವೂ ಇಲ್ಲ. ಆತುರಾತುರವಾಗಿ ಈ ರೈಲು ನಿಲ್ದಾಣ ಉದ್ಘಾಟನೆ ಮಾಡಿರುವುದು ಕೇವಲ ಪ್ರಚಾರಕ್ಕಾಗಿ ಎನಿಸುತ್ತದೆ. ರೈಲ್ವೇ ಹಿರಿಯ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ, ಈ ಕೂಡಲೇ ಅಗತ್ಯ ಇರುವ ಎಸ್ಕಲೇಟರ್ ಅಳವಡಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ವ್ಯವಸ್ಥೆ ಮಾಡಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಹಳೆಯ ಕಾಲದ ಲಾಂಛನ ಬದಲಿಸಿ

ಮಾನ್ಯರೆ,

ಮೈಸೂರು ಕಡೆಯಿಂದ ಹೆಚ್.ಡಿ. ಕೋಟೆಗೆ ಬರಬೇಕಾದರೆ ಒಂದು ಸರ್ಕಲ್ ಸಿಗುತ್ತದೆ. ಅದುವೆ HP ಸರ್ಕಲ್ (ಹ್ಯಾಂಡ್‌ಪೋಸ್ಟ್ ಸರ್ಕಲ್). ಈ ಸರ್ಕಲ್‌ನಿಂದ ಮಾನಂದವಾಡಿ, ಕೇರಳ ರಾಜ್ಯಕ್ಕೆ ಹಾಗೂ ಸಂತೆ ಸರಗೂರು, ಗುಂಡ್ಲುಪೇಟೆ, ಎಚ್.ಡಿ. ಕೋಟೆ, ಹುಣಸೂರು, ಹಾಸನ ಹಾಗೂ ಇತರೆ ಜಿಲ್ಲೆಗಳಿಗೆ ಹೋಗಬಹುದು. ಈ ಸರ್ಕಲ್ ಮಾರ್ಗವಾಗಿ ಕಬಿನಿ ಜಲಾಶಯ, ತಾರಕ ಜಲಾಶಯ, ನುಗು ಜಲಾಶಯ ಜಂಗಲ್ ಲಾಡ್ಜ್ ಹಾಗೂ ಇತರೆ ರೆಸಾರ್ಟ್‌ಗಳಿಗೂ ಹೋಗಬಹುದು. ಈ ಸರ್ಕಲ್‌ಗೆ ದಿನನಿತ್ಯ ವ್ಯಾಪಾರ–ವಹಿವಾಟಿಗೆ ಬಾರೀ ಸಂಖ್ಯೆಯಲ್ಲಿ ರೈತರು ಬರುತ್ತಾರೆ. ಭಾನುವಾರದಂದು ದನಗಳ ಸಂತೆ, ಇತರ ತರಕಾರಿಗಳ ಸಂತೆ ನಡೆಯುತ್ತದೆ. ಸರ್ಕಲ್‌ನ ನಾಲ್ಕು ದಿಕ್ಕುಗಳಲ್ಲಿ ಹಳೆಯ ಕಾಲದ ಸಿಂಹದ ಲಾಂಛನಗಳು ಇದ್ದವು. ಆದರೆ ರಸ್ತೆ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಈ ಸಿಂಹದ ಲಾಂಛನಗಳು ಹಾಳಾಗಿ ಹೋಗಿವೆ. ಈ ಸರ್ಕಲ್ ಮೂಲಕ ವಿವಿಧ ರಾಜ್ಯಗಳ ಪ್ರವಾಸಿಗರು ಹಾದು ಹೋಗುತ್ತಾರೆ. ಕಬಿನಿ ಜಲಾಶಯ ನೋಡಲು ಹಾಗೂ ವನಸರಿ ಸಂಪತ್ತು ನೋಡಲು ಪ್ರವಾಸಿಗರು ದಿನನಿತ್ಯ ಬರುತ್ತಾರೆ. ಸ್ವಲ್ಪ ದಿನಗಳ ಹಿಂದೆ ಉಪಮುಖ್ಯ ಮಂತ್ರಿ ಡಿಕೆ ಶಿವಕುಮಾರ್ ಬಂದು ಹೋಗಿದ್ದರು. ಈ ಸರ್ಕಲ್‌ಗೆ ಸಿಂಹದ ಲಾಂಛನಗಳು ಇದ್ದರೆ ಈ ಸರ್ಕಲ್‌ಗೆ ಒಂದು ಘನತೆ ಹಾಗೂ ಗೌರವ. ಹಾಗೆ ರಾತ್ರಿ ಸಮಯದಲ್ಲಿ ಇಲ್ಲಿರುವ ದೀಪಗಳು ಸರಿಯಾಗಿ ಬೆಳಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು, ಶಾಸಕರು ಈ ಸರ್ಕಲ್ ಅನ್ನು ಅಭಿವೃದ್ಧಿ ಪಡಿಸಿ ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಮನವಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ. ಕೋಟೆ ತಾ.

ಒಳಚರಂಡಿ ನೀರಿನ ದುರ್ವಾಸನೆ ತಪ್ಪಿಸಿ

ಮಾನ್ಯರೆ,



ಮೈಸೂರು ನಗರ ಪಾಲಿಕೆಯ 45ನೇ ವಾರ್ಡ್ ಶಾರದಾದೇವಿನಗರದಲ್ಲಿ ಒಳಚರಂಡಿ ನೀರು ಉಕ್ಕಿ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಇದರಿಂದಾಗಿ ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ಸೊಳ್ಳೆ, ವಿಷಜಂತುಗಳ ವಾಸಸ್ಥಾನವಾಗಿದ್ದು, ರೋಗ ರುಜಿನಗಳ ಭೀತಿಯಲ್ಲಿ ವಾಸಿಸುವಂತಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಪಾಲಿಕೆ ಸದಸ್ಯರು ಹಾಗೂ ಜನ ಪ್ರತಿನಿಧಿಗಳಿಗೆ ಹಲವಾರು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆ ಬಗೆಹರಿಸಿ ಇಲ್ಲಿನ ನಿವಾಸಿಗಳು ನೆಮ್ಮದಿಯಿಂದ ವಾಸಿಸುವಂತೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ನಿವಾಸಿಗಳು, ಶಾರದಾದೇವಿನಗರ, ಮೈಸೂರು.

ಯೋಗದ ಸಿರಿ ಬೆಳಕಲ್ಲಿ ಮೈಸೂರು



ಜೂನ್ 21, ಅಂತಾರಾಷ್ಟ್ರೀಯ ಯೋಗ ದಿನ. ತನ್ನಿಮಿತ್ತ ಈ ಲೇಖನ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮನಸ್ಸು ದೇಹ ಮತ್ತು ಆತ್ಮಗಳ ಆರೋಗ್ಯಕ್ಕೆ ಈಗ ಅನಿವಾರ್ಯವಾಗಿರುವ ಭಾರತದ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಚರಿಸಬೇಕು. ಜೂನ್ 21ನ್ನು 'ವಿಶ್ವ ಯೋಗ ದಿನ'ವನ್ನಾಗಿ ಘೋಷಿಸಬೇಕು...." ಇದು ನಮ್ಮ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ತಾವಷ್ಟೇ ಸ್ವಾಸ್ಥ್ಯದಿಂದಿದ್ದರೆ ಸಾಲದು. ಇಡೀ ವಿಶ್ವವೇ ಸ್ವಾಸ್ಥ್ಯದಿಂದ ಇರಬೇಕೆಂಬ ಸದಾಶಯದಿಂದ 2015 ರಂದು ನಡೆದ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ವಿಶ್ವಸಂಸ್ಥೆಯನ್ನು ಒತ್ತಾಯಿಸಿದ್ದರು. ಅವರ ಒತ್ತಾಯ ವ್ಯರ್ಥವಾಗಲಿಲ್ಲ. ವಿಶ್ವಸಂಸ್ಥೆ ಒಪ್ಪಿಕೊಂಡಿತು. ಅಷ್ಟೇ ಅಲ್ಲ, ಕೂಡಲೇ ಕಾರ್ಯೋನ್ಮುಖವೂ ಆಯಿತು.

ಇಂಥಾ ಯೋಗ ವಿದ್ಯೆ ಒಂದು ಕಾಲದಲ್ಲಿ ಇಡೀ ಭರತ ಭೂಮಿಯಲ್ಲಿ ಯೋಗಾ ಯೋಗವೆಂದು ಮೆರೆದರೂ ನಂತರದ ಕಾಲಘಟ್ಟಗಳಲ್ಲಿ ಅಂದರೆ ಕಳೆದ ಹಲವು ಶತಮಾನಗಳಿಂದ ಮಸುಕಾಗಿ ಹೋಗಿತ್ತು. ಆದರೆ ಭಾರತದ ಪ್ರಾಚೀನ ಯೋಗ ವಿದ್ಯೆಯ ಮಹಾಬೆಳಕು ಒಮ್ಮೆಗೇ ಪ್ರಜ್ವಲಿಸಿಕೊಂಡು ಮತ್ತೆ ಬಂದದ್ದು 2015 ಜೂನ್‌21 ರಂದು. ಅಂದು ಭಾರತವಷ್ಟೇ ಅಲ್ಲ, ಇಡೀ ವಿಶ್ವವೇ ಯೋಗಕ್ಕೆ ಜೈಕಾರ ಹಾಕಿದ್ದೇ ಹಾಕಿದ್ದು. ದೃಶ್ಯ ಮತ್ತು ಮುದ್ರಣ ಮಾಧ್ಯಮದಿಂದ ಹಿಡಿದು ಫೇಸ್ಬುಕ್, ಟ್ವಿಟರ್, ವಾಟ್ಸಪ್, ಇನ್ಸ್ಟಾಗ್ರಾಮ್ ನಂತಹ ಸಾಮಾಜಿಕ ಜಾಲತಾಣಗಳು ಸೇರಿದಂತೆ ಎಲ್ಲೆಲ್ಲೂ ಯೋಗವೇ! ಪ್ರಪಂಚ ಪೂರ್ತಿ ಯೋಗ ಮಹಿಮೆಯ ಸಮೂಹ ಸನ್ನಿಗೆ ಒಳಗಾಗಿತ್ತು. ಇದಕ್ಕೆ ಕಾರಣ ಆ ದಿನವನ್ನು ಪ್ರಧಾನಿ ಮೋದಿ ಅವರ ಸಲಹೆ ಮತ್ತು ಒತ್ತಾಯದ ಮೇರೆಗೆ ವಿಶ್ವಸಂಸ್ಥೆಯು 'ವಿಶ್ವ ಯೋಗ ದಿನ' ಎಂದು ಇಡೀ ಪ್ರಪಂಚವೇ ಆಚರಿಸಲು ಘೋಷಿಸಿತ್ತು.

ಭಾರತೀಯರು ಗರ್ವದಿಂದ ತಲೆಯೆತ್ತಿ ಎದೆಯುಬ್ಬಿಸಿ ತಮ್ಮ ಸನಾತನ ಪ್ರಾಚೀನ ಪರಂಪರೆಗೆ ಆಧುನಿಕ ಯುಗದಲ್ಲೂ ಎಂಥಾ ಮನ್ನಣೆ, ಎಂಥಾ ಗೌರವ ದೊರೆತಿದೆ ಎಂದು ಜಗತ್ತಿಗೆ ಸಾರಿ ಸಾರಿ ಹೇಳಿ ಹಿರಿಹಿರಿ ಹಿಗ್ಗಿದ ದಿನವದು. ಯೋಗದ ಮೂಲಕ ನಮ್ಮ ಭವ್ಯ ಭಾರತವು ವಿಶ್ವ ಗುರುವಾಗಿ ಭೂಮ್ಯಾಗಸದ ಉದ್ದಗಲಕ್ಕೂ ಯೋಗ ವಿದ್ಯೆಯ ಮಹಾ ಬೆಳಕನ್ನು ಶಾಶ್ವತವಾಗಿ ಹರಡಿ ಜಗಜ್ಯೋತಿಯಾಗಿದೆ ಎಂದು ಪ್ರತಿಯೊಬ್ಬ ಭಾರತೀಯನೂ 'ನಮ್ಮ ಭಾರತ ನಮ್ಮ ಹೆಮ್ಮೆ' ಎಂದು ಗರ್ವದಿಂದ ಹೇಳುವ ದಿನವಿದು. ಅದೇ 'ಅಂತಾರಾಷ್ಟ್ರೀಯ ಯೋಗ ದಿನ'

ನಮ್ಮ ಭಾರತದಲ್ಲಂತೂ ಕೇಂದ್ರ ಸರ್ಕಾರ ಯೋಗ ದಿನವನ್ನು ಆಚರಿಸಲು ಜನರಿಗೆ ಕರೆ ಕೊಟ್ಟಿದ್ದೇ ತಡ ಯೋಗವೆಂಬುದು ಪ್ರತಿಯೊಬ್ಬರ ಯೋಗವೇ ಆಗಿ ಹೋಯಿತು. ಹಳ್ಳಿಯಿಂದ ಹಿಡಿದು ದಿಲ್ಲಿಯ ತನಕ ಗುಡಿ–ಗುಡಿಸಲುಗಳು, ಶಾಲೆ–ಕಾಲೇಜುಗಳು, ಧಾರ್ಮಿಕ ಆಶ್ರಮ–ಅನಾಥಾಶ್ರಮಗಳು, ಕೆರೆ–ಕೆರೆ ಏರಿಗಳು, ಉದ್ಯಾನ – ಮೈದಾನಗಳು, ಪಾರ್ಕು–ಪಡಸಾಲೆಗಳು, ಕಟ್ಟೆ–ಅರಳಿ ಕಟ್ಟೆಗಳು ಹೀಗೆ ಇವೆಲ್ಲವೂ ಯೋಗ ಪಟುಗಳ ಆಸನಗಳಿಗೆ ತಾಣಗಳಾದವು. ಹಾಗೆಯೇ ಆಧುನಿಕತೆಗೆ ತಕ್ಕಂತೆ ತರಾವರಿ ಯೋಗ ಶಾಲೆಗಳು ಹುಟ್ಟಿಕೊಂಡವು.

ಜೂನ್ 21ರ ದಿನವೇ ಏಕೆ: ವಿಶೇಷವೆಂದರೆ ಜೂನ್ 21 ದಕ್ಷಿಣಾಯನ ದಿನ. ಈ ದಿನ ಹಗಲು ಬಹಳ ದೀರ್ಘವಾಗಿರುತ್ತದೆ. ಈ ದಿನದ ನಂತರ ಸೂರ್ಯ ದಕ್ಷಿಣದತ್ತ ಸಾಗಿ ಹಗಲಿನ ಅವಧಿ ಕಡಿಮೆಯಾಗುತ್ತಾ ಹೋಗಿ ಡಿಸೆಂಬರ್ 1ರ ಹೊತ್ತಿಗೆ ಉತ್ತರಾಯಣ ಗತಿ ತಲುಪುತ್ತದೆ. ಇದು ಅತ್ಯಂತ ದೀರ್ಘವಾದ ರಾತ್ರಿಯ ದಿನ. ಹಾಗಾಗಿ ದೀರ್ಘ ಹಗಲು ಎನ್ನುವ ಕಾರಣದಿಂದ ಜೂನ್ 21ನೇ ವಿಶ್ವ ಯೋಗ ದಿನ ಎಂದು ಘೋಷಿಸಬೇಕೆಂದು ಪ್ರಧಾನಿ ಮೋದಿ ಸಾರಥ್ಯದ ಭಾರತ ಸರ್ಕಾರ ವಿಶ್ವಸಂಸ್ಥೆಗೆ ಸಲಹೆಯೊಡನೆ ಮನವಿ ಮಾಡಿತ್ತು. ಇದರಲ್ಲಿ ಭಾರತ ಸಂಪೂರ್ಣ ಯಶಸ್ವಿಯೂ ಆದದ್ದು ಈಗ ಇತಿಹಾಸ.

ಯೋಗವೆಂದರೆ ಬಹಳ ಸರಳವಾಗಿ ಹೇಳುವುದಾದರೆ ಬರೀ ದೈಹಿಕ ಕಸರತ್ತಲ್ಲ. ಅಥವಾ ಕೇವಲ ಶಾರೀರಿಕ ವ್ಯಾಯಾಮವಲ್ಲ. ಅದು ಹೂವಂತೆ ಮನಸ್ಸನ್ನು ಅರಳಿಸುವ ಅನನ್ಯತೆಯ ಸಂಭ್ರಮದ

> ಮೈಸೂರು ಇಂದು ಯೋಗ ರಾಜಧಾನಿಯಾಗಿ ವಿಶ್ವದ ಎಲ್ಲಾ ರಾಷ್ಟ್ರಗಳ ಯೋಗಾಸಕ್ತರನ್ನು ಆಕರ್ಷಿಸಿ ಕೈಬೀಸಿ ಕರೆಯುತ್ತಿರುವುದಕ್ಕೆ ಬಹು ಮುಖ್ಯ ಕಾರಣ ಯೋಗರ್ಷಿ ಪತಂಜಲಿಯ ಯೋಗ ವಿದ್ಯೆಯನ್ನು ಸ್ವತ: ತಾವು ತಿಳಿದುಕೊಂಡು ಎಲ್ಲರಿಗೂ ಅದನ್ನು ಕಲಿಸಿ ಯೋಗದ ಮಹಿಮೆಯನ್ನು ಮೈಸೂರು ಮತ್ತು ಮೈಸೂರಿನಿಂದಾಚೆಗಿನ ಜಗತ್ತಿಗೆ ಸಾರಿದ ಯೋಗರಾಜ ತಿರುಮಲೆ ಕೃಷ್ಣಮಾಚಾರ್ಯರು. ಇಂದು ಮೈಸೂರಿನಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ನಾನಾ ದೇಶಗಳಲ್ಲಿ ಯೋಗವನ್ನು ಕಲಿಸುತ್ತಿರುವ ಗುರುಗಳು, ಕಲಿಯುತ್ತಿರುವ ಶಿಷ್ಯರೂ ಕೃಷ್ಣಮಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದ ಶಿಷ್ಯಕೋಟಿಯೇ ಆಗಿದ್ದಾರೆ. ಇಲ್ಲಿ ಪಾಶ್ಚಾತ್ಯ ಶಿಷ್ಯರ ಪಟ್ಟಿಯೂ ಬಹು ದೊಡ್ಡದಿದೆ.

ಸಾಧನ. ಯೋಗಾಸನಗಳಿಂದ, ಯೋಗ ಕಲಿಕೆಯಿಂದ ಬಾಹ್ಯ ಪ್ರಪಂಚವನ್ನು ನೋಡುವ ನಮ್ಮ ದೃಷ್ಟಿಕೋನ ಮಾತ್ರ ಬದಲಾಗುವುದಿಲ್ಲ. ಅಸಲಿಗೆ ನಮ್ಮೊಳಗೆ ನಾವೇ ಬದಲಾಗುತ್ತೇವೆ. ಹಾಗಾಗಿ ಆತ್ಮಶುದ್ಧಿಗಾಗಿ, ದೇಹ ಸ್ವಾಸ್ಥ್ಯಕ್ಕಾಗಿ, ಒಟ್ಟಾರೆ ಸಕಲ ಸ್ವಾಸ್ಥ್ಯಕ್ಕೂ ಯೋಗವೇ ಸಂಜೀವಿನಿ. ಇಂಥಾ ಯೋಗ ವಿದ್ಯೆಯ ಮೂಲಪುರುಷ ಯೋಗ ಪಿತಾಮಹ ಪತಂಜಲಿ ಮಹರ್ಷಿಗಳು ನಮ್ಮ ಭಾರತೀಯರೆಂಬುದೇ ಒಂದು ಹೆಗ್ಗಳಿಕೆ.

ಹಾಗೆಯೇ ಸಮಸ್ತ ಭಾರತೀಯರೆಲ್ಲರ ಹೆಚ್ಚುಗಾರಿಕೆ. ಜಗದಲ್ಲಿ ಇಂದು ಯೋಗ ಎಂದ ತಕ್ಷಣ ಇಡೀ ಜಗತ್ತು ಭಾರತದತ್ತ ತಿರುಗಿ ನೋಡುತ್ತದೆ. ಹಾಗೆಯೇ ಭಾರತದಲ್ಲಿ ಯೋಗದ ಹೆಸರನ್ನು ಹೇಳಿದರೆ ಸಾಕು ಇಡೀ ಭಾರತ ಮೈಸೂರು ನಗರದತ್ತ ಮುಖ ಮಾಡುತ್ತದೆ. ಏಕೆಂದರೆ ಬಹುಮುಖ್ಯವಾಗಿ ಯೋಗವಿದ್ಯೆಯ ಮೂಲನೆಲೆ ಮೈಸೂರು. ಒಂದು ರೀತಿ ಹಿನ್ನೆಲೆಗೆ ಸರಿದಿದ್ದ ಪ್ರಾಚೀನ ಭಾರತದ ಯೋಗವನ್ನು ಪುನಶ್ಚೇತನಗೊಳಿಸಿ ಅದನ್ನು ಮುನ್ನೆಲೆಗೆ ತಂದದ್ದೇ ಮೈಸೂರು. ಆದ್ದರಿಂದಲೇ 2022ನೇ ವರ್ಷದ ವಿಶ್ವ ಯೋಗ ದಿನಾಚರಣೆ ಮೈಸೂರಲ್ಲಿ ಅದೂ ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆಯ ಅಂಗಳದಲ್ಲಿ ನಮ್ಮ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಜರುಗಿದ್ದು ಅತ್ಯಂತ ಅರ್ಥಪೂರ್ಣ ಹಾಗೂ ಮಹತ್ವದ್ದಾಗಿ ಇಂದಿಗೂ ಅವಿಸ್ಮರಣೀಯವಾಗಿದೆ.

ಮೈಸೂರು ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ಶೈಕ್ಷಣಿಕ ನಗರಿ, ಸಾಹಿತ್ಯಕ ನಗರಿ, ಸ್ವಚ್ಛತಾ ನಗರಿ, ಚಾರಿತ್ರಿಕ ನಗರಿ ಹೇಗೋ ಹಾಗೆಯೇ ಮೈಸೂರು 'ಯೋಗ ನಗರಿ'ಯೂ ಹೌದು! ಅಷ್ಟೇ ಅಲ್ಲ, ಮೈಸೂರು ಸಾಂಸ್ಕೃತಿಕ ರಾಜಧಾನಿಯೂ ನಿಜ. ಯೋಗ ಮಹಿಮೆಯಿಂದ ಈಗ ಮೈಸೂರನ್ನು ಯೋಗ ರಾಜಧಾನಿ ಎಂದೂ ಕರೆಯಲಾಗುತ್ತಿದೆಯೆಂದರೆ ಯಾರಾದರೂ ಊಹಿಸಬಹುದು ಮೈಸೂರು ನಗರದ ಯೋಗ ವಿದ್ಯೆಯ ಶಕ್ತಿಯನ್ನು ಮತ್ತು ಅದು ವ್ಯಾಪಿಸಿಕೊಂಡಿರುವ ವಿಶಾಲ ವ್ಯಾಪ್ತಿಯನ್ನು. 'ಯೋಗ' ಎಂದ ತಕ್ಷಣ ಮೈಸೂರಿನ ಯೋಗ ವಿದ್ಯೆಯ ಚರಿತ್ರೆಯ ಚಕ್ರ ಸುಮಾರು ಎರಡು ಶತಮಾನಗಳ ಹಿಂದಕ್ಕೆ ಓಡುತ್ತದೆ. ಏಕೆಂದರೆ ಶತಮಾನಗಳ ಹಿಂದೆಯೇ ಆಚಾರ್ಯ ಪುರುಷರು, ಋಷಿ ಮುನಿಗಳು, ದಾರ್ಶನಿಕರು, ಯೋಗಾಚಾರ್ಯರು,ಯೋಗ ತಪಸ್ವಿಗಳು ಯೋಗದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಮೈಸೂರು ಸಂಸ್ಥಾನವನ್ನು ಆಳಿದ ಮಹಾರಾಜರುಗಳು ನಮ್ಮ ಪ್ರಾಚೀನ ಯೋಗ ವಿದ್ಯೆಗೆ ವಿಶೇಷವಾದ ಪ್ರೋತ್ಸಾಹ ನೀಡಿದ್ದರು. 1794ರಿಂದ 1868ರ ಅವಧಿಯಲ್ಲಿ ಮೈಸೂರಿನ ಮಹಾರಾಜರಾಗಿ ಆಳ್ವಿಕೆ ನಡೆಸಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಲೆ, ಸಾಹಿತ್ಯ, ನಾಟಕ, ನೃತ್ಯ, ಸಂಗೀತದಂತೆ ಯೋಗಕ್ಕೂ ಅಪಾರ ಪ್ರೋತ್ಸಾಹ ನೀಡಿದ್ದರು. ಸ್ವತಃ ಇವರೇ ಯೋಗಾಸನ ಮಾಡುತ್ತಿದ್ದು ವಿಶೇಷವಾಗಿ ಅವರು ಹಠಯೋಗದಲ್ಲಿ ಆಸಕ್ತರಾಗಿದ್ದು ಯೋಗ ಸಾಧಕರಾಗಿದ್ದರು. ಸ್ವತಃ ಅವರೇ ರಚಿಸಿ ಅವರ ಕಾಲದಲ್ಲಿ ಪ್ರಕಟಗೊಂಡ 'ಶ್ರೀತತ್ವ ನಿಧಿ' ಎನ್ನುವ ಕೃತಿ ಇದನ್ನು ಸಾಕ್ಷೀಕರಿಸುತ್ತದೆ. ಅವ‌ತ್ತಿನ ಕಾಲದಲ್ಲಿಯೇ 120ಕ್ಕೂ ಹೆಚ್ಚು ಯೋಗದ ಭಿನ್ನ ಆಸನಗಳನ್ನು ಒಳಗೊಂಡ ವಿವರಣಾತ್ಮಕ ಸಚಿತ್ರ ಕೃತಿ ಇದಾಗಿದೆ. ಮುಮ್ಮಡಿಯ ನಂತರ ಮುಂದೆ 1894ರಂದು ಪಟ್ಟಕ್ಕೆ ಬಂದು ಸುದೀರ್ಘ ಕಾಲ ರಾಜ್ಯಭಾರ ಮಾಡಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ಭಾಗದಲ್ಲಿ ಯೋಗ ಇನ್ನಷ್ಟು ಜನಪ್ರಿಯಗೊಂಡಿತು. ಯೋಗಾಸಕ್ತರ ಮತ್ತು ಯೋಗಪಟುಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿತು.

ಮೊದಲ ಯೋಗ ಶಾಲೆ ಆರಂಭ: ಯೋಗಗುರುಗಳಾದ ಶ್ರೀರಂಗ ಗುರುಗಳು, ಶ್ರೀದೇಶಿಕಾಚಾರ್ ಕೂಡ ಯೋಗವನ್ನು ಜನಪ್ರಿಯಗೊಳಿಸಿದವರ ಸಾಲಿನಲ್ಲಿ ನಿಲ್ಲುತ್ತಾರೆ. ಯೋಗ ಗುರುಗಳಾಗಿದ್ದ **ಟಿ. ಕೃಷ್ಣಮಾಚಾರ್ಯ** ಅವರು 1930ರ ವೇಳೆಗೆ ಮಹಾರಾಜರ ಆಶ್ರಯದೊಂದಿಗೆ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಮೊದಲಿಗೆ ಯೋಗ ಶಾಲೆ ಆರಂಭಿಸಿದ್ದರು. ನಂತರ ವಿವಿಧೆಡೆ ಯೋಗ ಶಾಲೆಗಳ ಪ್ರಾರಂಭಕ್ಕೆ ನಾಂದಿಯಾಡಿ ಯೋಗವನ್ನು ಮೈಸೂರು ನಗರದಿಂದ ಭಾರತದಾಚೆಗೂ ಆನಂತರ ಪ್ರಪಂಚದಾದ್ಯಂತ ಪಸರಿಸಲು ಕಾರಣರಾಗಿದ್ದಾರೆ. ಇವರ ಶಿಷ್ಯರಾಗಿ ಬೆಳೆದು ಬಂದ ಪಟ್ಟಾಭಿ ಜೋಯಿಸ್ ಹಾಗೂ ಬಿಕೆಎಸ್ ಅಯ್ಯಂಗಾರ್ ಈ ಪರಂಪರೆ ಮುಂದುವರಿಸಿದರು. ಅಷ್ಟಾಂಗ ಯೋಗದ ಮೂಲಕ ಪಟ್ಟಾಭಿಜೋಯಿಸ್ ಜನಪ್ರಿಯರಾದರೆ, ಬಿಕೆಎಸ್ ಅಯ್ಯಂಗಾರ್ ಕೆಲವು ಹಠ ಯೋಗಗಳ ಪಟ್ಟುಗಳನ್ನು ಪರಿಚಯಿಸಿದರು. ಪ್ರಾಚೀನ ಯೋಗಕ್ಕೆ ತಮ್ಮದೇ ಆದ ವಿನೂತನ ಆಸನಗಳನ್ನು ಆವಿಷ್ಕರಿಸಿ ನಾವಿನ್ಯ ಸ್ಪರ್ಶ ನೀಡಿದರು. ಈಗ ಪಟ್ಟಾಭಿಜೋಯಿಸ್ ಪುತ್ರಿ ಸರಸ್ವತಿ, ಮೊಮ್ಮಗ ಶರತ್ ಪಟ್ಟಾಭಿ ಯೋಗ ಮುಂದುವರಿಸಿದ್ದರೆ, ಬಿಕೆಎಸ್ ಅಯ್ಯಂಗಾರ್ ಅವರ ಮಕ್ಕಳಾದ ಗೀತಾ, ಪ್ರಶಾಂತ್, ಮೊಮ್ಮಕ್ಕಳಾದ ಅಭಿಜಿತ್ ಶ್ರೀಧರ್ ಹಾಗೂ ಹರಿತಾ ಶ್ರೀಧರ್ ಮತ್ತು ಶಿಷ್ಯರಾದ ರಾಘವೇಂದ್ರ ಪೈ, ಭರತ್‌ಶೆಟ್ಟಿ ಮುಂತಾದವರು ಅವರ ಯೋಗ ಪರಂಪರೆಯನ್ನು ಕಾಯ್ದುಕೊಂಡಿದ್ದಾರೆ. ಮೈಸೂರು ಮೂಲದಿಂದ ಯೋಗ ವಿದ್ಯೆಯನ್ನು ಜಗದ್ವಿಖ್ಯಾತಿ ಮಾಡಿದವರಲ್ಲಿ ಸಿಂಹಪಾಲು ಪಡೆದಿರುವ ಬಿಕೆಎಸ್ ಅಯ್ಯಂಗಾರ್ ಅವರು ಯೋಗ ಕುರಿತಂತೆ ಉಪಯುಕ್ತವಾದ ಅನೇಕ ಮೌಲಿಕ ಗ್ರಂಥಗಳನ್ನು ಬರೆದಿದ್ದಾರೆ. ಅವು ವಿಶ್ವದ ಅನೇಕ ಭಾಷೆಗಳಿಗೆ ಅನುವಾದಗೊಂಡು ಯೋಗದ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿವೆ.

ಯೋಗದ ಹೊಸ ಟ್ರೆಂಡ್: ಇದರೊಟ್ಟಿಗೆ ಕೆಲ ಯೋಗ ಸಂಸ್ಥೆಗಳು ತಮ್ಮದೇ ಆದ ತರಬೇತಿ ಕೇಂದ್ರಗಳನ್ನು ಹೊಂದಿದ್ದು, ಮೈಸೂರಿಗೆ ಯೋಗ ಅರಸಿ ಬರುವ ವಿದೇಶಿಯರಿಗೆ ಹಾಗೂ ದೇಶಿಯರಿಗೆ ಯೋಗ ಕಲಿಸುತ್ತಿವೆ. ಇವರೇ ವಿದೇಶಕ್ಕೆ ತೆರಳಿ ಯೋಗ ಹೇಳಿಕೊಟ್ಟು ಬರುವುದು ಇತ್ತೀಚಿನ ದಶಕದ ಹೊಸ ಟ್ರೆಂಡ್ ಆಗಿ ಪರಿವರ್ತನೆಯಾಗಿದೆ. ಭಾರತದ ಯೋಗ ವಿದ್ಯೆಗೆ ಮಾರುಹೋಗಿ ಇಲ್ಲಿಗೆ ಬರಲಾಗದ ಅದೆಷ್ಟೋ ಯೋಗಾಸಕ್ತರಿಗೆ ಇದೊಂದು ವರದಾನವಾಗಿದೆ. ಮೈಸೂರಿನಲ್ಲಿ ಯೋಗವನ್ನು ವಿದೇಶಿಯರಿಗೆ ಹೇಳಿಕೊಡುವ ಪರಂಪರೆಯಷ್ಟೇ ವಿದೇಶಗಳಿಗೆ ಹೋಗಿ ಸೇವಾ ಮನೋಭಾವದಿಂದ ಅಲ್ಲಿಯೇ ಯೋಗವಿದ್ಯೆ ಕಲಿಸಿ ಈಗಲೂ ಯೋಗವನ್ನು ಬೆಳೆಸುತ್ತಿರುವ ದೊಡ್ಡ ಪಡೆಯೇ ಮೈಸೂರಿನಲ್ಲಿ ಇದೆ. ಯಾವುದೇ ದೇಶ ಗಳಲ್ಲಾಗಲಿ ನಮ್ಮ ಯೋಗವನ್ನು ಕಲಿಯಲು ಬಯಸಿದರೆ ಸಾಕು ಅಲ್ಲಿಗೇ ಹೋಗಿ ಯೋಗ ಕಲಿಸಲು ನಮ್ಮ ಯೋಗ ಗುರುಗಳು ಸಿದ್ಧರಿರುತ್ತಾರೆ. ಪತಂಜಲಿ ಯೋಗ ಶಿಕ್ಷಣ ಸಮಿತಿಯಂತೂ ವಿವಿಧ ಬಡಾವಣೆಗಳಲ್ಲಿ ನೂರಾರು ಶಾಖೆಗಳನ್ನು ಆರಂಭಿಸಿ ಪ್ರತೀ ನಿತ್ಯ ಮೈಸೂರಿನಲ್ಲಿ ಯೋಗವನ್ನು ಉಚಿತವಾಗಿ ಹೇಳಿಕೊಡುತ್ತಿದೆ. ಈ ಸಮಿತಿಯ ಸಾವಿರಾರು ಮಂದಿ ನಿಸ್ವಾರ್ಥವಾಗಿಯೇ ಯೋಗ ಕೆಲಸ ಮಾಡುತ್ತಿದ್ದಾರೆಂದರೆ ಇವರಿಗಿರುವ ಅನನ್ಯವಾದ ಯೋಗ ಪ್ರೀತಿಯೇ ಇದಕ್ಕೆ ಕಾರಣವಾಗಿದೆ. ಇಂತಹ ಪ್ರೀತಿಯಿಂದಲೇ ಭಾರತ ಯೋಗದಲ್ಲಿ ವಿಶ್ವಗುರುವಾಗಿರುವುದು. ಇಲ್ಲಿ ಮೈಸೂರಿಗರ ಯೋಗ ಚಟುವಟಿಕೆಗಳದ್ದು ಬಹು ದೊಡ್ಡ ಪಾಲಿದೆ.

ಬಡಾವಣೆಗಳಲ್ಲಿ ಯೋಗ ಭಾಗ್ಯ: ಮೈಸೂರಿನ ಅನೇಕ ಬಡಾವಣೆಗಳು ಯೋಗ ಟೌನ್‌ಶಿಫ್‌ಗಳಂತಾಗಿವೆ. ಇದರಲ್ಲಿ ಗೋಕುಲಂ ಬಡಾವಣೆಯ ಹೆಸರು ಮೊದಲ ಸ್ಥಾನದಲ್ಲಿದೆ. ಒಂದು ಕಾಲಕ್ಕೆ ನಿವೃತ್ತರ ಸ್ವರ್ಗದಂತಿದ್ದ ಗೋಕುಲಂ ಬಡಾವಣೆ ಯೋಗದ ಚಟುವಟಿಕೆಗಳಿಂದಲೇ ಹೆಸರು ಮಾಡಿದೆ. ಇಲ್ಲಿ ಯೋಗ ಕಲಿಕೆಯ ವಿಭಿನ್ನ ಸ್ವರೂಪಗಳು ತಲೆ ಎತ್ತಿವೆ. ಹದಿನೈದಕ್ಕೂ ಹೆಚ್ಚು ಯೋಗ ಶಾಲೆಗಳು ಸ್ಥಾಪನೆಗೊಂಡಿವೆ. ಹಾಗೂ ಅವುಗಳನ್ನು ಹುಡುಕಿಕೊಂಡು ಬರುವ ವಿದೇಶಿಗರು, ಇವರಿಗೆ ಸೇವೆ ನೀಡುವ ಸಲುವಾಗಿ ಗೃಹೋದ್ಯಮ, ಹೊಟೇಲ್, ರೆಸ್ಟೋರೆಂಚ್, ಬಟ್ಟೆ ಅಂಗಡಿಗಳು, ಊಟದ ಮೆಸ್‌ಗಳು ಸೃಷ್ಟಿಗೊಂಡಿವೆ. ಇದೇ ರೀತಿ ಲಕ್ಷ್ಮೀಪುರಂ ಬಡಾವಣೆ ಕೂಡ ಯೋಗದ ಮತ್ತೊಂದು ಪ್ರದೇಶವಾಗಿ ರೂಪುಗೊಂಡಿದೆ. ವಿಜಯನಗರ, ಸಿದ್ಧಾರ್ಥನಗರ, ಚಾಮರಾಜಪುರಂ, ಸರಸ್ವತಿಪುರಂ, ಬೋಗಾದಿ, ಕುವೆಂಪುನಗರದಲ್ಲೂ ಇದೇ ಮಾದರಿ ಜನಪ್ರಿಯವಾಗಿದ್ದು, ಆಯುರ್ವೇದ ಆರೋಗ್ಯಧಾಮಗಳೊಂದಿಗೆ ಯೋಗ ತರಗತಿ ನಡೆಸುವ ಹೊಸ ಟ್ರೆಂಡ್ ಕೂಡ ಇದರೊಂದಿಗೆ ಸೇರಿಕೊಂಡಿದೆ. ಅಲ್ಲದೆ, ಪತಂಜಲಿ ಯೋಗ ಸಮಿತಿ, ಬಾಬಾ ರಾಮದೇವ್ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಸಿದ್ಧ ಸಮಾಧಿ ಯೋಗ, ಆರ್ಟ್ ಆಫ್ ಲಿವಿಂಗ್, ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಜಿ.ಎಸ್.ಎಸ್ ಯೋಗ ಸಂಸ್ಥೆ, ಮೈಸೂರು ಯೋಗ ಒಕ್ಕೂಟ, ಯೋಗ ಭಾರತ್, ಉಪನಿಷತ್ ಯೋಗ, ಇಶಾ ಫೌಂಡೇಶನ್, ಮೈಸೂರು ಜಿಲ್ಲಾ ಯೋಗ ಫೌಂಡೇಷನ್ ಸೇರಿದಂತೆ ಹಲವಾರು ಸಂಸ್ಥೆಗಳು ಯೋಗ –ಧ್ಯಾನ ಕಲಿಸುವ ಕೆಲಸ ಮಾಡುತ್ತಿವೆ. ಇವತ್ತಿಗೂ ಮೈಸೂರಿನಲ್ಲಿ ಪ್ರತಿದಿನ 20ರಿಂದ 25 ಸಾವಿರ ಮಂದಿ ಯೋಗ ಕಲಿಯುತ್ತಿರುವುದು ಯೋಗ ನಗರಿ ಮೈಸೂರಿನ ಹಿರಿಮೆಯಾಗಿದೆ.

ಯೋಗದ ಸಿರಿ ಬೆಳಕಿನಲ್ಲಿ: ಯೋಗವೆಂಬುದು ಭಾರತೀಯ ಜೀವನ ಪದ್ಧತಿ, ಆರೋಗ್ಯದ ಭಾಗ ಮತ್ತು ಭಾಗ್ಯ ಎಂದೆಲ್ಲಾ ಹೇಳಿಕೊಳ್ಳುತ್ತಿರುವ ನಡುವೆಯೇ ಯೋಗ ಬ್ರ್ಯಾಂಡ್ ಮೂಲಕ ಆರ್ಥಿಕ ಲಾಭವನ್ನು ವೃದ್ಧಿಸಿಕೊಳ್ಳುವ ಪ್ರಯತ್ನ ಒಂದು ಕಾಲದಲ್ಲಿ ಸಣ್ಣ ಹಂತದಲ್ಲಿ ನಡೆದಿತ್ತು. ಆದರೆ ಇಂದು ಇದು ದೊಡ್ಡದಾಗಿದ್ದು ಇಂಥ ಪ್ರಯತ್ನಕ್ಕೆ ಕೊಡುಗೆ ನೀಡಿದ ನಗರಿ ಮೈಸೂರು. ಏಕೆಂದರೆ ಜಗತ್ತಿನ ಹತ್ತಾರು ದೇಶಗಳಿಗೆ ಯೋಗವನ್ನು ಪರಿಚಯಿಸಿದ್ದರ ಹಿಂದೆ ಮೈಸೂರಿನದ್ದೇ ಸಿಂಹಪಾಲು. ಯೋಗ ಕಲಿಕೆಗೆ ಮತ್ತು ಯೋಗಾಭ್ಯಾಸಕ್ಕೆ ಮೈಸೂರು ಸೂಕ್ತ ಸ್ಥಳ. "ನೀವು ಭೇಟಿ ನೀಡಲೇ ಬೇಕಾದ ಜಗತ್ತಿನ ಅತ್ಯುತ್ತಮ 31 ತಾಣಗಳ ಪೈಕಿ ಮೈಸೂರು ಕೂಡ ಒಂದು. ಶಾಸ್ತ್ರೀಯವಾಗಿ ಯೋಗ ಕಲಿಯಬೇಕೆಂದರೆ, ಮೈಸೂರಿಗೆ ಖಂಡಿತ ಭೇಟಿ ನೀಡಲೇಬೇಕು..." ಎಂದು ನ್ಯೂಯಾರ್ಕ್ ಟೈಮ್ಸ್ ಬಹಳ ಹಿಂದೆಯೇ ಸಮೀಕ್ಷೆಯೊಂದನ್ನು ಆಧರಿಸಿ ಈ ರೀತಿ ಹೇಳಿರುವುದೇ ಇದಕ್ಕೆ ಪುರಾವೆಯಾಗಿದೆ. ಯೋಗದ ಸಿರಿ ಬೆಳಕಿನ ಮೈಸೂರಿನಲ್ಲಿ ಯೋಗವನ್ನು ಕಲಿಯುವುದೇ ಒಂದು ಯೋಗಾಯೋಗ.

ಕುಮಾರಸ್ವಾಮಿ ಸರ್ಕಾರಿ ಭೂಮಿ ಒತ್ತುವರಿ ಆರೋಪ

ಎಸ್‌ಐಟಿ ತನಿಖೆಗೆ ಹೈಕೋರ್ಟ್ ತಡೆ



ಬೆಂಗಳೂರು, ಜೂ.19(ಕೆಎಂಶಿ)–ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರ ರಚಿಸಿದ್ದ ಎಸ್‌ಐಟಿ ತನಿಖೆಗೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಬೆಂಗಳೂರು ದಕ್ಷಿಣ ಜಿಲ್ಲೆ ಬಿಡದಿಯ ಕೇತಗಾನಹಳ್ಳಿ ಬಳಿ ಕುಮಾರಸ್ವಾಮಿ ಮತ್ತು ಇತರರು 14 ಎಕರೆಗೂ ಹೆಚ್ಚು ಭೂಮಿ ಒತ್ತುವರಿ ಮಾಡಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಇದೇ ಮೊದಲ ಬಾರಿಗೆ ಭೂವಿವಾದಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚಿಸಿತ್ತು. ಇದನ್ನು ಪ್ರಶ್ನಿಸಿ ಕುಮಾರ ಸ್ವಾಮಿ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಇ.ಎಸ್. ಇಂದರೇಶ್, ಎಸ್‌ಐಟಿ ತನಿಖೆಗೆ ಮಧ್ಯಂತರ ತಡೆ ನೀಡಿದರು.

ಕುಮಾರಸ್ವಾಮಿ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಉದಯ್ ಹೊಳ್ಳ ಮತ್ತು ಎ.ವಿ.ನಿಶಾಂತ್, ಅಧಿಸೂಚನೆ ಹೊರಡಿಸದೆ ಸರ್ಕಾರ ಎಸ್‌ಐಟಿ ರಚಿಸಲಾಗಿದೆ. ಇದು ಕಾನೂನುಬಾಹಿರವಾಗಿದ್ದು ಅನೂರ್ಜಿತಗೊಳಿಸುವಂತೆ ಮನವಿ ಮಾಡಿದರು. ಹಿರಿಯ ಐಎಎಸ್ ಅಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ, ಭೂ ಕಂದಾಯ ಕಾಯಿದೆ 64 ಹಾಗೂ ಭೂಕಬಳಿಕೆ ನಿಷೇಧ ಕಾಯಿದೆ 2011ರ ಅಡಿ ವಿಶೇಷ ತನಿಖಾ ತಂಡ ರಚಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದ್ದರೂ, ಅಧಿಸೂಚನೆ ಹೊರಡಿಸಿರಲಿಲ್ಲ.

ಎಸ್‌ಐಟಿ ರಚನೆ ಆಗುತ್ತಿದ್ದಂತೆ ಸ್ಥಳೀಯ ತಹಸೀಲ್ದಾರ್, ಒತ್ತುವರಿ ಮಾಡಿರುವ ಆರು ಎಕರೆ ಸರ್ಕಾರಿ ಭೂಮಿ ತೆರವುಗೊಳಿಸುವಂತೆ ಕುಮಾರಸ್ವಾಮಿ ಅವರಿಗೆ ನೋಟಿಸ್ ನೀಡಿದ್ದರು. ನೋಟಿಸ್ ನೀಡಿದ ಬೆನ್ನಲ್ಲೇ ಕಂದಾಯ ಹಾಗೂ ಭೂಮಾಪನ ಇಲಾಖೆ ಕುಮಾರಸ್ವಾಮಿ ಮತ್ತು ಇತರರು ಅನುಭವಿಸುತ್ತಿರುವ ಭೂಮಿಯ ಪೂರ್ಣ ಅಳತೆ ಮಾಡಿ, ಅಮೂ ಸೇರಿದಂತೆ ಇತರರು 14 ಎಕರೆ ಭೂಮಿ ಒತ್ತುವರಿ ಮಾಡಿದ್ದಾರೆಂದು ಜಿಲ್ಲಾಧಿಕಾರಿಗೆ ವರದಿ ನೀಡಿದ್ದರು. ಇದರ ಆಧಾರದ ಮೇಲೆ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ನೇತೃತ್ವದಲ್ಲಿ ಒತ್ತುವರಿ ತೆರವಿಗೆ ಭೂಮಿ ಅಳತೆ ಮಾಡಿ ಗುರುತು ಮಾಡಲಾಗಿತ್ತು. ಈ ಎಲ್ಲಾ ಬೆಳವಣಿಗೆ ನಂತರ ನ್ಯಾಯಾಲಯದ ಮೊರೆ ಹೋಗಿದ್ದ ಕುಮಾರಸ್ವಾಮಿ ಪರವಾಗಿ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ನ್ಯಾಯಾಲಯಗಳಲ್ಲಿ ಎರಡು–ಮೂರು ಬಾರಿ ಆದೇಶ ನೀಡಲಾಗಿತ್ತು.

ಬೆಂಗಳೂರು ಹಾಲು ಒಕ್ಕೂಟದ ಅಧ್ಯಕ್ಷರಾಗಿ ಡಿ.ಕೆ.ಸುರೇಶ್ ಆಯ್ಕೆ



ಬೆಂಗಳೂರು, ಜೂ.19(ಕೆಎಂಶಿ)–ಬೆಂಗಳೂರು ಹಾಲು ಒಕ್ಕೂಟ (ಬಮೂಲ್)ದ ನೂತನ ಅಧ್ಯಕ್ಷರಾಗಿ ಮಾಜಿ ಸಂಸದ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಆಯ್ಕೆಯಾಗಿದ್ದಾರೆ. ಒಟ್ಟು 14 ನಿರ್ದೇಶಕರನ್ನು ಒಳಗೊಂಡ ಬಮೂಲ್‌ನಲ್ಲಿ 11 ಮಂದಿ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರಿದ್ದಾರೆ.

ನಿರ್ದೇಶಕರಾಗಿ ಅವಿರೋಧ ಆಯ್ಕೆಯಾಗಿದ್ದ ಡಿ.ಕೆ.ಸುರೇಶ್ ಬಮೂಲ್ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು.

ಬಮೂಲ್ ಅಧ್ಯಕ್ಷರಾಗಿ ಡಿ.ಕೆ.ಸುರೇಶ್ ಬಹುತೇಕ ಆಯ್ಕೆಯಾಗುವರೆಂದು ನಿರೀಕ್ಷಿಸಲಾಗಿತ್ತು. 2024ರ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಸೋತ ನಂತರ ಡಿ.ಕೆ.ಸುರೇಶ್ ರಾಜಕೀಯವಾಗಿ ಹಿನ್ನಡೆ ಅನುಭವಿಸಿದ್ದರು. ಇದೀಗ ಬಮೂಲ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಆಯ್ಕೆಗೊಂಡ ಸಂದರ್ಭದಲ್ಲಿ ಮಾತನಾಡಿದ ಅವರು, ರೈತರು ಹಾಗೂ ಸಂಸ್ಥೆ ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಭರವಸೆ ಉಳಿಸಿಕೊಳ್ಳುತ್ತೇನೆ. ರೈತರಿಗೆ ಅನುಕೂಲ ಮಾಡಿಕೊಡುತ್ತೇನೆ. ಹೈನುಗಾರಿಕೆ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡುತ್ತೇನೆ. ಸರ್ಕಾರದ ಜೊತೆ ಚರ್ಚಿಸಿ ರೈತರಿಗೆ ಅನುಕೂಲ ಮಾಡುತ್ತೇನೆ. ತಮ್ಮನ್ನು ಆಯ್ಕೆ ಮಾಡಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸಾಧನೆಗೆ ಛಲ, ಗುರಿ, ಆಸಕ್ತಿ ಇರಬೇಕು

ಯುಪಿಎಸ್‌ಸಿ, ಯುಪಿಇಎಸ್‌ಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದವರಿಗೆ ಅಭಿನಂದನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನವೋಪ್ರಮತಿ ನಾಗರಿಕ ಸೇವಾ ಶಾಲೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ-ಕೇಂದ್ರ ಸಶಸ್ತ್ರ ದಳದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಮೈಸೂರಿನ ನಿವಾಸಿ ಶ್ರೇಯಸ್ ಹಾಗೂ ಯುಪಿಎಸ್‌ಸಿ ಸಿವಿಲ್ ಪರೀಕ್ಷೆಯಲ್ಲಿ 812ನೇ ರ‍್ಯಾಂಕ್ ಪಡೆದಿರುವ ತನಕ ಡಿ.ಆನಂದ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.19(ಜಿಎ)– ಜೀವನದಲ್ಲಿ ಏನೇ ಸಾಧನೆ ಮಾಡಬೇಕಾದರೂ ಛಲ, ಗುರಿ ಹಾಗೂ ಆಸಕ್ತಿ ಇರಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನವೋಪ್ರಮತಿ ನಾಗರಿಕ ಸೇವಾ ಶಾಲೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ– ಕೇಂದ್ರ ಸಶಸ್ತ್ರ ದಳದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಮೈಸೂರಿನ ನಿವಾಸಿ ಶ್ರೇಯಸ್ ಹಾಗೂ ಯುಪಿಇಎಸ್‌ಸಿ ಸಿವಿಲ್ ಪರೀಕ್ಷೆಯಲ್ಲಿ 812ನೇ ರ‍್ಯಾಂಕ್ ಪಡೆದಿರುವ ತನಕ ಡಿ.ಆನಂದ್ ಅವರನ್ನು ಅಭಿನಂದಿಸಿ, ಅವರು ಮಾತನಾಡಿದರು.

> “ಯಾವುದೇ ಸಾಧನೆ ಮಾಡಿ. ಆದರೆ, ಗುರಿ ಮರೆಯಬೇಡಿ. ಗುರಿ ಇಲ್ಲದೆ ಛಲವಿದ್ದರೆ ಏನು ಪ್ರಯೋಜನವಿಲ್ಲ. ಆದ್ದರಿಂದ ಜೀವನದಲ್ಲಿ ಛಲ, ಗುರಿ, ಆಸಕ್ತಿ ರೂಢಿಸಿಕೊಳ್ಳಬೇಕು.
> –ವಿಷ್ಣುವರ್ಧನ್, ಎಸ್ಪಿ

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ರಾಕೆಟ್ ವಿಜ್ಞಾನವಲ್ಲ. ಉತ್ತೀರ್ಣ ಆಗಲೇಬೇಕು ಎಂಬ ಛಲ, ನಿರ್ದಿಷ್ಟ ಗುರಿ, ಆಸಕ್ತಿ ಇದ್ದರೆ ಸಾಧನೆ ಸಾಧ್ಯ. ಕೆಲವೊಮ್ಮೆ ಸೋಲಬಹುದು ಆದರೆ ಧೈರ್ಯ ಕಳೆದುಕೊಳ್ಳದೇ ನಿರಂತರ ಯತ್ನ ಮಾಡಿದರೆ ಗೆಲ್ಲಬಹುದು ಎಂದು ಹೇಳಿದರು.

ನೀವು ಐಎಎಸ್, ಐಪಿಎಸ್ ಸೇರಿದಂತೆ ಯಾವುದೇ ಉನ್ನತ ಸ್ಥಾನ ಪಡೆದು ಹಣ ಗಳಿಸಿದ ಬಳಿಕ ತಂದೆ ತಾಯಿಯರನ್ನು ಮರೆಯುವುದು ತಪ್ಪು, ನಾವು ಚಿಕ್ಕವರಾಗಿದ್ದಾಗ ಅವರು ನಮ್ಮನ್ನು ಹೇಗೆ ಸಹಿಸಿಕೊಂಡರು, ಅದೇ ರೀತಿ ನಾವು ಸಹ ಅವರನ್ನು ಮಕ್ಕಳಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ನಮೋ ಪ್ರಮತಿ ನಾಗರಿಕ ಸೇವಾ ಸಂಸ್ಥೆ ಮುಖ್ಯಸ್ಥ ಹೆಚ್.ವಿ.ರಾಜೀವ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ; ಒಬ್ಬರ ನಾಮಪತ್ರ ತಿರಸ್ಕೃತ

ಒಟ್ಟು 27 ಅಭ್ಯರ್ಥಿಗಳ 47 ನಾಮಪತ್ರ ಕ್ರಮಬದ್ಧ

ಮೈಸೂರು, ಜೂ.19(ಬಿಎಲ್‌ಯು)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಗೆ ಸಲ್ಲಿಸಿದ್ದ ನಾಮಪತ್ರಗಳಲ್ಲಿ ಒಬ್ಬರ ನಾಮಪತ್ರ ತಿರಸ್ಕೃತವಾಗಿದ್ದು, ಉಳಿದ 27 ಅಭ್ಯರ್ಥಿಗಳ 47 ನಾಮಪತ್ರ ಸಿಂಧುವಾಗಿದೆ.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಗೆ 28 ಮಂದಿ 48 ನಾಮಪತ್ರ ಸಲ್ಲಿಸಿದ್ದರು. ಉಪವಿಭಾಗಾಧಿಕಾರಿಗಳೂ ಆದ ಚುನಾವಣಾಧಿಕಾರಿ ಆಶಪ್ಪ, ಗುರುವಾರ ನಾಮಪತ್ರ ಪರಿಶೀಲನೆ ನಡೆಸಿದರು.

ಮೈಸೂರಿನ ಹೆಚ್.ಡಿ.ಕೋಟೆ ತಾಲೂಕು ಹೆಬ್ಬಲಗುಪ್ಪೆ ಕೃಷಿ ಪತ್ತಿನ ಸಹಕಾರ ಸಂಘದ ಶಿವಣ್ಣ ಅವರ ನಾಮಪತ್ರ ತಿರಸ್ಕೃತಗೊಂಡಿತು. ಹೆಬ್ಬಲಗುಪ್ಪೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 7 ನಿರ್ದೇಶಕರು ಸ್ವಇಚ್ಛೆಯಿಂದ ತಮ್ಮ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದ್ದರು.

ಇದರಿಂದ ಹುಣಸೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಿಶೇಷಾಧಿಕಾರಿ



ನೇಮಕ ಮಾಡಿದ್ದರು. ಈ ಸಂಘದ ಡೆಲಿಗೇಟ್ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಉಮೇದುವಾರರಾಗಲು, ಸೂಚಕರಾಗಲು ಮತ್ತು ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ ಎಂದು ಪರಿಗಣಿಸಲಾಯಿತು. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಆಶಪ್ಪ ಅವರು ಶಿವಣ್ಣ ಅವರ ನಾಮಪತ್ರವನ್ನು ತಿರಸ್ಕರಿಸಿದ್ದಾರೆ. ಹಾಗಾಗಿ ಈಗ 27 ಅಭ್ಯರ್ಥಿಗಳು ಕಣದಲ್ಲಿದ್ದು, ಅವರು ಸಲ್ಲಿಸಿದ್ದ 47 ನಾಮಪತ್ರಗಳು ಕ್ರಮಬದ್ಧವಾಗಿವೆ.

ನಾಮಪತ್ರ ವಾಪಸಿಗೆ ಇಂದು ಕಡೇ ದಿನ

ತೀವ್ರ ಹಣಾಹಣಿ ಏರ್ಪಟ್ಟಿರುವ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯ ನಾಮಪತ್ರ ವಾಪಸಿಗೆ ನಾಳೆ (ಜೂನ್ 20) ಕೊನೆ ದಿನವಾಗಿದೆ. ನಾಳೆ ಬೆಳಿಗ್ಗೆ 11 ಗಂಟೆಯಿಂದ 3 ಗಂಟೆವರೆಗೆ ನಾಮಪತ್ರ ವಾಪಸು ಪಡೆಯಲು ಕಾಲಾವಕಾಶ ನೀಡಲಾಗಿದೆ. ಈ ಪ್ರಕ್ರಿಯೆ ಮುಗಿದ ನಂತರ ಕಣದಲ್ಲಿ ಉಳಿಯುವ ಅಭ್ಯರ್ಥಿಗಳು ಯಾರೆಂಬುದು ಅಧಿಕೃತವಾಗಿ ತಿಳಿಯಲಿದೆ. ಘಟಾನುಘಟಿ ರಾಜಕಾರಣಿಗಳು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದು, ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಯಾರು ನಾಮಪತ್ರ ವಾಪಸು ಪಡೆಯುತ್ತಾರೆ ಎಂಬುದು ಕುತೂಹಲದ ಸಂಗತಿಯಾಗಿದೆ.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರಿಗೆ ಲಾಗೈಡ್‌ನಿಂದ ಗೌರವ ಸಮರ್ಪಣೆ



ಮೈಸೂರಿಗೆ ಆಗಮಿಸಿದ್ದ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರನ್ನು ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಬಳಗ ಹಾಗೂ ಮೈಸೂರು ಜಿಲ್ಲಾ ವಕೀಲರ ಸಂಘದ ವತಿಯಿಂದ ಮೈಸೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ಮೈಸೂರು ಪೇಟ ತೊಡಿಸಿ, ಹಾರ ಹಾಕಿ, ಶಾಲು ಹೊದಿಸಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಹಿರಿಯ ವಕೀಲರೂ ಆದ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಎಚ್.ಎನ್. ವೆಂಕಟೇಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಮಾಜಿ ಅಧ್ಯಕ್ಷ ಬಿ.ವಿ.ರಾಮಮೂರ್ತಿ ಸೇರಿದಂತೆ ಹಿರಿಯ, ಕಿರಿಯ ವಕೀಲರು ಉಪಸ್ಥಿತರಿದ್ದರು.

ವಸತಿ, ಶಿಷ್ಯವೇತನ: ಅರ್ಜಿ ಆಹ್ವಾನ

ಮೈಸೂರು,ಜೂ.19(ಪಿಎಂ)– ತೊಣಚಿಕೊಪ್ಪಲಿನ ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ವತಿಯಿಂದ ಮಾಧ್ವ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತಿ ವರ್ಷ ಇಬ್ಬರು ಉಪನಯನ ಆಗಿರುವ ವಿದ್ಯಾರ್ಥಿಗಳಿಗೆ ಊಟ, ವಸತಿ ಮತ್ತು ಶಿಷ್ಯವೇತನದೊಂದಿಗೆ ಓದಲು ಅವಕಾಶವಿದೆ. ಆಸಕ್ತರು ಶ್ರೀಮಠದ ಕೆಲಸದ ಸಮಯದಲ್ಲಿ (ಬೆಳಗ್ಗೆ 10ರಿಂದ ಮಧ್ಯಾಹ್ನ 12.30 ಹಾಗೂ ಸಂಜೆ 6ರಿಂದ ರಾತ್ರಿ 7.30) ಲಿಖಿತ ಅರ್ಜಿಗಳನ್ನು ಕಾರ್ಯದರ್ಶಿಯವರಿಗೆ ಸಲ್ಲಿಸಬಹುದು. ಅಂಚೆ ಶಿಕ್ಷಣ ಅಥವಾ ಸಂಜೆ ಕಾಲೇಜಿನಲ್ಲಿ ಓದುತ್ತಿರುವವರು ಸಹ ಅರ್ಜಿ ಸಲ್ಲಿಸಬಹುದು.

‘ಮೈಸೂರು ಮಿತ್ರ’ ವರದಿ ಫಲಶ್ರುತಿ; ವಿಜಯನಗರದ ಶೌಚಾಲಯ ಉದ್ಘಾಟನೆ...



ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.20ರ ವಿಜಯನಗರ ಹೈಟೆನ್ಷನ್ ಜೋಡಿ ರಸ್ತೆಯಲ್ಲಿನ ಪಾರ್ಕ್‌ನ ಒಳಗಡೆ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಆಗಿರುವ ನವೀನ ಮಾದರಿಯ ಶೌಚಾಲಯವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಈ ವೇಳೆ ಪಾಲಿಕೆ ಅಧಿಕಾರಿಗಳಾದ ಅಶ್ವಿನ್, ಸುಶ್ರುತ್, ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ಮುಖಂಡರಾದ ಗೋಪಾಲಸ್ವಾಮಿ, ಡೆಲ್ಲಿ ರವಿ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಹಾಗೂ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು. ನೆನೆಗುದಿಗೆ ಬಿದ್ದಿರುವ ಬಗ್ಗೆ ‘ಮೈಸೂರು ಮಿತ್ರ’ ಇತ್ತೀಚೆಗೆ ವರದಿ ಮಾಡಿತ್ತು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಿಂದ ವಿಶ್ವ ಮಟ್ಟದಲ್ಲಿ ಮೈಸೂರು ಕೀರ್ತಿ ಇಮ್ಮಡಿ

ಶ್ರೀಗಳಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ

ಮೈಸೂರು, ಜೂ.19(ಬಿಎಲ್‌ಯು)– ಆಧ್ಯಾತ್ಮಿಕತೆಯ ಜೊತೆಗೆ ಪರಿಸರ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮವು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೈಸೂರಿನ ಕೀರ್ತಿ ಇಮ್ಮಡಿಗೊಳಿಸುತ್ತಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದ್ದಾರೆ.

ಜಾಗತಿಕ ಪರಿಸರ ಸಮತೋಲನ ಹಾಗೂ ವಿಶ್ವ ಶಾಂತಿಗಾಗಿ 11 ದಿನಗಳ ಕಾಲ ದತ್ತ ಪೀಠದಲ್ಲಿ ಏರ್ಪಡಿಸಿದ್ದ ವನದುರ್ಗಾ ವೃಕ್ಷಶಾಂತಿ ಮಹಾಯಜ್ಞವು ಅಪರೂಪವಾಗಿತ್ತು ಎಂದು ತಿಳಿಸಿದ್ದಾರೆ. ಆಶ್ರಮಕ್ಕೆ ಭೇಟಿ ನೀಡಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಹುಟ್ಟುಹಬ್ಬದ ಶುಭಾಶಯ



ತಿಳಿಸಿರುವ ಸಂದೇಶ್ ಸ್ವಾಮಿ, ಆಶ್ರಮದ ಆಧ್ಯಾತ್ಮಿಕ ಹಾಗೂ ಪರಿಸರ ಕಾಳಜಿಯ ವಿಶಿಷ್ಟ ಕಾರ್ಯಕ್ರಮಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಆಶ್ರಮದಲ್ಲಿ ಅಪರೂಪದ ಬೋನ್ಸಾಯ್ ವೃಕ್ಷ ಸಂಗ್ರಹಿಸಿ ಗಿನ್ನೆಸ್ ಪುರಸ್ಕಾರಕ್ಕೆ ಪಾತ್ರರಾಗಿರುವ ಶ್ರೀಗಳು ವಿಶ್ವ ದಾಖಲೆ ಮಾಡಿರುವುದು ಹೆಮ್ಮೆಯ ಸಂಗತಿ. ಇದಲ್ಲದೆ ಆಶ್ರಮದಲ್ಲಿ ಗಿಡಮೂಲಿಕೆ ಸೇರಿದಂತೆ ಅಪಾರ ಮರಗಿಡಗಳನ್ನು ಬೆಳೆಸಿ, ಪಕ್ಷಿಗಳನ್ನು ಪೋಷಿಸಿರುವ ಶ್ರೀಗಳ ಕಾರ್ಯ ಸ್ಮರಣೀಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸಲು ಪೊಲೀಸರ ಲಾಠಿ ಡ್ರಿಲ್ ಮುಂದುವರಿಕೆ



ಮೈಸೂರು, ಜೂ.19(ಎಂಕೆ)– ಮೈಸೂರು ನಗರ ಪೊಲೀಸ್ ವತಿಯಿಂದ ಜನಸಂದಣಿ ಹೆಚ್ಚಾಗಿರುವ ಮೀನಾ ಬಜಾರ್ ಜಂಕ್ಷನ್ ಹಾಗೂ ಅಶೋಕ ರಸ್ತೆಯಲ್ಲಿ ಲಾಠಿ ಡ್ರಿಲ್ ನಡೆಸಲಾಯಿತು. ನಗರದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಜೊತೆಗೆ ಸಾರ್ವಜನಿಕರಲ್ಲಿ ಧೈರ್ಯ ತುಂಬುವ ನಿಟ್ಟಿನಲ್ಲಿ ಕಳೆದೆರಡು ದಿನಗಳಿಂದ ನಗರದ ಪ್ರಮುಖ ಸ್ಥಳಗಳಲ್ಲಿ ಲಾಠಿ ಡ್ರಿಲ್ ನಡೆಸಲಾಗುತ್ತಿದ್ದು, ಗುರುವಾರ ಜನಸಂದಣಿ ಹೆಚ್ಚಾಗಿರುವ ಮೀನಾ ಬಜಾರ್ ಜಂಕ್ಷನ್ ಹಾಗೂ ಚಿನ್ನದ ಮಳಿಗೆಗಳು ಹೆಚ್ಚಾಗಿರುವ ಅಶೋಕ ರಸ್ತೆಯಲ್ಲಿ ಲಾಠಿ ಡ್ರಿಲ್ ನಡೆಸಲಾಯಿತು.

ಡಿಸಿಪಿ(ಅಪರಾಧ ಮತ್ತು ಸಂಚಾರ) ಸುಂದರ್ ರಾಜ್ ನೇತೃತ್ವದಲ್ಲಿ ನೂರಾರು ಸಂಖ್ಯೆಯ ಚಾಮುಂಡಿ ಕಮಾಂಡೋ ಹಾಗೂ ಸಿಎಆರ್ ಸಿಬ್ಬಂದಿ ಲಾಠಿ ಡ್ರಿಲ್‌ನಲ್ಲಿ ಭಾಗವಹಿಸಿದ್ದರು. ಸಂಚಾರ ಎಸಿಪಿ ಅಶ್ವಥನಾರಾಯಣ ಉಪಸ್ಥಿತರಿದ್ದರು.

ಕಾಲುಜಾರಿ ಕೆರೆಗೆ ಬಿದ್ದ 3 ವರ್ಷದ ಅವಳಿ ಮಕ್ಕಳು ನೀರುಪಾಲು

ಧಾರವಾಡ, ಜೂ.19– ಆಟ ವಾಡುತ್ತಿದ್ದಾಗ ಕಾಲು ಜಾರಿ ಕೆರೆಗೆ ಬಿದ್ದು ಅವಳಿ ಮಕ್ಕಳು ನೀರು ಪಾಲಾಗಿರುವ ಹೃದಯವಿದ್ರಾವಕ ಘಟನೆ ಧಾರವಾಡದ



ಕುಂದಗೋಳ ತಾಲೂಕಿನ ಯರ್ರಿನಾರಾಯಣಪುರ ಗ್ರಾಮದಲ್ಲಿ ನಡೆದಿದೆ.

ಮೃತ ಮಕ್ಕಳನ್ನು ಮೂರು ವರ್ಷದ ಮುದಸ್ಸಿರ್ ಮತ್ತು ಮುಜಮ್ಮಿಲ್ ಎಂದು ಗುರುತಿಸಲಾಗಿದೆ. ಮನೆಯ ಪಕ್ಕದಲ್ಲೇ ಕೆರೆ ಇದ್ದು ಆಟವಾಡುತ್ತಿದ್ದಾಗ ಮಕ್ಕಳು ಆಯಾತಪ್ಪಿ ಕೆರೆ ಬಿದ್ದಿದ್ದಾರೆ. ಇನ್ನು ಮಕ್ಕಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಕುಂದ ಗೋಳ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗೆ ಉಚಿತ ಶ್ರವಣ ಪರೀಕ್ಷೆ

ಎರಡು ದಿನಗಳ ಶಿಬಿರ ಆಯೋಜನೆ

ಮೈಸೂರು, ಜೂ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ನಿಗಮದ ವತಿಯಿಂದ ಉಚಿತ ಶ್ರವಣ ಪರೀಕ್ಷೆ ಶಿಬಿರ ನಡೆಸ ಲಾಗುತ್ತಿದೆ.

ಸೆಸ್ಕ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ವಿಜಯ ನಗರ 2ನೇ ಹಂತದಲ್ಲಿ ರುವ ನಿಗಮದ ಪ್ರಧಾನ ಕಚೇರಿಯಲ್ಲಿ ಫೋಕಸ್ ಸ್ಪೀಚ್ ಅಂಡ್ ಹಿಯರಿಂಗ್ ಕ್ಲಿನಿಕ್ ಸಹಯೋಗದಲ್ಲಿ ಸೆಸ್ಕ್ ಆಯೋಜಿಸಿರುವ ಎರಡು ದಿನಗಳ ಶಿಬಿರಕ್ಕೆ ಶಾಸಕರೂ ಆಗಿರುವ ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಹಾಗೂ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್‌ರಾಜು ಚಾಲನೆ ನೀಡಿದರು.



ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನಿಗಮದ ವತಿಯಿಂದ ಉಚಿತ ಶ್ರವಣ ಪರೀಕ್ಷೆ ಶಿಬಿರ ನಡೆಯಿತು.

ದಿನವಿಡೀ ನಡೆದ ಶಿಬಿರದಲ್ಲಿ ಸೆಸ್ಕ್ ಪ್ರಧಾನ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ, ಗುತ್ತಿಗೆ ಹಾಗೂ ಹೊರ ಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಡೇಟಾ ಎಂಟ್ರಿ ಸಿಬ್ಬಂದಿ, ವಾಹನ ಚಾಲಕರುಗಳು, ನಿಗಮ ಕಚೇರಿಯ ಸಹಾಯಕ ಸಿಬ್ಬಂದಿ ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಶ್ರವಣ ದೋಷದ ಪರೀಕ್ಷೆ ಮಾಡಿಸಿಕೊಂಡು, ಅಗತ್ಯ ಚಿಕಿತ್ಸೆ ಹಾಗೂ ಸಲಹೆಗಳನ್ನು ಪಡೆದುಕೊಂಡರು.

ಶಿಬಿರದಲ್ಲಿ ಫೋಕಸ್ ಸ್ಪೀಚ್ ಅಂಡ್ ಹಿಯರಿಂಗ್ ಕ್ಲಿನಿಕ್‌ನ ಆಡಿಯೋಲಜಿಸ್ಟ್ ಎ.ಕುಶಾಲ್‌ಕುಮಾರ್ ಹಾಗೂ ಆಡಿಯೋಲಜಿಸ್ಟ್ ಹಾಗೂ ಸ್ಪೀಚ್ ಥೆರಪಿಸ್ಟ್ ಎ.ಕೃತಿಕಾ ಶ್ರವಣ ಪರೀಕ್ಷೆ ನಡೆಸಿದರು.

> “ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಆರೋಗ್ಯದ ಬಗ್ಗೆ ಸೆಸ್ಕ್ ಹೆಚ್ಚಿನ ಕಾಳಜಿ ವಹಿಸುತ್ತಾ ಬಂದಿದೆ. ಇದಕ್ಕಾಗಿ ಸಿಬ್ಬಂದಿಯ ಆರ್ಥಿಕ ಹೊರೆ ಕಡಿಮೆ ಮಾಡುವ ಸಲುವಾಗಿ ಈಗಾಗಲೇ ಕ್ಯಾಶ್ ಲೆಸ್ ಹೆಲ್ತ್ ಕಾರ್ಡ್ ನೀಡಲಾಗಿದೆ. ಇದರ ಜತೆಗೆ ಇತ್ತೀಚೆಗೆ ಸೆಸ್ಕ್ ನಿಗಮ ಕಚೇರಿ ಸಿಬ್ಬಂದಿ, ಹೊರ ಗುತ್ತಿಗೆ ನೌಕರರಿಗೆ ಆರೋಗ್ಯ ತಪಾಸಣೆ ಸಹ ನಡೆಸಲಾಗಿದೆ. ಪ್ರತಿಯೊಬ್ಬ ನೌಕರರು ಇಂತಹ ಕಾರ್ಯಕ್ರಮಗಳ ಉಪಯೋಗ ಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು.
> –ಕೆ.ಎಂ.ಮುನಿಗೋಪಾಲ್‌ರಾಜು, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್



ಇಂಜಿನಿಯರ್‌ಗಳ ಸಂಸ್ಥೆಯಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ

ಯುರೋಪ್ ತಂತ್ರಜ್ಞಾನಗಳ ಬಳಕೆಯಿಂದ ದೇಶದ ಪರಿಸರ ಸಂರಕ್ಷಣೆ ಸವಾಲಾಗಿ ಪರಿಣಮಿಸಿದೆ

ಪರಿಸರವಾದಿ, ನಟ ಸುರೇಶ್ ಹೆಬ್ಳೀಕರ್ ಅಭಿಮತ

ಮೈಸೂರು,ಜೂ.19(ಪಿಎಂ)– ನಮ್ಮ ದೇಶವು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪಾರಂಪರಿಕವಾಗಿ ವಿಭಿನ್ನತೆಯಿಂದ ಕೂಡಿದೆ. ಯುರೋಪ್ ರಾಷ್ಟ್ರಗಳು ಹಾಗೂ ಅಮೇರಿಕ ರೀತಿಯಲ್ಲಿ ನಮ್ಮ ದೇಶವಿಲ್ಲ. ಆದರೆ ಅಲ್ಲಿಯ ತಂತ್ರಜ್ಞಾನಗಳನ್ನು ನಮ್ಮಲ್ಲಿ ಬಳಕೆ ಮಾಡುತ್ತಿದ್ದು, ಇದು ನಮ್ಮ ಪರಿಸರ ಸಂರಕ್ಷಣೆಗೆ ಸವಾಲಾಗಿ ಪರಿಣಮಿಸಿದೆ ಎಂದು ಪರಿಸರವಾದಿ, ಚಲನಚಿತ್ರ ನಿರ್ಮಾಪಕ, ಖ್ಯಾತ ನಿರ್ದೇಶಕ ಹಾಗೂ ನಟ ಸುರೇಶ್ ಹೆಬ್ಳೀಕರ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ‘ಪ್ಲಾಸ್ಟಿಕ್ ಮಾಲಿನ್ಯ ತಡೆ’ ಕುರಿತಂತೆ ಅವರು ಮಾತನಾಡಿದರು. ಕರ್ನಾಟಕದಲ್ಲಿ ಹೆಚ್ಚು ಪ್ರಮಾಣದಲ್ಲಿರುವ ಅರಣ್ಯ ಪ್ರದೇಶ ಉಳಿಸಬೇಕು. ರಾಜ್ಯದ ಒಣ ಭೂ ಪ್ರದೇಶದಲ್ಲಿ ಮಳೆ ಕಡಿಮೆ ಇದ್ದು, ಇಲ್ಲೆಲ್ಲಾ ನದಿ ನೀರಿನ ಮೂಲಕ ಕೇವಲ ಭತ್ತ ಬೆಳೆದು ಏಕ ಕೃಷಿ ಸಂಸ್ಕೃತಿಗೆ ಆದ್ಯತೆ ನೀಡಲಾಗಿದೆ. ಇದರಿಂದ ಶೇ.30ರಷ್ಟು ಭೂಮಿಯ ಫಲವತ್ತತೆ ಕಡಿಮೆಯಾಗಿದೆ. ಉತ್ತರ ಕರ್ನಾಟಕದಲ್ಲಿ 33 ಸಕ್ಕರೆ ಕಾರ್ಖಾನೆಗಳಿದ್ದು, ಆ ಪ್ರದೇಶದಲ್ಲಿ ಕೇವಲ ಕಬ್ಬು ಬೆಳೆಯಲಾಗುತ್ತದೆ ಎಂದರು.



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಆವರಣದಲ್ಲಿ ಗುರುವಾರ ಗಿಡ ನೆಟ್ಟು ನೀರೆರೆಯಲಾಯಿತು.

ಜೊತೆಗೆ ಪರಿಸರ ಸಂರಕ್ಷಣೆ ಪ್ರಸ್ತುತ ಕೇವಲ ಸ್ಥಳೀಯ ಸವಾಲಾಗಿ ಮಾತ್ರ ಉಳಿದಿಲ್ಲ. ಜಗತ್ತಿನಾದ್ಯಂತ ತಾಪಮಾನ ಏರಿಕೆ, ಹವಮಾನ ಬದಲಾವಣೆ ಸಮಸ್ಯೆಗಳು ಇದ್ದು, ಇವು ಜಗತ್ತಿನ ಅತೀ ದೊಡ್ಡ ದುರಂತಗಳು ಎಂದೇ ಹೇಳಬಹುದು. ಪರಿಸರ ನಮಗೆ ಬದುಕಲು ಬೇಕಾದ ಅವಶ್ಯಕತೆಗಳನ್ನು ಪೂರೈಸುತ್ತದೆ. ನಮ್ಮ ಆರ್ಥಿಕ, ಸಾಮಾಜಿಕ ಪ್ರಗತಿ ಮತ್ತು ಸಾಂಸ್ಕೃತಿಕ ಪರಂಪರೆ, ಭಾಷೆ, ಊಟ–ಬಟ್ಟೆ ಎಲ್ಲದಕ್ಕೂ ಪರಿಸರವೇ ಮೂಲ ಎಂದು ತಿಳಿಸಿದರು.

ಇಡೀ ಕರ್ನಾಟಕದಲ್ಲಿ 48 ಸಾವಿರ ದೊಡ್ಡ ಕೆರೆಗಳಿದ್ದವು. ಈ ಪೈಕಿ ಶೇ.60ರಷ್ಟು ನಾಶವಾಗಿವೆ. ಯುದ್ಧಗಳು ಭೂಮಿಯ ಸಂಪತ್ತನ್ನು ನಾಶ ಮಾಡುತ್ತಿವೆ. ಸ್ಫೋಟಕಗಳಿಂದ ಮಣ್ಣಿನ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ಮೇಲ್ಮಣ್ಣು ಸುಮಾರು 6 ಮೀಟರ್ ಬರಲು ಮಿಲಿಯನ್ ವರ್ಷಗಳೇ ಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಅನೇಕ ವಸ್ತುಗಳನ್ನು ನಮಗೆ ದೊರಕಿಸಿಕೊಟ್ಟಿದೆ. ಆದರೆ ಈ ಹಿಂದೆ ಅವುಗಳು ಇಲ್ಲದೆಯೋ ನಾವು ಬದುಕು ಮಾಡಿದ್ದೇವೆ. ಆ ಸಾಧ್ಯತೆ ಬಗ್ಗೆ ಚಿಂತಿಸಬೇಕಿದೆ. ಇಂದು ಸಾಗರವೂ ಆಮ್ಲಜನಕದ ಮೂಲ ಎನ್ನುತ್ತಿದ್ದು, ಈ ಬಗ್ಗೆ ಸಂಶೋಧನೆಗಳು ಅಗತ್ಯ ಎಂದು ಹೇಳಿದರು.

ಇಂದು ಪ್ಲಾಸ್ಟಿಕ್ ಮಾಲಿನ್ಯ ದೊಡ್ಡ ಸಮಸ್ಯೆಯಾಗಿದೆ. ಮುಂಬೈನಲ್ಲಿ ಇಂದು ಸಾವಿರಾರು ಉದ್ಯಮಿಗಳು 4ರಿಂದ 5 ಸಾವಿರ ಕೋಟಿ ಪ್ಲಾಸ್ಟಿಕ್ ರಿಸೈಕ್ಲಿಂಗ್ ಉದ್ದಿಮೆಗಳನ್ನು ನಡೆಸುತ್ತಿದ್ದಾರೆ. ಆದರೆ 40ರಿಂದ 60 ಮೈಕ್ರಾನ್‌ಗಿಂತ ಕಡಿಮೆ ತೆಳುವಾದ ಪ್ಲಾಸ್ಟಿಕ್ ಸಮಸ್ಯೆಯಾಗಿ ಪರಿಣಮಿಸಿದೆ ಹಿಂದೆ ಮನೆಯಿಂದಲೇ ಬ್ಯಾಗ್ ತರುತ್ತಿದ್ದೆವು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಹಾಗಾಗಿ ಪ್ಲಾಸ್ಟಿಕ್ ಅನ್ನು ಆದಷ್ಟು ಕಡಿಮೆ ಬಳಸಲು ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಸಂಸ್ಥೆ ಆವರಣದಲ್ಲಿ ಗಿಡ ನೆಟ್ಟು ನೀರೆರೆಯಲಾಯಿತು. ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಕೇಂದ್ರದ ಅಧ್ಯಕ್ಷ ಡಾ.ಆರ್.ದೀಪು, ಮಾಜಿ ಅಧ್ಯಕ್ಷ ಎ.ಎಸ್. ಸತೀಶ್, ಗೌರವ ಕಾರ್ಯದರ್ಶಿ ಡಾ.ಎಸ್.ಎ. ಮೋಹನ್ ಕೃಷ್ಣ, ಇತ್ರೆ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಪ್ರಭಾಕರ್ ಮತ್ತಿತರರು ಹಾಜರಿದ್ದರು.

ವಧು–ವರರ ಸಮಾವೇಶ

ಮೈಸೂರು, ಜೂ.19–ಮೈಸೂರಿನ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಜೂ.22 ರಂದು ಮಧ್ಯಾಹ್ನ 3ರಿಂದ 6ರವರೆಗೆ ವೀರ ಶೈವ ಲಿಂಗಾಯತ ವಧು–ವರರ ಸಮವೇಶ ನಡೆಯಲಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಪದವಿ ವಿದ್ಯಾರ್ಹತೆ, ಉತ್ತಮ ಕೆಲಸವುಳ್ಳ ವಧು–ವರರು ಇದರ ಸದುಪಯೋಗಪಡಿಸಿಕೊಳ್ಳಬಹುದು. ಜೂ.21 ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ ಮೊ.9686205346 ಸಂಪರ್ಕಿಸಿ.

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ : 08225-272128 Email: sec.mmtemple@gmail.com

ಸಂಖ್ಯೆ: ಶ್ರೀ ಮ.ಮ.ಕ್ಷೇ.ಅ.ಪ್ರಾ/3/ಪಿಆರ್/07/2025-26 ದಿ:12-06-2025

ಇ-ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)2ನೇ ಕರೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ. ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ಶ್ರೀಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪೂಜಾ ವಿಭಾಗಕ್ಕೆ ಬೇಕಾದ ಕಪ್ಪು ಬಣ್ಣದ ಬಲಿತ ದಪ್ಪ ಸೈಜಿನ 1,80,000 ತೆಂಗಿನ ಕಾಯಿಗಳನ್ನು ಆರು ತಿಂಗಳ ಅವಧಿಗೆ ಒದಗಿಸುವುದಕ್ಕೆ ಒಳಪಟ್ಟು ಎಲ್ಲಾ ತೆರಿಗೆಗಳು ಸೇರಿ. ಒಂದು ತೆಂಗಿನಕಾಯಿಗೆ ದರ.	31.00	31,000-00

ವಿವರಗಳನ್ನು www.kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ: 25-06-2025 ಸಂಜೆ: 4.00ಗಂಟೆ ಒಳಗಾಗಿ ಪ್ರಾಧಿಕಾರದ ವಿಷಯ ನಿರ್ವಾಹಕರ ಮೊಬೈಲ್ ಸಂಖ್ಯೆ 9886306737ನ್ನು ಸಂಪರ್ಕಿಸಬಹುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತ್ತಿವೆ.

1.	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿನಾಂಕ:12-06-2025	ರ ನಂತರ
2.	ಗುಣಮಟ್ಟ ಮಾದರಿ ಟೆಂಡರ್ ಪೂರ್ವಭಾವಿ ಸಭೆ (Sample Tender pre bid meeting)	ದಿನಾಂಕ:20-06-2025	ಮಧ್ಯಾಹ್ನ 12-00ಗಂಟೆಗೆ
3.	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ:26-06-2025	ಸಂಜೆ 4.00 ಗಂಟೆವರೆಗೆ
4.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ:27-06-2025	ಸಂಜೆ 5.00 ಗಂಟೆ ನಂತರ
5.	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ತಾಂತ್ರಿಕ ಬಿಡ್ ಪರಿಶೀಲನೆಯ ನಂತರ	

ಸಹಿ/- ಕಾರ್ಯದರ್ಶಿ
ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ

ಸಂ : ವಾಸಾಸಂಇ : ಚಾನಗರ : 148 : 2025-26

ಸೆ.19, 20 ರಂದು ಸ್ಫೂರ್ತಿ ಪತ್ತಿನ ಸಹಕಾರ ಸಂಘದ ಬೆಳ್ಳಿಹಬ್ಬ ಆಚರಣೆ



ಸಂಘದ ಸಭೆಯಲ್ಲಿ ಸಂಘದ ಅಧ್ಯಕ್ಷ ಕೆ.ಎಲ್.ಶಿವರಾಮು ಮಾತನಾಡಿದರು.

ಭಾರತೀನಗರ, ಜೂ.19– ಭಾರತೀನಗರದ ಸ್ಫೂರ್ತಿ ಪತ್ತಿನ ಸಹಕಾರ ಸಂಘದ ಬೆಳ್ಳಿಹಬ್ಬವನ್ನು ಸೆ.19, 20 ರಂದು ಎರಡು ದಿನಗಳ ಕಾಲ ಆಚರಿಸಲಾಗುವುದು ಎಂದು ಸ್ಫೂರ್ತಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎಲ್.ಶಿವರಾಮು ತಿಳಿಸಿದರು.

ಭಾರತೀನಗರದ ಸ್ಫೂರ್ತಿ ಪತ್ತಿನ ಸಹಕಾರ ಸಂಘದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸ್ಫೂರ್ತಿ ಪತ್ತಿನ ಸಹಕಾರ ಸಂಘ ಸ್ಥಾಪನೆಯಾಗಿ 25 ವರ್ಷಗಳು ತುಂಬಿರುವುದರಿಂದ ಸೆ.19, 20 ರಂದು ಬೆಳ್ಳಿಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ದೇಶಕರು ಮತ್ತು ಸದಸ್ಯರು ಸಹಕರಿಸಬೇಕೆಂದು ಮನವಿ ಮಾಡಿದರು.

ಬೆಳ್ಳಿಹಬ್ಬದ ಪ್ರಯುಕ್ತ ಸಂಘದ ನೂತನ ಸಭಾಂಗಣ ಉದ್ಘಾಟನೆ, ಬೃಹತ್ ಆರೋಗ್ಯ ತಪಾಸಣಾ ಶಿಬಿರ, ಬೆಳ್ಳಿಹಬ್ಬದ ಸವಿನೆನಪಿಗಾಗಿ ಸಂಘದ ಸದಸ್ಯರಿಗೆ 5 ಸಾವಿರ ಸಸಿ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿರುವುದರಿಂದ ಹಲವು ಆಸ್ಪತ್ರೆಯ ನುರಿತ ವೈದ್ಯರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಸಚಿವರು, ಹಾಲಿ ಮತ್ತು ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಸಹಕಾರ ಕ್ಷೇತ್ರದಲ್ಲಿನ ಅನೇಕ ಗಣ್ಯರನ್ನು ಆಹ್ವಾನಿಸಲಾಗುವುದು ಎಂದರು.

ಇದೇ ವೇಳೆ ಸ್ಫೂರ್ತಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಸಿದ್ದರಾಮೇಗೌಡ, ನಿರ್ದೇಶಕರಾದ ರಘು, ಶಿವರಾಜು, ಸುರೇಶ್, ರಮೇಶ್, ಕೆಂಪರಾಜು, ಮನೋಹರ್‌ಗೌಡ, ವಿನಯ್‌ಕುಮಾರ್, ರೇಖಾ, ವಿಜೇಂದ್ರ, ಗುರುಸಿದ್ದಯ್ಯ, ಸಮಿತಿ ಸದಸ್ಯ ಬಿ.ಎಸ್.ಬೋರೇಗೌಡ, ಅಣ್ಣೂರು ಸತೀಶ್, ಸಂಘದ ಸಿಇಓ ಅಜಯ್‌ಕುಮಾರ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜೂ.30ರಿಂದ ಮೆಡಿಕಲ್ ಕಾಲೇಜು ಉಳಿಸಿ ಆಂದೋಲನ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಕರವೇ ಜಿಲ್ಲಾಧ್ಯಕ್ಷ ಹೆಚ್.ಡಿ.ಜಯರಾಮ್ ಮತ್ತು ಪದಾಧಿಕಾರಿಗಳು

ಮಂಡ್ಯ: ಮಿಮ್ಸ್‌ಗೆ ಸೇರಿದ ಭೂಮಿಯಲ್ಲಿ ತಮಿಳು ಕಾಲೋನಿ ನಿರ್ಮಾಣ ಹಾಗೂ ಹಲವರಿಂದ ಒತ್ತುವರಿಯೂ ಆಗಿದ್ದು, ಸದರಿ ಭೂಮಿಯ ಒತ್ತುವರಿ ತೆರವುಗೊಳಿಸಲು ಒತ್ತಾಯಿಸಿ ಕರವೇಯಿಂದ ಜೂ.30ರಿಂದ 'ಮೆಡಿಕಲ್ ಕಾಲೇಜು ಉಳಿಸಿ' ಕನ್ನಡಿಗರ ಜಾಗೃತಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಹೆಚ್.ಡಿ. ಜಯರಾಮ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳು ಕಾಲೋನಿ ನಿವಾಸಿಗಳನ್ನು ವರ್ಗಾಯಿಸಿ, ಸದರಿ ಜಾಗವನ್ನು ಮೆಡಿಕಲ್ ಕಾಲೇಜು ಸುಪರ್ದಿಗೆ ನೀಡಲು ನ್ಯಾಯಾಲಯದ ಆದೇಶವಿದ್ದರೂ, ಜಿಲ್ಲಾಡಳಿತದ ಅಧಿಕಾರಿ ವರ್ಗ ಮೀನಾಮೇಷ ತೋರುತ್ತಿದೆ ಎಂದು ದೂರಿದರು.

ತಮಿಳು ಕಾಲೋನಿ ನಿವಾಸಿಗಳಿಗೆ ನಾಲ್ಕು ಬಾರಿ ವಿವಿಧೆಡೆ ಮನೆ ನಿರ್ಮಿಸಿಕೊಟ್ಟರೂ ಸ್ಥಳ ಬದಲಾಯಿಸದೇ ಮಿಮ್ಸ್ ಅಭಿವೃದ್ಧಿಗೆ ತಡೆಯೊಡ್ಡುತ್ತಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸವಾಲಾಗಿರುವುದರ ವಿಚಾರವಾಗಿ ಕನ್ನಡಿಗರನ್ನು ಜಾಗೃತಗೊಳಿಸಬೇಕಾದ ಅಗತ್ಯವಿದೆ ಎಂದರು. ಈ ನಿಟ್ಟಿನಲ್ಲಿ ಮೊದಲ ಹಂತವಾಗಿ ಮಂಡ್ಯ ನಗರದ 35 ವಾರ್ಡ್‌ಗಳಲ್ಲಿ ಬೈಕ್ ಹಾಗೂ ತೆರೆದ ವಾಹನಗಳ ಮೂಲಕ ಒಂದು ಲಕ್ಷ ಕರಪತ್ರ ಹಂಚಿ ಮೆಡಿಕಲ್ ಕಾಲೇಜು ಅಭಿವೃದ್ಧಿಗೆ ಕೈಜೋಡಿಸುವಂತೆ ಮನವಿ ಮಾಡುವುದಲ್ಲದೇ ನಗರದಾದ್ಯಂತ ಪೋಸ್ಟರ್ ಹಾಗೂ ಸ್ಟಿಕ್ಕರ್‌ಗಳನ್ನು ಅಳವಡಿಸಿ ಮೆಡಿಕಲ್ ಕಾಲೇಜು ವಿಸ್ತರಣೆ ಹಾಗೂ ಅಭಿವೃದ್ಧಿ ಮಹತ್ವ ತಿಳಿಸಲಾಗುವುದು ಎಂದು ಹೇಳಿದರು.

ಎರಡನೇ ಹಂತವಾಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಜಾಗೃತಿ ಕಾರ್ಯಕ್ರಮ ರೂಪಿಸಲಾಗುವುದು. ಸದರಿ ಭೂಮಿ ಮಿಮ್ಸ್ ಸುಪರ್ದಿಗೆ ಬಂದಲ್ಲಿ ಜಿಲ್ಲೆಗೆ ಅಗತ್ಯವಿರುವ ಟ್ರಾಮಾಕೇರ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹೃದ್ರೋಗ ಆಸ್ಪತ್ರೆ, ಹೆರಿಗೆ ಆಸ್ಪತ್ರೆ ವಿಸ್ತರಣೆ, ನಗರಕ್ಕೆ ಹತ್ತಿರವಾಗದಂತೆ ತಾಯಿ– ಮಕ್ಕಳ ಆಸ್ಪತ್ರೆ ನಿರ್ಮಿಸಿರುವುದು ಯಾವುದೇ ಉಪಯೋಗಕ್ಕೆ ಆಗುತ್ತಿಲ್ಲ, ಅಲ್ಲಿನ ಸ್ಥಳೀಯರಿಗೆ ಮಾತ್ರ ಉಪಯೋಗವಾಗುತ್ತದೆ. ಜಿಲ್ಲಾ ಸ್ತರೆಯ ಬಳಿಯೇ ನಿರ್ಮಿಸಲು ಸದರಿ ಭೂಮಿ ಅವಶ್ಯಕತೆ ಇದೆ ಎಂದು ತಿಳಿಸಿದರು.

ರಾಜಕೀಯ ಉದ್ದೇಶಕ್ಕಾಗಿ ತಮಿಳು ಕಾಲೋನಿಯ ಒತ್ತುವರಿ ತೆರವಿಗೆ, ಅವರಿಗೆ ನಿರ್ಮಿಸಲಾದ ಪರ್ಯಾಯ ನಿವೇಶನಗಳಿಗೆ ಅವರನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಶಾಸಕರು ಐದು ಸಾವಿರ ಮನೆಗಳನ್ನು ನಿರ್ಮಿಸುವ ಘೋಷಣೆ ಮಾಡಿದ್ದು, ಸದರಿ ಪ್ರಯತ್ನಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತ ಕೈ ಜೋಡಿಸಿ, ಮಂಡ್ಯ ನಗರವನ್ನು ವಸತಿರಹಿತರ ನಗರವನ್ನಾಗಿ ರೂಪಿಸಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಶಿವರಾಮೇಗೌಡ, ವೆಂಕಟೇಶ್, ನಾಗರಾಜ್, ಮುದ್ದೇಗೌಡ, ಪ್ರವೀಣ್, ಪಿ.ಎ.ಜೋಸೆಫ್ ಇದ್ದರು.

ಕಾಲ್ತುಳಿತದಲ್ಲಿ 11 ಮಂದಿ ಸಾವಿಗೆ ಸರ್ಕಾರವೇ ಹೊಣೆ

ಕೆ.ಆರ್.ಪೇಟೆಯಲ್ಲಿ ಬಿಜೆಪಿ ಪ್ರತಿಭಟನೆ



ಬಿಜೆಪಿ ಕಾರ್ಯಕರ್ತರು ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ, ಜೂ.19– ಐಪಿಎಲ್ ಪಂದ್ಯಾವಳಿಯಲ್ಲಿ ಆರ್.ಸಿ.ಬಿ ತಂಡವು ರೋಚಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ಆಯೋಜಿಸಿದ್ದ ವಿಜಯೋತ್ಸವದಲ್ಲಿ ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿದ್ದು, ಇದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿ ತಾಲೂಕು ಬಿಜೆಪಿ ಕಾರ್ಯಕರ್ತರು ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ ರಾಜ್ಯ ಸರ್ಕಾರ ಎರಡು ಕಡೆ ಆರ್‌ಸಿಬಿ ವಿಜಯೋತ್ಸವ ಆಚರಿಸುವ ಅಗತ್ಯವಿರಲಿಲ್ಲ. ಪೊಲೀಸರ ಮಾತಿಗೂ ಬೆಲೆ ಕೊಡದೆ ರಾಜ್ಯ ಸರ್ಕಾರ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು ಕ್ರೀಡಾ ಪ್ರೇಮಿಗಳ ಸಾವಿಗೆ ಕಾರಣವಾಗಿದೆ. ತಾನು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲು ದಕ್ಷ ಪೊಲೀಸರ ತಲೆದಂಡ ಮಾಡಿರುವುದು ಖಂಡನೀಯ. ರಾಜ್ಯ ಸರ್ಕಾರ ಘಟನೆಯ ಸಂಪೂರ್ಣ ಜವಾಬ್ದಾರಿ ಹೊರಬೇಕು. ಇದಕ್ಕೆ ಕಾರಣಕರ್ತರಾದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ನೈತಿಕ ಹೊಣೆಹೊತ್ತು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಬಿಜೆಪಿ ಉಪಾಧ್ಯಕ್ಷ ಭಾರತೀಪುರ ಪುಟ್ಟಣ್ಣ, ಕಾರ್ಯದರ್ಶಿ ರವಿ, ಮಂಜು, ಯೋಗೇಶ್, ಭಾರತೀಪುರ ಶ್ರೀನಿವಾಸ್, ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಮಿತಿ ಸದಸ್ಯ ಶೀಳನೆರೆ ಭರತ್ ಸೇರಿದಂತೆ ಹಲವರಿದ್ದರು.

ಗ್ಯಾರಂಟಿ ಸಮರ್ಪಕ ಅನುಷ್ಠಾನಗೊಳಿಸಲು ವಿಲೇವಾರಿ ಸಭೆ ನಡೆಸಿ



ಪ್ರಗತಿ ಪರಿಶೀಲನೆ ಸಭೆಯಲ್ಲಿ ಡಾ.ಪುಷ್ಪ ಅಮರನಾಥ್ ಮಾತನಾಡುತ್ತಿರುವುದು.

ಪಾಂಡವಪುರ, ಜೂ.19– ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಜನರ ಬದುಕಿಗೆ ಬೆಳಕಾಗಿವೆ, ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಗ್ರಾಪಂ ಮಟ್ಟದಲ್ಲಿ ಗ್ಯಾರಂಟಿ ವಿಲೇವಾರಿ ಸಭೆ ನಡೆಸಬೇಕು ಎಂದು ಜಿಲ್ಲಾಡಳಿತಕ್ಕೆ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸೂಚನೆ ನೀಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸರಕಾರ ರಾಜ್ಯದ ಬಜೆಟ್‌ನಲ್ಲಿ ಸಿಂಹಪಾಲು ಅನುದಾನವನ್ನು ಗ್ಯಾರಂಟಿ ಯೋಜನೆಗೆ ಮೀಸಲಿಟ್ಟಿದೆ. ಗ್ಯಾರಂಟಿ ಯೋಜನೆಯು ಬಡವರ ಹಸಿವು ನೀಗಿಸಿದೆ, ಮಹಿಳೆಯ ಸಬಲೀಕರಣವಾಗಿದೆ. ಅಧಿಕಾರಿಗಳು ಆಸಕ್ತಿಯಿಂದ ತಮ್ಮ ಮನೆಯ ಕಾರ್ಯಕ್ರಮದ ರೀತಿ ಗ್ಯಾರಂಟಿ ಯೋಜನೆ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸ ಮಾಡಬೇಕು, ಹಾಗಾಗಿ ಮುಂದಿನ ದಿನಗಳಲ್ಲಿ ಗ್ರಾಪಂ ಮಟ್ಟದಲ್ಲಿ ಗ್ಯಾರಂಟಿ ವಿಲೇವಾರಿ ಸಭೆ ನಡೆಸಬೇಕು ಎಂದು ಸಿಇಓ ನಂದಿನಿ ಅವರಿಗೆ ಸೂಚಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆ ದೇಶವಲ್ಲ ವಿಶ್ವಕ್ಕೆ ಮಾದರಿಯಾಗಿದೆ. ದೇಶದ ವಿವಿಧ ರಾಜ್ಯಗಳಲ್ಲಿ ನಮ್ಮ ಗ್ಯಾರಂಟಿ ಯೋಜನೆಯನ್ನು ಕಾಪಿ ಮಾಡಿದ್ದಾರೆ ಎಂದು ಗುಣಗಾನ ಮಾಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಸದರಿ ಮಾಹೆಯಲ್ಲಿ ಅಕ್ಕಿಯ ಜೊತೆ ರಾಗಿ ಸಹ ನೀಡಲಾಗುತ್ತಿದೆ. ಇನ್ನು ಎರಡು ದಿನದೊಳಗಾಗಿ ಪಡಿತರ ವಿತರಿಸಲಾಗುವುದು. ಬ್ಯಾಂಕ್‌ನಲ್ಲಿ ಖಾತೆ ತೆರೆಯುವ ಸಂದರ್ಭದಲ್ಲಿ ಪ್ಯಾನ್ ಸಂಖ್ಯೆ ಬೇಕಿರುವುದಿಲ್ಲ. ಈ ಬಗ್ಗೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಂದ ಚರ್ಚಿಸಿ ನಿರ್ದೇಶನ ನೀಡಲಾಗುವುದು ಎಂದರು.

ಸಭೆಯಲ್ಲಿ ಜಿಪಂ ಸಿಇಓ ಕೆ.ಆರ್.ನಂದಿನಿ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಿಕ್ಕಲಿಂಗಯ್ಯ, ತಾಲೂಕು ಅಧ್ಯಕ್ಷ ಹೆಚ್.ಕೆ.ಕೃಷ್ಣೇಗೌಡ, ಜಿಪಂ ಮುಖ್ಯ ಯೋಜನಾಧಿಕಾರಿ ಧನುಷ್, ತಹಸೀಲ್ದಾರ್ ಸಂತೋಷ್‌ಕುಮಾರ್, ತಾಪಂ ಇಓ ಭಾಗವಹಿಸಿದ್ದರು.

ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಪಾಂಡವಪುರ, ಜೂ.19– ತಾಲೂಕಿನ ಚಿಕ್ಕಾಡೆ ಗ್ರಾಮದಲ್ಲಿ ಕೆಆರ್‌ಐಡಿಎಲ್ ನಿಗಮದ ಯೋಜನೆಯಡಿ ಅಂದಾಜು 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಕೆಆರ್‌ಐಡಿಎಲ್ ನಿಗಮದ ವಿಶೇಷ ಯೋಜನೆಯಡಿ ಅಂದಾಜು 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಸೂಚಿಸಿದರು.

ಜೂ.23ರಂದು 'ಡಾ.ವೆಂಕಟೇಶ್ ಮೂರ್ತಿ ಇಷ್ಟು ಕಾಲ ಒಟ್ಟಿಗಿದ್ದು' ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಕೆಎಸ್‌ಎನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ.

ಮಂಡ್ಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ.ಪು.ತಿ.ನ ಮತ್ತು ಕೆಎಸ್‌ಎನ್ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ವತಿಯಿಂದ, 'ಡಾ.ಹೆಚ್.ಎಸ್.ವೆಂಕಟೇಶ್ ಮೂರ್ತಿ ಇಷ್ಟು ಕಾಲ ಒಟ್ಟಿಗಿದ್ದು' ಕಾರ್ಯಕ್ರಮವನ್ನು ಜೂ.23ರ ಸಂಜೆ 5.30ಕ್ಕೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಕೆಎಸ್‌ಎನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ವಿಚಾರವಾಗಿ ಅಪಾರ ಸೇವೆ ಸಲ್ಲಿಸಿದ ಡಾ.ಹೆಚ್.ಎಸ್.ವೆಂಕಟೇಶ್‌ಮೂರ್ತಿ ಅವರ ನೆನಪಿನಲ್ಲಿ ಅವರಿಗೆ ಪುಷ್ಪನಮನ, ನುಡಿನಮನ, ಗೀತನಮನ, ನೃತ್ಯನಮನ ಸಲ್ಲಿಸಲು ಮತ್ತು ಅವರ ಜನ್ಮದಿನ ಆಚರಿಸುವ ಸಲುವಾಗಿ ಸದರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಹೆಚ್.ಎಸ್.ವೆಂಕಟೇಶ್ ಮೂರ್ತಿ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ ಸಿಇಓ ಕೆ.ಆರ್.ನಂದಿನಿ ಹಾಗೂ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಪುಷ್ಪನಮನ ಸಲ್ಲಿಸಲಿದ್ದು, ಡಾ.ಕೆ.ಎಸ್.ನ ಟ್ರಸ್ಟ್‌ನ ಅಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಉದ್ಘಾಟಿಸುವರು, ಡಾ.ಪು.ತಿ.ನ ಟ್ರಸ್ಟ್‌ನ ಅಧ್ಯಕ್ಷ ಪ್ರೊ.ಎಂ. ಕೃಷ್ಣೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಖ್ಯಾತ ಕವಿ ಬಿ.ಆರ್.ಲಕ್ಷ್ಮಣ್‌ರಾವ್, ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ, ಕಸಾಪ ಮಾಜಿ ಜಿಲ್ಲಾಧ್ಯಕ್ಷೆ ಡಾ.ಮೀರಾಶಿವಲಿಂಗಯ್ಯ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ನವೀನ್‌ಕುಮಾರ್, ಚಲನಚಿತ್ರ ಸಾಹಿತಿ ವಿ.ನಾಗೇಂದ್ರ ಪ್ರಸಾದ್, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸೇರಿದಂತೆ ಹಲವು ಗಣ್ಯರು ನುಡಿನಮನ ಸಲ್ಲಿಸಲಿದ್ದಾರೆ. ಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಂದೀಶ್, ಕಸಾಪ ಮಾಜಿ ಜಿಲ್ಲಾಧ್ಯಕ್ಷೆ ಡಾ.ಮೀರಾಶಿವಲಿಂಗಯ್ಯ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಖಜಾಂಚಿ ಪ್ರಶಾಂತ್ ಉಡುಪ, ಡೇವಿಡ್ ಇದ್ದರು.

ಒಂದನೇ ಪುಟದಿಂದ

ಶೇ.15ರಷ್ಟು ಮೀಸಲು

ಕಲ್ಪಿಸಲಾಗಿದೆ ಎಂದು ಸಮಜಾಯಿಷಿ ನೀಡಿದರು. ಬಡವರಿಗೆ ಮನೆ ನಿರ್ಮಿಸಿಕೊಡುವಲ್ಲಿ ರಾಜಕೀಯ ಮಾಡುತ್ತಾ ಹೋದರೆ, ಅರ್ಹರಿಗೆ ನಾವು ಯಾವುದೇ ಸೌಲಭ್ಯ ನೀಡಲು ಆಗುವುದಿಲ್ಲ. ಅಲ್ಪಸಂಖ್ಯಾತರೆಂದರೆ, ಬರೀ ಮುಸ್ಲೀಮರಷ್ಟೇ ಅಲ್ಲ, ಕ್ರಿಶ್ಚಿಯನ್ ಹಾಗೂ ಜೈನ ಸಮುದಾಯವೂ ಸೇರುತ್ತದೆ. ಆದರೆ, ಹೆಚ್ಚಾಗಿ ಸೂರಿಲ್ಲದ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ನಿಗದಿಪಡಿಸಬೇಕಾಗುತ್ತದೆ ಎಂದರು.

ಆರೋಗ್ಯ ಇಲಾಖೆ ಗುತ್ತಿಗೆ ನೌಕರರಿಗೆ ನಗದುರಹಿತ ಚಿಕಿತ್ಸೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ, ಹೊರಗುತ್ತಿಗೆ ಹಾಗೂ ಗೌರವಧನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರು ಮತ್ತು ಕುಟುಂಬ ವರ್ಗಕ್ಕೆ ಸುವರ್ಣ ಸುರಕ್ಷಾ ಆರೋಗ್ಯ ಯೋಜನೆ ಜಾರಿಗೆ ಸಮ್ಮತಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಇದರನ್ವಯ ಐದು ಲಕ್ಷ ರೂ.ವರೆಗೆ ನಗದುರಹಿತ ಚಿಕಿತ್ಸೆ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ನೌಕರರು ಮಾಸಿಕ 100 ರೂ. ಪಾವತಿಸಿದರೆ ಉಳಿದ ಹಣವನ್ನು ಸರ್ಕಾರ ಭರಿಸಲಿದೆ ಎಂದರು.

ಮಾಲೀಕತ್ವ ವಿವಾದ ಇತ್ಯರ್ಥ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆಗೆ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕತ್ವ ಹಕ್ಕು ಕುರಿತು ಸರ್ಕಾರ ತೀರ್ಮಾನ ಕೈಗೊಂಡಿದೆ. ಹಾಸನ ಹಾಗೂ ತುಮಕೂರು ಜಿಲ್ಲೆಯಲ್ಲಿ ಭೂಸ್ವಾಧೀನ ಮಾಲೀಕತ್ವ ಕುರಿತು ಕಂದಾಯ ಹಾಗೂ ಅರಣ್ಯ ಇಲಾಖೆ ನಡುವಿನ ದ್ವಿಹಕ್ಕು ಮಾಲೀಕತ್ವ ವಿವಾದ ಇತ್ಯರ್ಥಗೊಳಿಸಿ ಪರಿಹಾರ ನಿರ್ಧರಿಸಲಾಗಿದೆ.

ಕೆಂಪೇಗೌಡ ಕೋಟೆ ನವೀಕರಣ: ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿ ಪಟ್ಟಣದ ನಾಡಪ್ರಭು ಕೆಂಪೇಗೌಡ ಕೋಟೆ ನವೀಕರಣ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು 103 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ನಬಾರ್ಡ್ ಸಹಕಾರದೊಂದಿಗೆ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರವನ್ನು 10 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಸಮುದ್ರ ತೀರದ 6 ಕಿಲೋ ಮೀಟರ್‌ವರೆಗಿನ ಪ್ರದೇಶ ಹಾಗೂ ಅರಣ್ಯ ಪ್ರದೇಶವನ್ನು ಅಪ್ಸರಕೊಂಡ–ಮುಗಲಿ ಕಡಲ ವನ್ಯಜೀವಿ ಧಾಮ ಎಂಬುದಾಗಿ ಘೋಷಿಸಿದ್ದು 5,959 ಹೆಕ್ಟೇರ್ ಪ್ರದೇಶ ಗುರುತಿಸಿ ಈ ವನ್ಯಜೀವಿ ಧಾಮ ವ್ಯಾಪ್ತಿಗೆ ತರಲಾಗಿದೆ.

ತನಿಖಾ ತಂಡದ ಅವಧಿ ವಿಸ್ತರಣೆ: ಗಣಿಗಾರಿಕೆ ಅಕ್ರಮಗಳ ತನಿಖೆಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸೃಜಿಸಲಾಗಿರುವ ವಿಶೇಷ ತನಿಖಾ ತಂಡದ ಕಾರ್ಯಾವಧಿಯನ್ನು 2025ರ ಜುಲೈ 1 ರಿಂದ ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ. ಬೆಂಗಳೂರು–ಹೆಬ್ಬಾಳ–ನಾಗವಾರ ಕಣಿವೆಯ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಶಿಡ್ಲಘಟ್ಟ ಅಮಾನಿ ಕೆರೆಯಿಂದ ಆ ತಾಲೂಕಿನ 45 ಕೆರೆಗಳಿಗೂ ಹಾಗೂ ಚಿಂತಾಮಣಿಯ 119 ಕೆರೆಗಳಿಗೆ ಹರಿಸುವ ಯೋಜನೆಯನ್ನು 237.10 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು.

ನಿಯಂತ್ರಣ ಸಂಬಂಧ ಮಸೂದೆ

2025; ಕರ್ನಾಟಕ ರೋಹಿತ್ ವೇಮುಲಾ ಮಸೂದೆ, 2025; ಕರ್ನಾಟಕ ತಪ್ಪು ಮಾಹಿತಿ, ನಕಲಿ ಸುದ್ದಿ ನಿಷೇಧ ಮಸೂದೆ, 2025; ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ತಡೆಗಟ್ಟುವಿಕೆ ಮಸೂದೆ, 2025' ಎಂದು ಪಾಟೀಲ್ ಸುದ್ದಿಗಾರರಿಗೆ ತಿಳಿಸಿದರು.

ಈ ಮಸೂದೆಗಳನ್ನು ಇಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಕೆಲವು ಮಸೂದೆಗಳ ಕುರಿತು ವಿವರವಾದ ಚರ್ಚೆಯ ಅಗತ್ಯವಿದೆ ಎಂದು ನಾನು ಉಲ್ಲೇಖಿಸಿದ್ದೇನೆ. ಮುಂದಿನ ಸಂಪುಟ ಸಭೆಗೂ ಮುನ್ನ ಸಂಬಂಧಪಟ್ಟ ಸಚಿವರು ಸಭೆ ಸೇರಿ ಚರ್ಚಿಸಿ ಮಸೂದೆಗಳನ್ನು ಸಂಪುಟದ ಮುಂದೆ ತರಬೇಕೆಂದು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಎದುರಿಸುವ ವಿದ್ಯಾರ್ಥಿಗಳಿಗೆ 1 ಲಕ್ಷ ರೂ.ವರೆಗೆ ಪರಿಹಾರ ಮತ್ತು ತಪ್ಪಿತಸ್ಥರಿಗೆ ಒಂದು ವರ್ಷ ಜೈಲು ಶಿಕ್ಷೆ ಹಾಗೂ 10,000 ರೂ. ದಂಡ ವಿಧಿಸಲು ರೋಹಿತ್ ವೇಮುಲಾ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದರು. ಶಿಕ್ಷಣ ವ್ಯವಸ್ಥೆಯಲ್ಲಿ ಯಾರೂ ಜಾತಿ ಆಧಾರಿತ ತಾರತಮ್ಯವನ್ನು ಎದುರಿಸದಂತೆ ನೋಡಿಕೊಳ್ಳಲು 'ರೋಹಿತ್ ವೇಮುಲಾ ಕಾಯ್ದೆ'ಯನ್ನು ಜಾರಿಗೆ ತರುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಳೆದ ಏಪ್ರಿಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಆಶಯಗಳಿಗೆ ಸಂಪೂರ್ಣ ವಿರುದ್ಧ

ನೀಡಿದ ನಂತರ ಈಗ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರ ಮೀಸಲಾತಿಯನ್ನು 10% ನಿಂದ 15%ಗೆ ಹೆಚ್ಚಿಸಲು ಹೊರಟಿದೆ. ಧರ್ಮಾಧಾರಿತ ಮೀಸಲಾತಿ ನೀಡುವುದು ಸಂವಿಧಾನದ ಆಶಯಗಳಿಗೆ ಸಂಪೂರ್ಣವಾಗಿ ವಿರುದ್ಧವಾದದ್ದು ಎಂದು ಸ್ವತಃ ಬಾಬಾ ಸಾಹೇಬ್ ಅಂಬೇಡ್ಕರ್ ಅವರೆ ಹೇಳಿದ್ದರೂ, ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಗುತ್ತಿಗೆ ಕಾಮಗಾರಿಗಳಲ್ಲಿ 4% ಮೀಸಲಾತಿ ನೀಡಲು ಮುಂದಾಗಿತ್ತು. ಈಗ ಬಡವರಿಗೆ ಮನೆ ಕೊಡುವುದರಲ್ಲಿಯೂ ಮುಸಲ್ಮಾನರಿಗೆ ಆದ್ಯತೆ ಕೊಡಲು ಮುಂದಾಗಿದೆ. ಇದು ಕಾಂಗ್ರೆಸ್ ಪಕ್ಷದ ಸಂವಿಧಾನ ವಿರೋಧಿ ಮನಸ್ಥಿತಿಗೆ ಮತ್ತೊಂದು ಸಾಕ್ಷಿ ಎಂದು ದೂರಿದ್ದಾರೆ.

11 ದಿನದ ಉತ್ಸವ!

ಪ್ರದರ್ಶನವಾಗಿ ಉಳಿದಿದೆ ಎಂದು ಪ್ರೊ.ಅಯ್ಯಂಗಾರ್ ಹೇಳಿದ್ದಾರೆ. ಎರಡು ದಿನ ಹೆಚ್ಚುವರಿಯಾಗಿರುವುದನ್ನು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ದೃಢಪಡಿಸಿದ್ದಾರೆ. ಪಂಚಾಂಗ ಮತ್ತು ಪೀಳಿಗೆಯಿಂದ ಬಂದ ಸಾಂಪ್ರದಾಯಿಕ ಗ್ರಂಥಗಳನ್ವಯ ಕಟ್ಟುನಿಟ್ಟಾಗಿ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸಹ ಪ್ರತಿಕ್ರಿಯಿಸಿ, ಸಿಎಂ ಸಿದ್ದರಾಮಯ್ಯರ ಅಧ್ಯಕ್ಷತೆಯಲ್ಲಿ ದಸರಾ ಉನ್ನತ ಮಟ್ಟದ ಸಮಿತಿಯು ಅಧಿಕೃತವಾಗಿ ದಸರಾ ವೇಳಾಪಟ್ಟಿ ನಿಗದಿಪಡಿಸಲಿದೆ ಎಂದರು. ಖಾಸಗಿ ದಸರಾ ಆಚರಣೆಗಳ ಕುರಿತು ರಾಜಪುರೋಹಿತರೊಂದಿಗೆ ಸಮಾಲೋಚನೆ ನಡೆಯುತ್ತಿದ್ದು, ಹಿಂದಿನ ಮೈಸೂರು ರಾಜ ಮನೆತನದ ಸದಸ್ಯರು ಸಾಂಪ್ರದಾಯಿಕ ಸಮಾರಂಭಗಳಿಗೆ ಪುರೋಹಿತರ ಸಲಹೆಯನ್ನ ಪಾಲಿಸುತ್ತಾ ಬಂದಿದ್ದಾರೆ ಎಂದು ಅವರು ತಿಳಿಸಿದರು.

ಮಹಿಳೆ ಬಲಿ

ಅರಣ್ಯಾಧಿಕಾರಿ ಸತೀಶ್ ಕುಮಾರ್, ಡಿವೈಎಸ್‌ಪಿ ಲಕ್ಷ್ಮಯ್ಯ, ಬೇಗೂರು ಸರ್ಕಲ್ ಇನ್ಸ್‌ಪೆಕ್ಟರ್ ವನರಾಜು, ಸಬ್‌ಇನ್ಸ್‌ಪೆಕ್ಟರ್ ಚರಣ್ ಗೌಡ ಸ್ಥಳಕ್ಕೆ ತೆರಳಿ ರಕ್ತದ ಕಲೆಗಳನ್ನು ಆಧರಿಸಿ ಪೊದೆಯೊಳಗೆ ಇದ್ದ ಕಳೇಬರವನ್ನು ಪತ್ತೆ ಹಚ್ಚಿದರು.

ಹುಲಿ ದಾಳಿಯಿಂದ ರೊಚ್ಚಿಗೆದ್ದ ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ರೈತ ಸಂಘಟನೆ ಸದಸ್ಯರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ದಾಳಿ ನಡೆಸುತ್ತಿರುವ ಹುಲಿಗೆ ಗುಂಡಿಕ್ಕಬೇಕು. ಮೃತಳ ಕುಟುಂಬದ ವಾರಸುದಾರರಿಗೆ 25 ಲಕ್ಷ ರೂಪಾಯಿ ಪರಿಹಾರ ಹಾಗೂ ಮಕ್ಕಳಿಗೆ ಅರಣ್ಯ ಇಲಾಖೆಯಲ್ಲಿ ಖಾಯಂ ಉದ್ಯೋಗ ಕೊಡುವಂತೆ ಒತ್ತಾಯಿಸಿ, ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಬಂಡೀಪುರ ಹುಲಿ ಸಂರಕ್ಷಣಾ ಯೋಜನೆಯ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್ ಸರ್ಕಾರಿ ನಿಯಮದಂತೆ ಸ್ಥಳದಲ್ಲಿಯೇ 10 ಲಕ್ಷ ಪರಿಹಾರದ ಚೆಕ್ ನೀಡಿದರು. ಸದ್ಯ ಮಕ್ಕಳಿಗೆ ತಾತ್ಕಾಲಿಕವಾಗಿ ಉದ್ಯೋಗ ನೀಡಲಾಗುವುದು ಎಂದು ಪ್ರಕಟಿಸಿದ ನಂತರ ಪ್ರತಿಭಟನೆ ಕೈಬಿಡಲಾಯಿತು. ಮರಣೋತ್ತರ ಪರೀಕ್ಷೆಗಾಗಿ ದೇಹವನ್ನು ಬೇಗೂರಿನ ಸಮುದಾಯ ಆಸ್ಪತ್ರೆಗೆ ಕೊಂಡೊಯ್ಯಲಾಯಿತು.

ನಾಳೆಯಿಂದ ಹುಲಿ ಸೆರೆ ಕಾರ್ಯಾಚರಣೆ: ಈ ಭಾಗದಲ್ಲಿ ಹುಲಿ ಮತ್ತೆ ದಾಳಿ ಮಾಡುವ ಭೀತಿ ಇರುವುದರಿಂದ ಅದನ್ನು ಸೆರೆಹಿಡಿಯಲು ಬೋನು ಇರಿಸಿ ಚಲನವಲನ ಪತ್ತೆಗೆ ಕ್ಯಾಮೆರಾ ಅಳವಡಿಸಲಾಗುವುದು. ಸಾಕಾನೆಗಳನ್ನು ಕರೆತಂದು ನಾಳೆ (ಜೂ.20) ಯಿಂದ ಕೂಂಬಿಂಗ್ ನಡೆಸಲಾಗುತ್ತದೆ ಎಂದು ಬಂಡೀಪುರ ಹುಲಿ ಸಂರಕ್ಷಣಾ ಯೋಜನೆಯ ಕ್ಷೇತ್ರ ನಿರ್ದೇಶಕ ಪ್ರಭಾಕರನ್ ತಿಳಿಸಿದ್ದಾರೆ.

ಇಂದಿನಿಂದ ಮೈಸೂರಲ್ಲಿ ಗುಜರಾತ್ ಕರಕುಶಲ ಉತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಗುಜರಾತ್ ಇಂಡೆಕ್ಸ್ಟ್–ಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ಜೋಶಿ ಮಾತನಾಡಿದರು. ಇದೇ ವೇಳೆ ಕುಶಲಕರ್ಮಿಗಳು ಗುಜರಾತ್ ಶೈಲಿಯ ವಸ್ತ್ರಾಭರಣ ಪ್ರದರ್ಶಿಸಿದರು.

ಮೈಸೂರು, ಜೂ.19(ಜಿಎ)–ಗುಜರಾತ್ ರಾಜ್ಯ ಸರ್ಕಾರದ ಕಾಟೇಜ್ ಮತ್ತು ಗ್ರಾಮೀಣ ಕೈಗಾರಿಕೆ ಗಳು, ಕೈಗಾರಿಕಾ ವಿಸ್ತರಣಾ ಕಾಟೇಜ್ (INDEXT-C) ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಸಹಯೋಗದೊಂದಿಗೆ ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ 10ನೇ ಗುಜರಾತ್ ಕರಕುಶಲ ಉತ್ಸವವನ್ನು ಜೂ.20 ರಿಂದ 29ರವರೆಗೆ ಆಯೋಜಿಸಲಾಗಿದೆ ಎಂದು ಗುಜರಾತ್ ಇಂಡೆಕ್ಸ್ಟ್–ಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ಜೋಶಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.20 ರಂದು ಸಂಜೆ 4 ಗಂಟೆಗೆ ಚಾಮರಾಜನಗರದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣು ವರ್ಧನ್, ಜವಳಿ ಅಭಿವೃದ್ಧಿ ಆಯುಕ್ತೆ ಡಾ.ಕೆ.ಜ್ಯೋತಿ, ಕೆ.ಅನ್ನಪೂರ್ಣ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಮೇಳದಲ್ಲಿ ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದಿರುವ ಕುಶಲಕರ್ಮಿಗಳು ಒಂದೇ ಸೂರಿನಡಿಯಲ್ಲಿ ಕರಕುಶಲ ವಸ್ತುಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಗುಜರಾತ್ ರಾಜ್ಯದ ವಿವಿಧ ಭಾಗಗಳ ಪ್ರಸಿದ್ಧ ಹಾಗೂ ಕ್ರಿಯಾಶೀಲರಾಗಿರುವ ಸುಮಾರು 70ಕ್ಕೂ ಹೆಚ್ಚು ಕುಶಲಕರ್ಮಿಗಳು ಮೇಳದಲ್ಲಿ ಭಾಗವಹಿಸುತ್ತಿದ್ದಾರೆ ಎಂದರು.

ಕುಶಲಕರ್ಮಿಗಳು ತಯಾರಿಸಿದ ಪಟೋಲ ಸೀರೆಗಳು, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್‌ಶೀಟ್ ಗಳು, ಟವಲ್‌ಗಳು, ಕುಶನ್ ಕವರ್ ಗಳು, ಪರಿಸರ ಸ್ನೇಹಿ ಆಭರಣಗಳು, ಡ್ರೆಸ್ ಮೆಟೀರಿಯಲ್‌ಗಳು, ಮಣ್ಣಿನಿಂದ ತಯಾರಿಸಿದ ವಸ್ತುಗಳು, ಬೀಡ್ ವರ್ಕ್, ಮೆಟಲ್ ವರ್ಕ್, ಕುರ್ತಿಗಳು, ಚನಿಯಾ ಚೋಲಿ, ಬಾಂದಿನಿ ಹಾಗೂ ಇನ್ನಿತರ ಆಕರ್ಷಣೀಯ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನ ಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ. ಮೇಳದ ವಿಶೇಷ ಎಂದರೆ ತಯಾರಕರಿಂದಲೇ ನೇರವಾಗಿ ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಒದಗಿಸುವ ಪ್ರಯತ್ನವನ್ನು ಗುಜರಾತ್ ಸರ್ಕಾರ ಮಾಡುತ್ತಿದೆ. ಈ ಕಾರಣದಿಂದಾಗಿ ಮೈಸೂರು ಹಾಗು ಸುತ್ತಮುತ್ತಲಿನ ಗ್ರಾಹಕರಿಗೆ ಗುಜರಾತ್ ಸಂಸ್ಕೃತಿಯ ಉಡುಗೆ–ತೊಡುಗೆಗಳು ಮತ್ತು ಆಲಂಕಾರಿಕ ವಸ್ತುಗಳು ನೇರವಾಗಿ, ಉತ್ತಮ ಗುಣಮಟ್ಟದಲ್ಲಿ, ಕಡಿಮೆ ಬೆಲೆಗೆ ದೊರೆಯಲಿದೆ. ಹಾಗೇ ಸಂಸ್ಕೃತಿ ವಿನಿಮಯವಾಗಲಿದೆ ಎಂದು ತಿಳಿಸಿದರು.

ವಿಶೇಷವಾಗಿ ಶಾಲಾ ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಕಾರ್ಪೋರೇಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಆಸಕ್ತಿಯುಳ್ಳವರಿಗೆ ಗುಜರಾತಿನ ಪಾರಂಪರಿಕ ಕಲೆಯ ಬಗ್ಗೆ ತರಬೇತಿಯನ್ನು ಗುಜರಾತಿನ ಕುಶಲ ಕರ್ಮಿಗಳು ಮೇಳದಲ್ಲಿ ನೀಡಲಿದ್ದಾರೆ. ಜೂ.20 ರಿಂದ 22ರವರೆಗೆ ತನಕ ಸಂಜೆ ಗಂಟೆ 6 ಗಂಟೆಯಿಂದ ರಾತ್ರಿ 8ರವರೆಗೆ ಗುಜರಾತಿನ ಪ್ರಸಿದ್ಧ ಸಾಂಸ್ಕೃತಿಕ ಕಲಾ ತಂಡಗಳಾದ ಶ್ರೀಮತಿ ಮೀನಾ ಭೇನ್ ಉದಯ ಭಾಯಿ ಸೇವಕ್ ಮತ್ತು ತಂಡದವರಿಂದ ಗರ್ಭಾ ನೃತ್ಯ ಮತ್ತು ಶ್ರೀ ರಾಜು ಭಾಯಿ ಭೋಕಿರಿಯ ಮತ್ತು ತಂಡದವರಿಂದ ಧಾಲ್ ತಲ್ವಾರ್ ರಾಸ್ ಪ್ರದರ್ಶನ ಗೊಳ್ಳಲಿದೆ. ಮೈಸೂರಿನ ಕಲಾ ರಸಿಕರು ಉಚಿತ ವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇದೊಂದು ಸುವರ್ಣ ಅವಕಾಶ ಎಂದರು. ಸುದ್ದಿ ಗೋಷ್ಠಿಯಲ್ಲಿ ಸಂಯೋಜನಾಧಿಕಾರಿ ಎಂ.ಶಿವನಂಜ ಸ್ವಾಮಿ, ರಾಕೇಶ್ ರೈ, ಡಾ.ಸ್ನೇಹಲ್ ಮಕ್ವಾನ್ ಇದ್ದರು.


ಇರಾನ್–ಇಸ್ರೇಲ್ ಸಂಘರ್ಷ; ಅಮೆರಿಕಾಗೆ ಪುಟಿನ್ ಎಚ್ಚರಿಕೆ!

ಮಾಸ್ಕೊ, ಜೂ.19– ಮಧ್ಯಪ್ರಾಚ್ಯದಲ್ಲಿ ಸದ್ಯ ವಾತಾವರಣ ಬಿಗಡಾಯಿಸಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧ ದಿನದಿಂದ ದಿನಕ್ಕೆ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಎರಡೂ ದೇಶಗಳು ಪರಸ್ಪರ ತೀವ್ರ ಕ್ಷಿಪಣಿ, ಡ್ರೋನ್ ದಾಳಿಗೆ ಮುಂದಾಗುತ್ತಿವೆ. ಏಟಿಗೆ ಎದಿರೇಟು, ಪ್ರತೀಕಾರದ ಜ್ವಾಲೆ ಚಿಮ್ಮುತ್ತಿದೆ. ಈ ಮಧ್ಯೆ ಹಸ್ತಕ್ಷೇಪಕ್ಕೆ ಮುಂದಾಗಿರುವ ಅಮೆರಿಕಾಗೆ ರಷ್ಯಾ ಖಡಕ್ ವಾರ್ನಿಂಗ್ ರವಾನಿಸಿದೆ.

ರಷ್ಯಾ ಕೆಂಗಣ್ಣಿಗೆ ಅಮೆರಿಕ: ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಕ್ಷಿಪಣಿ, ಡ್ರೋನ್ ದಾಳಿಯನ್ನು ನಡೆಸಿದ ಇರಾನ್‌ಗೆ ಅಮೆರಿಕ ಎಚ್ಚರಿಕೆ ರವಾನಿಸಿತು. ಈ ಯುದ್ಧದಲ್ಲಿ ಒಪ್ಪಂದ ಮಾತುಕತೆ ಜೊತೆಗೆ ಕದನ ವಿರಾಮಕ್ಕೆ ಇರಾನ್ ಮುಂದಾಗಬೇಕು ಎಂದು ಯುಎಸ್ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದರು. ಇದಕ್ಕೆ ಬಗ್ಗದ ಇರಾನ್, ತನ್ನ ಸೇಡಿನ ದಾಳಿಯನ್ನು ಮುಂದುವರಿಸಿದೆ. ಈ ಬೆಳವಣಿಗೆಯ ಬೆನ್ನಲ್ಲೇ ಅಮೆರಿಕ ಕೂಡ ಈ ಯುದ್ಧಕ್ಕೆ ಪ್ರವೇಶಿಸಲಿದೆ ಎಂಬ ಸುದ್ದಿ ಸದ್ಯ ರಷ್ಯಾವನ್ನು ಕೆಣಕಿದೆ.

ಟ್ರಂಪ್‌ಗೆ ಪುಟಿನ್ ಎಚ್ಚರಿಕೆ!: ಇರಾನ್ ಶರಣಾಗಬೇಕು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆ ಮತ್ತು ಪಶ್ಚಿಮ ಏಷ್ಯಾದ ಕಡೆಗೆ ಅಮೆರಿಕದ ಯುದ್ಧ ವಿಮಾನಗಳ ಚಲನೆ ಇದೀಗ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಾಳ್ಮೆಯನ್ನು ಪರೀಕ್ಷಿಸಿದೆ. ಈ ಹಿನ್ನಲೆಯಲ್ಲಿ ಸೂಪರ್ ಪವರ್ ಅಮೆರಿಕಕ್ಕೆ ರಷ್ಯಾ ಬಲವಾದ ಎಚ್ಚರಿಕೆ ಕೊಟ್ಟಿದೆ. ಇರಾನ್–ಇಸ್ರೇಲ್ ಯುದ್ಧದಲ್ಲಿ ಯುಎಸ್ ಮಿಲಿಟರಿ ಮಧ್ಯಪ್ರವೇಶಿಸಿದರೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ ಎಂದು ರಷ್ಯಾ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ ಮಿಲಿಟರಿ ಹಸ್ತಕ್ಷೇಪ ಅತ್ಯಂತ ಅಪಾಯಕಾರಿ ಎಂದು ರಷ್ಯಾ ಎಚ್ಚರಿಸಿದೆ. ಈ ಪರಿಸ್ಥಿತಿಯಲ್ಲಿ ಮಿಲಿಟರಿ ಹಸ್ತಕ್ಷೇಪದ ವಿರುದ್ಧ ನಾವು ವಾಷಿಂಗ್ಟನ್‌ಗೆ ನಿರ್ದಿಷ್ಟವಾಗಿ ಎಚ್ಚರಿಕೆ ನೀಡಲು ಬಯಸುತ್ತೇವೆ. ಇದು ನಿಜವಾಗಿಯೂ ಅನಿರೀಕ್ಷಿತ ಪರಿಣಾಮಗಳನ್ನು ಹೊಂದಿರುವ ಅತ್ಯಂತ ಅಪಾಯಕಾರಿ ಹೆಜ್ಜೆ ಈ ಬಗ್ಗೆ ಎಚ್ಚರ ಇರಲಿ ಎಂದು ರಷ್ಯಾದ ವಿದೇಶಾಂಗ ವಕ್ತಾರೆ ತಿಳಿಸಿದ್ದಾರೆ.

ಅಭಿನಂದನೆ...



ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಮಾಜಿ ಸಂಸದ ಡಿ.ಕೆ.ಸುರೇಶ್ ಅವರನ್ನು ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್, ಸದಸ್ಯ ಜಿ.ಶ್ರೀನಾಥ್ ಬಾಬು, ಮುಖಂಡ ಜಕಾರಿಯ ಜಾಕ್, ಹರೀಶ್ ನಾಯ್ಡು ಇತರರು ಆತ್ಮೀಯವಾಗಿ ಅಭಿನಂದಿಸಿದರು.

ತಮ್ಮಣ್ಣ ನಿಧನ



ಮೈಸೂರು, ಜೂ.19– ಶ್ರೀರಂಗಪಟ್ಟಣ ತಾಲೂಕು ಪಿ.ಹೊಸಳ್ಳಿ ಗ್ರಾಮದ ಮುಖಂಡರೂ ಹಾಗೂ ಅವಲಕ್ಕಿ ಭಟ್ಟಿ ರೈಸ್‌ಮಿಲ್ ಮಾಲೀಕರಾದ ತಮ್ಮಣ್ಣ(70) ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜೂ.20) ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮೈಸೂರಿನ ಹಿರಿಯ ರಂಗಕರ್ಮಿ ಧನಂಜಯರಿಗೆ ರಂಗರತ್ನ ಪ್ರಶಸ್ತಿ ಪ್ರದಾನ

ರಂಗಭೂಮಿ ಕ್ಷೇತ್ರದಲ್ಲಿ ನ.ರತ್ನರ ಸಾಧನೆ ಬಗ್ಗೆ ಸ್ಮರಣೆ



ಮೈಸೂರಿನ ರೋಟರಿ ಶಾಲೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕ ಧನಂಜಯ ಅವರಿಗೆ ರಂಗ ರತ್ನ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಮೈಸೂರು, ಜೂ.19(ಬಿಎಲ್‌ಯು)– ಮೈಸೂರಿನ ಹಿರಿಯ ರಂಗಕರ್ಮಿ ಎನ್.ಧನಂಜಯ ಅವರಿಗೆ ರಂಗರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯ ರೋಟರಿ ಶಾಲೆಯ ಸಭಾಂಗಣದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕರೂ ಆದ ಅಧ್ಯಾಪಕ ಧನಂಜಯ ಅವರಿಗೆ ರೋಟೆರಿಯನ್ ಎನ್.ಎಸ್.ಆನಂದ್, ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಮೊದಲ ನಿರ್ದೇಶಕರೂ ಆದ ಖ್ಯಾತ ರಂಗಕರ್ಮಿ ನ.ರತ್ನ ಅವರ ಹೆಸರಿನಲ್ಲಿ ರಂಗಭೂಮಿ ಕ್ಷೇತ್ರದಲ್ಲಿ ಸ್ಮರಣೀಯ ಕೆಲಸ ಮಾಡಿದವರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಶಸ್ತಿ ಸ್ವೀಕರಿಸಿದ ನಂತರ ಮಾತನಾಡಿದ ಧನಂಜಯ, ನರತ್ನ ಅವರು ರಂಗಭೂಮಿ ಹಾಗೂ ರಂಗಾಸಕ್ತರ ಮನದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ ಎಂದರು.

ನಾನು ಮೊದಲ ಬಾರಿ ನಾಟಕದಲ್ಲಿ ಅಭಿನಯಿಸುವ ವೇಳೆ ನನ್ನ ಸ್ನೇಹಿತರು ಹಾಗೂ ಒಡನಾಡಿಗಳು ನನ್ನನ್ನು ಉತ್ತೇಜಿಸಿದರು. ಟಿವಿ ಧಾರವಾಹಿಗಳ ಪ್ರಭಾವದ ಮಧ್ಯೆ ನಾಟಕಗಳು ಮರೆಯಾಗುತ್ತಿವೆ ಎಂಬ ಮಾತುಗಳು ಕೇಳಿ ಬರುತ್ತಿದ್ದ ಸಂದರ್ಭದಲ್ಲಿ ನನ್ನನ್ನು ರಂಗಾಯಣಕ್ಕೆ ಕರೆದೊಯ್ದು ರಂಗಭೂಮಿಯ ಮಹತ್ವ ತಿಳಿಸಿದರು. ಈ ಮೂಲಕ ರಂಗಭೂಮಿ ಕ್ಷೇತ್ರದಲ್ಲಿ ಮುಂದುವರೆಯಲು ನನ್ನ ಬೆನ್ನು ತಟ್ಟಿದರು ಎಂದು ಧನಂಜಯ ಸ್ಮರಿಸಿದರು.

ಇದೇ ವೇಳೆ ನ.ರತ್ನ ಕೈಯಲ್ಲಿ ಕೈಲಾಸಂ ಪುಸ್ತಕವನ್ನು ಮೈಸೂರಿನ ಗೀತಾ ಬುಕ್ ಹೌಸ್ ಮಾಲೀಕ ಎಂ.ಸತ್ಯನಾರಾಯಣರಾವ್ ಬಿಡುಗಡೆ ಮಾಡಿದರು. ಈ ವೇಳೆ 'ಕೈಯಲ್ಲಿ ಕೈಲಾಸಂ' ಪುಸ್ತಕ ಕುರಿತು ಮಾತನಾಡಿದ ಲೇಖಕ ಶಶಿಧರ ಡೋಂಗ್ರೆ, ಈ ಪುಸ್ತಕದಲ್ಲಿ ನಾಟಕ, ಪ್ರಬಂಧ ಮತ್ತು ಕವಿತೆಗಳಿವೆ. ಮಹಾಭಾರತ ಕುರಿತಂತೆ ಬಹಳಷ್ಟು ವಿಚಾರಗಳಿವೆ ಎಂದು ಹೇಳಿದರು.

ನ.ರತ್ನ ಅವರ ಪುತ್ರಿ ಕವಿತಾ ರತ್ನ, ರಂಗಕರ್ಮಿ ಪ್ರಸಾದ್ ಕುಂಡೂರ್ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಅಪಾರ

● ಹಿರಿಯ ಶಾಸಕ ಜಿ.ಟಿ.ದೇವೇಗೌಡರ ಪ್ರಶಂಸೆ ● ಕನ್ನಡಾಂಬೆ ರಕ್ಷಣಾ ವೇದಿಕೆಯಿಂದ ಬಸವ, ನಾಲ್ವಡಿ ಜಯಂತಿ ● ಪೌರಕಾರ್ಮಿಕರಿಗೆ ಬಟ್ಟೆ ವಿತರಣೆ, ಸಹಪಂಕ್ತಿ ಭೋಜನ



ಮೈಸೂರಿನ ಹೂಟಗಳ್ಳಿ ಸರಸ್ವತಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಪೌರಕಾರ್ಮಿಕರಿಗೆ ಬಟ್ಟೆ ವಿತರಣೆ, ಸಹಪಂಕ್ತಿ ಭೋಜನ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು,ಜೂ.19–ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಅಪಾರವಾದುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡರು ಶ್ಲಾಘಿಸಿದರು.

ಕನ್ನಡಾಂಬೆ ರಕ್ಷಣಾ ವೇದಿಕೆಯು ಹೂಟಗಳ್ಳಿಯ ಸರಸ್ವತಿ ಸಮುದಾಯ ಭವನದಲ್ಲಿ ಬಸವ ಜಯಂತಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಪೌರಕಾರ್ಮಿಕರಿಗೆ ಬಟ್ಟೆ ವಿತರಣೆ ಹಾಗೂ ಅವರೊಂದಿಗೆ ಸಹಪಂಕ್ತಿ ಭೋಜನ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ನಮ್ಮ ಸುತ್ತಮುತ್ತ ಸ್ವಚ್ಛತೆ ಇದ್ದರೆ ಪರಿಸರವೂ ಸ್ವಚ್ಛವಾಗಿರುತ್ತದೆ. ಆರೋಗ್ಯವೂ ಚೆನ್ನಾಗಿರುತ್ತದೆ. ಪೌರಕಾರ್ಮಿಕರ ಶ್ರಮದಿಂದಲೇ ಮೈಸೂರು ನಗರಕ್ಕೆ ಹಲವು ಬಾರಿ ಸ್ವಚ್ಛತಾ ನಗರಿ ಪ್ರಶಸ್ತಿ ಲಭ್ಯವಾಗಿದೆ ಎಂದರು.

ಬಸವ ಹಾಗೂ ನಾಲ್ವಡಿ ಅವರ ಜಯಂತಿ ಅಂಗವಾಗಿ ಪೌರಕಾರ್ಮಿಕರಿಗೆ ಉಚಿತವಾಗಿ ಬಟ್ಟೆ ವಿತರಿಸಿ, ಅವರೊಂದಿಗೆ ಸಹಪಂಕ್ತಿ ಭೋಜನ ಮಾಡುತ್ತಿರುವುದು ಅರ್ಥಪೂರ್ಣ ಕಾರ್ಯಕ್ರಮ ಎಂದರು.

ಮುಖ್ಯ ಅತಿಥಿಯಾಗಿದ್ದ ಬಿಜೆಪಿ ಯುವ ಮುಖಂಡ ವಿ.ಕವೀಶ್‌ಗೌಡ ಮಾತನಾಡಿ, ಪೌರಕಾರ್ಮಿಕರ ಸೇವೆಯ ಬಗ್ಗೆ ಅಪಾರವಾದ ಗೌರವವಿದೆ. ನೀವು ನಗರ, ಪಟ್ಟಣ ಪ್ರದೇಶಗಳ ಸ್ವಚ್ಛತೆಯ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಉನ್ನತ ಹುದ್ದೆಗಳಿಗೆ ಏರುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಸಾನ್ನಿಧ್ಯ ವಹಿಸಿದ್ದ ಬೇಬಿಬೆಟ್ಟದ ಶ್ರೀ ರಾಮಯೋಗೇಶ್ವರ ಮಠದ ಶಿವಬಸವ ಸ್ವಾಮೀಜಿ ಮಾತನಾಡಿ, ಬ್ರಾಹ್ಮಣರಾಗಿ ಹುಟ್ಟಿದ ಬಸವಣ್ಣ ಮೌಢ್ಯ, ಕಂದಾಚಾರ ವಿರೋಧಿಸಿ, ವಿಶ್ವಗುರು ಎನಿಸಿಕೊಂಡರು. ಅವರು ತೋರಿಸಿದ ಮಾರ್ಗ, ಮಾಡಿದ ಸಾಧನೆ ನಮಗೆ ದಾರಿದೀಪವಾಗಿದೆ ಎಂದರು.

ಅದೇ ರೀತಿ ನಾಲ್ವಡಿ ಅವರು ಮಾಡಿದ ಜನೋಪಯೋಗಿ ಕೆಲಸಗಳಿಂದಾಗಿ ಮೈಸೂರು ರಾಜಮನೆತನದ ಬಗ್ಗೆ ಅಪಾರವಾದ ಗೌರವವಿದೆ. ಪ್ರತಿಯೊಬ್ಬರೂ ಮನೆಯಲ್ಲಿ ನಾಲ್ವಡಿಯವರ ಫೋಟೋ ಇಟ್ಟು ಪೂಜಿಸಬೇಕು ಎಂದು ಹೇಳಿದರು.

ಸರ್ಕಾರ ನಮಗೆ ಬೇಕಾದ್ದನ್ನೆಲ್ಲಾ ಕೊಡುತ್ತಿದೆ ಎಂಬ ಕಾರಣದಿಂದ ಕೆಲವರು ದುಡಿಯುವುದನ್ನೇ ಬಿಟ್ಟಿದ್ದಾರೆ. ಈ ರೀತಿಯಾಗಬಾರದು. ದುಡಿದು ತಿನ್ನಬೇಕು. ರೈತಾಪಿ ವರ್ಗ ಬೆಳೆಯದಿದ್ದಲ್ಲಿ ಯಾರಿಗೂ ಅನ್ನ ಸಿಗುವುದಿಲ್ಲ. ಅದೇ ರೀತಿ ಪೌರಕಾರ್ಮಿಕರು ಸ್ವಚ್ಛ ಮಾಡದಿದ್ದಲ್ಲಿ ನಮ್ಮ ಪರಿಸರ ಏನಾಗುತ್ತದೆ ಯೋಚಿಸಿ ಎಂದರು.

> ಬಸವಣ್ಣನವರು 12ನೇ ಶತಮಾನದಲ್ಲಿಯೇ ಕಾಯಕವೇ ಕೈಲಾಸ ಎಂಬ ತತ್ವ ನೀಡಿದ್ದಾರೆ. ಸೇವೆ ಮಾಡುವ ಎಲ್ಲರೂ ಇದನ್ನು ಅರಿತುಕೊಳ್ಳಬೇಕು. ಅದೇ ರೀತಿ ಮೈಸೂರನ್ನು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇಡೀ ದೇಶಕ್ಕೆ ಮಾದರಿ ಆಡಳಿತ ನೀಡಿದವರು. ಸಮಾಜಮುಖಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದವರು.
> –ಜಿ.ಟಿ.ದೇವೇಗೌಡ, ಹಿರಿಯ ಶಾಸಕರು

ಎಲ್ಲಕ್ಕೂ ಸ್ಥಳೀಯ ಸಂಸ್ಥೆಗಳನ್ನು ಕಾಯದೇ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಬೇಕು ಎಂದು ಅವರು ಸಲಹೆ ಮಾಡಿದರು. ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಮಾತನಾಡಿ, ಪೌರಕಾರ್ಮಿಕರು ದೇವರ ಸಮಾನ ಎಂದು ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ್ ಮಾತನಾಡಿ, ತಮ್ಮ ಮಟ್ಟದಲ್ಲಿ ಪೌರಕಾರ್ಮಿಕರಿಗೆ ಸಾಧ್ಯವಾದಷ್ಟು ಸೇವೆ ಮಾಡಲಾಗಿದೆ ಎಂದರು. ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸೈನಿಕ ಅಕಾಡೆಮಿ ಮುಖ್ಯಸ್ಥ ಶ್ರೀಧರ್, ಸೆಸ್ಕ್ ಎಇಇ ಕೆ.ಕೆ.ಲಕ್ಷ್ಮೀಶ್, ಗೃಹ ನಿರ್ಮಾಣ ಸಂಘದ ಅಧ್ಯಕ್ಷ ಎಸ್.ರವಿ ಮುಖ್ಯ ಅತಿಥಿಗಳಾಗಿದ್ದರು. ಕನ್ನಡಾಂಬೆ ರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ರಾಜಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿದರು; ಮಾತನಾಡುವ ಗೊಂಬೆ ಖ್ಯಾತಿಯ ಸುಮಾ ರಾಜಕುಮಾರ್ ನಿರೂಪಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂ.21, ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ಸಾಮೂಹಿಕ ಯೋಗ ಅಭ್ಯಾಸ



ಮೈಸೂರು, ಜೂ.19 (ಜಿಎ)– ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು, ಮುರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಹಾಗೂ ಆಯುಷ್ ಮಂತ್ರಾಲಯದ ವತಿಯಿಂದ ಜೂ.21ರ ವಿಶ್ವಯೋಗ ದಿನದ ಅಂಗವಾಗಿ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಆವರಣದಲ್ಲಿ ಸಾಮೂಹಿಕ ಯೋಗ ಅಭ್ಯಾಸವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಸರ್ಬೇಶ್ವರ್ ಕಾರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ ಬೆಳಗ್ಗೆ 6 ರಿಂದ 8ರವರೆಗೆ ಸಾಮೂಹಿಕ ಯೋಗ ಅಭ್ಯಾಸ ಆಯೋಜಿಸಿದ್ದು, ಯೋಗ ಸಂಗಮ ವಿಷಯ ಕುರಿತ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್ ಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಮಹೇಶ್, ಪ್ರಣವ ಯೋಗಧಾಮದ ಸಂಸ್ಥಾಪಕ ಯೋಗ ಪ್ರವೀಣರಾದ ಜಯಕುಮಾರ ಸ್ವಾಮೀಜಿ ಭಾಗವಹಿಸಲಿದ್ದಾರೆ. ಯೋಗದ ಮೂಲಕ ಆರೋಗ್ಯ, ಸೌಹಾರ್ದತೆ, ಶಾಂತಿ ಸಂವರ್ಧನೆ ಈ ಕಾರ್ಯಕ್ರಮ ಮುಖ್ಯ ಉದ್ದೇಶವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸುಭಾಷ್ ಉಪಸ್ಥಿತರಿದ್ದರು.

ಪಯಣ ಕಾರು ಸಂಗ್ರಹಾಲಯದಲ್ಲೂ ಯೋಗ ದಿನಾಚರಣೆ

ಮೈಸೂರು,ಜೂ.19(ಎಂಟಿವೈ)– ಮೈಸೂರು–ಬೆಂಗಳೂರು ರಸ್ತೆಯ ಪಯಣ ಕಾರು ಸಂಗ್ರಹಾಲಯದಲ್ಲಿ ಜೂ.21ರಂದು ಬೆಳಗ್ಗೆ 7ಕ್ಕೆ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 3 ಸಾವಿರ ಯೋಗಪಟುಗಳು ಯೋಗ ಪ್ರದರ್ಶನ ನೀಡಲಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯಲ್ಲಿ ನಡೆಯುವ ಯೋಗ ದಿನದ ಕಾರ್ಯಕ್ರಮವನ್ನು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ್ ಒಡೆಯರ್, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು, ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಇಂದು ಬೃಹತ್ ರಕ್ತದಾನ ಶಿಬಿರ



ಮೈಸೂರು: ಮೈಸೂರಿನ ಪ್ರತಿಷ್ಠಿತ ಕಂಪನಿ ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆ ವತಿಯಿಂದ ಜೆ.ಕೆ. ಸಮೂಹ ಸಂಸ್ಥೆ ಅಧ್ಯಕ್ಷರಾಗಿದ್ದ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರ ಜನ್ಮದಿನದ ಸ್ಮರಣಾರ್ಥ ರಕ್ತದಾನ ಶಿಬಿರವನ್ನು ನಾಳೆ (ಜೂ.20) ಜೆ.ಕೆ.ಟೈರ್ಸ್ ಅಂಡ್ ಇಂಡಸ್ಟ್ರೀಸ್ ಲಿ., ವಿಕ್ರಾಂತ್ ಟೈರ್ ಪ್ಲಾಂಟ್; ಹೆಬ್ಬಾಳಿನ ಟ್ರಕ್ ರೇಡಿಯಲ್ ಟೈರ್ ಸ್ಥಾವರ; ಓಟಿ.ಆರ್. ಟೈರ್ ಸ್ಥಾವರ ಮತ್ತು ನಿರ್ಮಲ ಕಾನ್ವೆಂಟ್ ಹತ್ತಿರವಿರುವ ಜೆ.ಕೆ. ಅತಿಥಿ ಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ.9845271044, 9945067012 ಸಂಪರ್ಕಿಸಬಹುದು.

ಸರ್ಕಾರಿ ಯೋಜನೆಗಳ ಕುರಿತು ಜಾಗೃತಿ ಅಭಿಯಾನಕ್ಕೆ ಚಾಲನೆ



ಸರಕಾರಿ ಯೋಜನೆಗಳ ಕುರಿತ ಜಾಗೃತಿ ಅಭಿಯಾನಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಚಾಲನೆ ನೀಡಿದರು.

ಮೈಸೂರು: ಮೈಸೂರಿನ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಮತ್ತು ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ ಸಂಯುಕ್ತಾಶ್ರಯದಲ್ಲಿ ಶಾಂತಿನಗರದಲ್ಲಿ ಸರಕಾರಿ ಯೋಜನೆಗಳ ಕುರಿತು ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಚಾಲನೆ ನೀಡಿ ಮಾತನಾಡಿ, ಸರ್ಕಾರದ ಯೋಜನೆಗಳು ಹೆಚ್ಚಿನ ಜನರಿಗೆ ತಲುಪುವುದರೊಂದಿಗೆ ಜನರು ಈ ಅಭಿಯಾನವನ್ನು ಸದುಪಯೋಗಪಡಿಸಿಕೊಳ್ಳಲಿ ಎಂದರು.

ಮುಖ್ಯ ಅತಿಥಿಗಳಾಗಿ ಕಾರ್ಮಿಕ ಇಲಾಖೆ ಸಹಾಯಕ ಕಾರ್ಮಿಕ ಆಯುಕ್ತೆ ವೀಣಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಕ್ಷಣಾಧಿಕಾರಿ ಯೋಗೇಶ್, ಮೈಸೂರು ಪಾಲಿಕೆ ಡೇ–ಎನ್.ಯು.ಎಲ್.ಎಮ್ ಅಭಿಯಾನ ವ್ಯವಸ್ಥಾಪಕ ಡಾ.ಬೈರಲಿಂಗಯ್ಯ, ಮೈಸೂರು ಉತ್ತರವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರೇವಣ್ಣ, ಮೇವಾ ಎಜುಕೇಶನ್ ಸಂಸ್ಥೆಯ ಕಾರ್ಯದರ್ಶಿ ಶೇಕ್ ಅಬ್ದುಲ್ ನವಾಫ್ ಉಪಸ್ಥಿತರಿದ್ದರು. ತಮ್ಮ ಇಲಾಖೆಯಲ್ಲಿ ಮಕ್ಕಳಿಗೆ ಯುವ ಜನರಿಗೆ ಮತ್ತು ವಯಸ್ಕರಿಗೆ ಇರುವಂತಹ ವಿವಿಧ ಯೋಜನೆಗಳು ಮತ್ತು ಅದನ್ನು ಹೇಗೆ ಪಡೆದುಕೊಳ್ಳಬೇಕು ಎನ್ನುವುದನ್ನು ತಿಳಿಸಿದರು. ಜೊತೆಯಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿ ಜನರಿಗೆ ಯಾವುದೇ ಸಮಸ್ಯೆಗಳು ಇದ್ದಲ್ಲಿ ನೇರವಾಗಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸುವಂತೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್‌ಎಲ್‌ಎಚ್‌ಪಿ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಜೋಶ್ ವಹಿಸಿದ್ದರು.

ಐಎಎಸ್, ಕೆಎಎಸ್ ಪರೀಕ್ಷೆಗೆ ಜ್ಞಾನಬುತ್ತಿ ಸಂಸ್ಥೆಯಿಂದ ತರಬೇತಿ

ಮೈಸೂರು, ಜೂ.19(ಬಿಎಲ್‌ಯು)– ಐಎಎಸ್, ಕೆಎಎಸ್ ಮತ್ತು ಕರ್ನಾಟಕ ಸರ್ಕಾರ ಶೀಘ್ರದಲ್ಲಿಯೇ ಲಿಖಿತ ಪರೀಕ್ಷೆ ಮೂಲಕ ನೇಮಕಾತಿ ಮಾಡಿಕೊಳ್ಳುವ ವಿವಿಧ ಹುದ್ದೆಗಳ ಆಯ್ಕೆಗೆ ಮೈಸೂರಿನ ಜ್ಞಾನಬುತ್ತಿ ಸಂಸ್ಥೆ ಉಚಿತ ತರಬೇತಿ ನೀಡಲಿದೆ. ಆಸಕ್ತರು ಜೂ.26ರೊಳಗೆ ಸಂಜೆ 5.30ರಿಂದ 7.30 ಗಂಟೆವರೆಗೆ ಮೈಸೂರಿನ ಲಕ್ಷ್ಮಿಪುರಂನ ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ಹೆಚ್.ಬಾಲಕೃಷ್ಣ (9448117455) ತಿಳಿಸಿದ್ದಾರೆ. ವಿವರಗಳಿಗೆ ಸಂಯೋಜಕರಾದ ಸಿ.ಕೆ.ಕಿರಣ್ ಕೌಶಿಕ್ (9972830857), ಕೆ.ವೈ.ನಾಗೇಂದ್ರ (8296788251) ಅವರನ್ನು ಸಂಪರ್ಕಿಸಬಹುದು.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ. 19 –ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ವೀರಶೈವ ಅನಾಥಾಲಯದ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಕ್ಕೆ ಪ್ರಸಕ್ತ ಸಾಲಿನ ಶೈಕ್ಷಣಿಕ ಪ್ರವೇಶಾತಿಗೆ ಬಿ.ಎ., ಬಿ.ಕಾಂ., ಬಿಎಸ್‌ಸಿ, ಬಿಸಿಎ ತರಗತಿಗಳಿಗೆ ದಾಖಲಾಗಿರುವ ಶೇ. 50 ಕ್ಕಿಂತ ಹೆಚ್ಚು ಅಂಕ ಗಳಿಸಿರುವ, ಆರ್ಥಿಕವಾಗಿ ಹಿಂದುಳಿದ ಗ್ರಾಮಾಂತರ ವೀರಶೈವ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಜೂನ್ 16ರಿಂದ ಜುಲೈ 2ರವರೆಗೆ ವಿತರಿಸಲಾಗುವುದು. ಹೆಚ್ಚು ಅಂಕ ಪಡೆದ ಬಡ ವಿದ್ಯಾರ್ಥಿಗಳನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ 3ರೊಳಗೆ ಕಚೇರಿಗೆ ತಲುಪಿಸುವುದು. ವಿದ್ಯಾರ್ಥಿಗಳ ಆಯ್ಕೆಗೆ ಸಂದರ್ಶನವನ್ನು ಜುಲೈ 6ರಂದು ಬೆಳಗ್ಗೆ 10 ಗಂಟೆಗೆ ಅನಾಥಾಲಯದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಸಂದರ್ಶನಕ್ಕೆ ವಿದ್ಯಾರ್ಥಿಗಳು ಪೋಷಕರನ್ನು ಕಡ್ಡಾಯವಾಗಿ ಕರೆತರಲು ಕೋರಲಾಗಿದೆ. ಮೊ. 9916650106.

ಮೈಸೂರು ವಿವಿ ವ್ಯಾಪ್ತಿ ಪ್ಲಾಸ್ಟಿಕ್ ಬಳಕೆ ನಿಷೇಧಿಸುವುದು ಒಳಿತು

ಮೈಸೂರು ವೃತ್ತದ ಅರಣ್ಯಾಧಿಕಾರಿ ಡಾ.ಮಾಲತಿ ಪ್ರಿಯಾ ಸಲಹೆ



ಮೈಸೂರಿನ ಮಹಾರಾಜ ಕಾಲೇಜು ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಗುರುವಾರ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಜೂ.19(ಎಂಟಿವೈ)– ಮಹಾರಾಜ ಕಾಲೇಜು ಆವರಣದಲ್ಲಿ ಗಿಡ–ಮರಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮ ಪ್ರಶಂಸನೀಯ. ಕಾಲೇಜು ಕ್ಯಾಂಪಸ್‌ನಲ್ಲಿ ಪರಿಸರಕ್ಕೆ ಮಾರಕವಾದ ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲ್ ಬಳಕೆ ನಿಷೇಧಿಸಲು ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಸಲಹೆ ನೀಡಿದ್ದಾರೆ.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜು ಆವರಣದಲ್ಲಿ ವಿಶ್ವಮಾನವ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ಆಯೋಜಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ನೀರೆರದ ಬಳಿಕ ಮಾತನಾಡಿದ ಅವರು, ಮಹಾರಾಜ ಕಾಲೇಜು ಆವರಣದಲ್ಲಿ ಸಾಕಷ್ಟು ಗಿಡ–ಮರ ಬೆಳೆಸಲಾಗಿದೆ. ಅಲ್ಲದೆ, ಗಿಡ–ಮರಗಳನ್ನು ಕಾಪಾಡಿಕೊಳ್ಳುವುದಕ್ಕೂ ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಹೆಚ್ಚಿನ ಸಂಖ್ಯೆಯ ಗಿಡ, ಮರ ಇರುವುದರಿಂದ ಕಾಲೇಜಿನ ವಾತಾವರಣವೂ ಪ್ರಶಾಂತವಾಗಿದೆ. ಆದರೆ, ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲ್ ಹಲವೆಡೆ ಬಿಸಾಡಲಾಗಿದೆ. ಕಾಲೇಜು ಆವರಣದಲ್ಲಿ ಪರಿಸರಕ್ಕೆ ಮಾರಕವಾದ ಬಾಟಲ್, ಪ್ಲಾಸ್ಟಿಕ್ ಕವರ್‌ಗಳ ಬಳಕೆ ನಿಷೇಧಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಶಾಸಕ ಕೆ.ಹರೀಶ್ ಗೌಡ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶುಭ ಕೋರಿದರು.

ಈ ಸಂದರ್ಭದಲ್ಲಿ ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿಂಡಿಕೇಟ್ ಸದಸ್ಯರಾದ ಗೋಕುಲ್ ಗೋವರ್ಧನ್, ಡಾ.ಜೆ.ಶಿಲ್ಪಾ, ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ವಿವಿ ತೋಟಗಾರಿಕೆ ಉಪನಿರ್ದೇಶಕ ಎನ್.ಚೆಲುವೇಶ್, ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್, ವಿಶ್ವಮಾನವ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ, ನವೀನ್‌ಕುಮಾರ್, ದಿವಾಕರ್ ಚಾಂಡಿ, ಬಿ.ಎಸ್.ದಿನಮಣಿ, ಭಾಸ್ಕರ್, ಗಣೇಶ್, ಮಧುಸೂದನ್, ಚಿದಾನಂದ, ಅಭಿಷೇಕ್, ರಿಷಿರಾಜ್, ಮಂಜುನಾಥ್, ಹರೀಶ್, ಉಮಾಶಂಕರ್, ಸುರೇಶ್, ಯೋಗೀತ್, ರವಿಕುಮಾರ್, ಶ್ರೇಯಸ್ ಉಪಸ್ಥಿತರಿದ್ದರು.

> ಅರಣ್ಯ ಇಲಾಖೆ ಏಕಬಳಕೆ ಪ್ಲಾಸ್ಟಿಕ್ ಬಳಸದಂತೆ ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತಿದೆ. ಪರಿಸರ ಸಂರಕ್ಷಣೆಗೆ ಎಷ್ಟೇ ಕ್ರಮ ಕೈಗೊಂಡರೂ ಪ್ಲಾಸ್ಟಿಕ್ ತ್ಯಾಜ್ಯ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ಲಾಸ್ಟಿಕ್ ಬಳಕೆ ನಿಷೇಧಿಸಿದರೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡಿದಂತಾಗುತ್ತದೆ. –ಡಾ.ಮಾಲತಿ ಪ್ರಿಯಾ

ದೇಶ - ವಿದೇಶ

ಇಸ್ರೇಲ್‌ನ 1000 ಹಾಸಿಗೆಗಳ ಆಸ್ಪತ್ರೆಗೆ ಅಪ್ಪಳಿಸಿದ ಇರಾನ್ ಕ್ಷಿಪಣಿ; ಕಂಗಾಲಾಗಿ ಓಡಿದ ರೋಗಿಗಳು



ಜೆರುಸಲೇಂ: ಇಸ್ರೇಲ್‌ನ ಪ್ರಮುಖ ಆಸ್ಪತ್ರೆಗಳಲ್ಲಿ ಒಂದಾದ ಸೊರೊಕಾ ವೈದ್ಯಕೀಯ ಕೇಂದ್ರವನ್ನು ಇರಾನ್ ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ಇದು ಎರಡೂ ದೇಶಗಳ ನಡುವಿನ ಉದ್ವಿಗ್ನತೆ ವಿಪರೀತ ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ. ಇಸ್ರೇಲ್ ಮತ್ತು ಇರಾನ್ ನಡುವಿನ ಮಿಲಿಟರಿ ಸಂಘರ್ಷವು 7ನೇ ದಿನಕ್ಕೆ ಕಾಲಿಟ್ಟಿತು. ಈ ಎರಡೂ ದೇಶಗಳು ಪರಸ್ಪರ ದೇಶಗಳ ಪ್ರದೇಶದ ಮೇಲೆ ದಾಳಿಗಳನ್ನು ಮುಂದುವರೆಸಿವೆ. ಇಂದು ಮುಂಜಾನೆ, ಇರಾನಿನ ಕ್ಷಿಪಣಿ ದಕ್ಷಿಣ ಇಸ್ರೇಲ್‌ನ ಸೊರೊಕಾ ವೈದ್ಯಕೀಯ ಕೇಂದ್ರದ ಮೇಲೆ ಅಪ್ಪಳಿಸಿತು. ಇದು ವ್ಯಾಪಕ ಹಾನಿಯನ್ನುಂಟುಮಾಡಿದೆ ಎಂದು ಇಸ್ರೇಲ್ ಸರ್ಕಾರದ ವಕ್ತಾರರು ತಿಳಿಸಿದ್ದಾರೆ. ಇರಾನ್ ಹೊಸ ದಾಳಿಯನ್ನು ಪ್ರಾರಂಭಿಸಿದಾಗ ಇಂದು ಕ್ಷಿಪಣಿ ಅಪ್ಪಳಿಸಿದ ನಂತರ ದಕ್ಷಿಣ ಇಸ್ರೇಲ್‌ನ ಅತಿದೊಡ್ಡ ಆಸ್ಪತ್ರೆಯಿಂದ ದಟ್ಟವಾದ ಹೊಗೆ ಹೊರಹೊಮ್ಮಿತು. ದಕ್ಷಿಣ ಇಸ್ರೇಲ್‌ನ ಬೀರ್‌ಶೆಬಾದಲ್ಲಿರುವ ಸೊರೊಕಾ ಆಸ್ಪತ್ರೆ ಬ್ಯಾಲಿಸ್ಟಿಕ್ ಕ್ಷಿಪಣಿಗೆ ಡಿಕ್ಕಿ ಹೊಡೆದಿದೆ. ಇರಾನಿನ ಈ ದಾಳಿಯ ಪರಿಣಾಮವಾಗಿ ಇಸ್ರೇಲ್‌ನಾದ್ಯಂತ ಹಲವರು ಗಾಯಗೊಂಡಿದ್ದಾರೆ.

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಮನೆ ಬಳಿ ಗುಂಡಿನ ದಾಳಿ



ಪಾಟ್ನಾ: ಇಲ್ಲಿನ ಪೋಲೊ ರಸ್ತೆಯಲ್ಲಿರುವ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ನಿವಾಸದ ಬಳಿಯ ಯುವಕನ ಮೇಲೆ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ.

ಇಂದು ನನ್ನ ನಿವಾಸದ ಹೊರಗೆ ಗುಂಡು ಹಾರಿಸಲಾಗಿದೆ. NDAಯ ರಾಕ್ಷಸ ಆಳ್ವಿಕೆಯಲ್ಲಿ ಸರ್ಕಾರದಿಂದ ರಕ್ಷಿಸಲ್ಪಟ್ಟ ಅಪರಾಧಿಗಳ ನೈತಿಕತೆ ತುಂಬಾ ಹೆಚ್ಚಾಗಿದ್ದು, ಭಯಾನಕ ಅಪರಾಧಿಗಳು ರಾಜ್ಯಪಾಲರ ನಿವಾಸ ರಾಜಭವನ, ಮುಖ್ಯಮಂತ್ರಿ ನಿವಾಸ, ವಿರೋಧ ಪಕ್ಷದ ನಾಯಕರ ನಿವಾಸ, ನ್ಯಾಯಾಧೀಶರ ನಿವಾಸ ಮತ್ತು ವಿಮಾನ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿರುವ ಹೈ ಸೆಕ್ಯುರಿಟಿ ವಲಯದಲ್ಲಿ ಬಹಿರಂಗವಾಗಿ ಗುಂಡು ಹಾರಿಸುತ್ತಿದ್ದಾರೆ. ಹುಷಾರಾಗಿರಿ! ಎಂದು ತೇಜಸ್ವಿ ಯಾದವ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಪ್ರಾಥಮಿಕವಾಗಿ ಇದು ದರೋಡೆ ಘಟನೆ ಎಂದು ಹೇಳಲಾಗುತ್ತಿದೆ. ಇಂದು ವಿಮಾನ ನಿಲ್ದಾಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಬ್ಬರು ದುಷ್ಕರ್ಮಿಗಳು ವ್ಯಕ್ತಿಯೋರ್ವನನ್ನು ದರೋಡೆ ಮಾಡಲು ಯತ್ನಿಸಿದ್ದಾರೆ ಎಂಬ ಮಾಹಿತಿ ಬಂದಿದೆ ಎಂದು ನಗರ ಕೇಂದ್ರ ಎಸ್‌ಪಿ ದೀಕ್ಷಾ ತಿಳಿಸಿದ್ದಾರೆ.

ವೀಸಾ ಪ್ರಕ್ರಿಯೆ ಪುನರಾರಂಭ; ಸಾಮಾಜಿಕ ಮಾಧ್ಯಮ ಖಾತೆಗಳ ಪರಿಶೀಲನೆ: ಅಮೆರಿಕ



ವಾಷಿಂಗ್ಟನ್: ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ನೀಡುವ ಪ್ರಕ್ರಿಯೆಯನ್ನು ಅಮಾನತುಗೊಳಿಸಿದ್ದ ಅಮೆರಿಕ ಅದನ್ನು ಪುನರಾರಂಭಿಸುವುದಾಗಿ ತಿಳಿಸಿದೆ. ಆದರೆ, ಅರ್ಜಿದಾರರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು 'ಅನ್‌ಲಾಕ್' ಮಾಡಬೇಕು ಎಂದು ಅದು ಹೇಳಿದೆ. ವೀಸಾಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬರ ಸಾಮಾಜಿಕ ಮಾಧ್ಯಮ ಖಾತೆಗಳು ಪರಿಶೀಲನೆಗೆ ಒಳಗಾಗಲಿವೆ ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಿವರಿಸಿದೆ. 'ಅರ್ಜಿದಾರರ ಖಾತೆಗಳನ್ನು ಸಚಿವಾಲಯದ ಅಧಿಕಾರಿಗಳು ಪರಿಶೀಲಿಸುತ್ತಾರೆ. ಅಮೆರಿಕದ ಮೂಲ ತತ್ವಗಳು, ಸರ್ಕಾರ, ಸಂಸ್ಕೃತಿ, ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅರ್ಜಿದಾರರ ಸಂದೇಶಗಳ ಬಗ್ಗೆ ನಿಗಾವಹಿಸುತ್ತಾರೆ' ಎಂದು ಅದು ಮಾಹಿತಿ ನೀಡಿದೆ.

ವೀಸಾಗೆ ಹೊಸದಾಗಿ ಅರ್ಜಿ ಸಲ್ಲಿಸುವವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ಆ ಮೂಲಕ ಪರಿಶೀಲನೆಗೆ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಅಂಥವರ ವೀಸಾ ಅರ್ಜಿ ತಿರಸ್ಕೃತವಾಗುತ್ತದೆ ಎಂದು ಸಚಿವಾಲಯ ಬುಧವಾರ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಕೂಲ ಹವಾಮಾನ: ಕೇರಳದಲ್ಲಿ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ



ಕೊಚ್ಚಿ: ಗುರುವಾರ ಪ್ರತಿಕೂಲ ಹವಾಮಾನದ ಕಾರಣಕ್ಕೆ ದೈನಂದಿನ ಕರಾವಳಿ ಗಸ್ತು ನಡೆಸುತ್ತಿದ್ದ ಕೋಸ್ಟ್ ಗಾರ್ಡ್ ಹೆಲಿಕಾಪ್ಟರೊಂದು ಕಾಲೇಜು ಮೈದಾನವೊಂದರಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಭೂಸ್ಪರ್ಶ ಮಾಡಿತು ಎಂದು ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚೇತಕ್ ಹೆಲಿಕಾಪ್ಟರ್ ತನ್ನ ದೈನಂದಿನ ಗಸ್ತು ಕಾರ್ಯಾಚರಣೆಯಿಂದ ಹಿಂದಿರುಗುವಾಗ ಪ್ರತಿಕೂಲ ಬಿರುಗಾಳಿಗೆ ಸಿಲುಕಿದ್ದರಿಂದ ಈ ಘಟನೆ ನಡೆದಿದೆ ಎಂದು ತಿಳಿದು ಬಂದಿದೆ. ಸುರಕ್ಷತಾ ಕ್ರಮವಾಗಿ ಎರ್ನಾಕುಲಂ ಜಿಲ್ಲೆಯ ಕೊತ್ತಮಂಗಲಂ ಬಳಿಯ ಚೆಲಾಡ್‌ನಲ್ಲಿರುವ ಸೇಂಟ್ ಗ್ರೆಗೋರಿಯಸ್ ದಂತ ವೈದ್ಯಕೀಯ ಕಾಲೇಜಿನ ಫುಟ್‌ಬಾಲ್ ಮೈದಾನದಲ್ಲಿ ಸಿಬ್ಬಂದಿಗಳು ಹೆಲಿಕಾಪ್ಟರ್ ಅನ್ನು ಭೂಸ್ಪರ್ಶ ಮಾಡಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹವಾಮಾನ ಸ್ಥಿತಿ ಸಹಜ ಸ್ಥಿತಿಗೆ ಮರಳಿದ ನಂತರ, ತನ್ನ ಪ್ರಯಾಣವನ್ನು ಮುಂದುವರಿಸಿದ ಹೆಲಿಕಾಪ್ಟರ್, ನೆಡುಂಬಸ್ಸೇರಿಯಲ್ಲಿನ ಕರಾವಳಿ ರಕ್ಷಣಾ ಪಡೆಯ ವಾಯು ಸಂಕೀರ್ಣದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಯಿತು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಟರ್ಕಿಯಲ್ಲಿ 2 ಏರ್ ಬಲೂನ್ ಅವಘಡ: ಪೈಲಟ್ ಸಾವು, 31 ಪ್ರವಾಸಿಗರಿಗೆ ಗಾಯ



ಟರ್ಕಿ: ಇಂಡೋನೇಷ್ಯಾದ 19 ಪ್ರವಾಸಿಗರನ್ನು ಹೊತ್ತೊಯ್ಯುತ್ತಿದ್ದ ಏರ್ ಬಲೂನ್ ಗಾಳಿಯ ಹೊಡೆತಕ್ಕೆ ಸಿಲುಕಿ ನಿಯಂತ್ರಣ ಕಳೆದುಕೊಂಡಿತ್ತು. ಬಳಿಕ ಪೈಲಟ್ ಏರ್ ಬಲೂನ್‌ನನ್ನು ತುರ್ತು ಲ್ಯಾಂಡಿಂಗ್ ಮಾಡಲು ಪ್ರಯತ್ನಿಸಿದರೂ, ಪ್ರವಾಸಿಗರು ಏರ್ ಬಲೂನ್‌ನ ಬುಟ್ಟಿಯಿಂದ ಬಿದ್ದು, ಹಗ್ಗಗಳಲ್ಲಿ ಸಿಲುಕಿಕೊಂಡು ಗಾಯಗೊಂಡರು. ಆದರೆ ದುರದೃಷ್ಟವಶಾತ್ ಏರ್ ಬಲೂನ್‌ನ ಬುಟ್ಟಿಯಲ್ಲಿಯೇ ಸಿಲುಕಿ ಪೈಲಟ್ ಮೃತಪಟ್ಟರು. ಟರ್ಕಿಯಲ್ಲಿ ಹಾಟ್ ಏರ್ ಬಲೂನಿಂಗ್ ಒಂದು ಜನಪ್ರಿಯ ಪ್ರವಾಸಿ ಚಟುವಟಿಕೆಯಾಗಿದ್ದು, ಪ್ರವಾಸಿಗರು ಹೆಚ್ಚಾಗಿ ಏರ್ ಬಲೂನಿಂಗ್‌ನಲ್ಲಿ ಭಾಗವಹಿಸುತ್ತಾರೆ. ಆದರೆ ಇದು ಸುರಕ್ಷಿತವಾಗಿದ್ದರೂ, ಈ ಹಿಂದೆ ಹವಾಮಾನ ಬದಲಾವಣೆ, ಹಾರ್ಡ್ ಲ್ಯಾಂಡಿಂಗ್‌ಗಳು ಹಾಗೂ ಮಿಡ್–ಏರ್ ಡಿಕ್ಕಿಯಿಂದ ಅಪಘಾತಗಳು ಸಂಭವಿಸಿವೆ. ಕಳೆದ ತಿಂಗಳು ಮೆಕ್ಸಿಕನ್‌ನ 40 ವರ್ಷದ ವ್ಯಕ್ತಿಯೊಬ್ಬರು ಹಾಟ್ ಏರ್ ಬಲೂನ್ ದುರಂತದಲ್ಲಿ ಸಾವನ್ನಪ್ಪಿದ್ದರು. ಘಟನೆಯ ದೃಶ್ಯವು ಪ್ರವಾಸಿಗರ ಕ್ಯಾಮೆರಾವೊಂದರಲ್ಲಿ ಸೆರೆಯಾಗಿತ್ತು.

ಮೈಸೂರು ಮಿತ್ರ ಶುಕ್ರವಾರ 20 ಜೂನ್ 2025

ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಕೊಡವರ ಹಕ್ಕು

ಸಿಎನ್‌ಸಿ ಹೋರಾಟಕ್ಕೆ ಕೈ ಜೋಡಿಸಲು ವಿಚಾರ ಸಂಕಿರಣದಲ್ಲಿ ಮನವಿ



ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿರುವ ಸುಪ್ರೀಂ ಕೋರ್ಟ್ ವಕೀಲ ವಿಕ್ರಮ್ ಹೆಗ್ಡೆ.

ಮಡಿಕೇರಿ,ಜೂ.19– ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯನ್ನು ಪಡೆಯುವುದು ಕೊಡವರ ಸಾಂವಿಧಾನಿಕ ಹಕ್ಕಾಗಿದ್ದು, ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಹೋರಾಟಕ್ಕೆ ಎಲ್ಲರು ಕೈ ಜೋಡಿಸಬೇಕೆಂದು ಸುಪ್ರೀಂ ಕೋರ್ಟ್ ವಕೀಲ ವಿಕ್ರಮ್ ಹೆಗ್ಡೆ ಕರೆ ನೀಡಿದ್ದಾರೆ.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ವತಿಯಿಂದ ಮಡಿಕೇರಿಯ ಹೊರವಲಯದ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು ಕೊಡವರ ಹಕ್ಕುಗಳ ಕುರಿತು ವಿಚಾರ ಮಂಡಿಸಿದರು.

1834ರಲ್ಲಿ ಕೊಡಗು ಎಂಬ ಸ್ವತಂತ್ರ ರಾಜ್ಯವನ್ನು ಬ್ರಿಟಿಷರು ವಶಪಡಿಸಿಕೊಂಡು, 1874ರ ಶೆಡ್ಯೂಲ್ಡ್ ಡಿಸ್ಟ್ರಿಕ್ಟ್ಸ್ ಕಾಯ್ದೆಯಡಿ ತರಲಾಯಿತು. ಬಳಿಕ 1919ರ ಭಾರತ ಸರ್ಕಾರ ಕಾಯ್ದೆಯಡಿಯಲ್ಲಿ ಕೊಡಗನ್ನು ಚೀಫ್ ಕಮಿಷನರ್ ಪ್ರಾಂತ್ಯವನ್ನಾಗಿ ಮಾಡಲಾಯಿತು. 1923ರಲ್ಲಿ ಕೊಡಗು ತನ್ನದೇ ಆದ ಶಾಸನ ಮಂಡಳಿಯನ್ನು ಪಡೆಯಿತು. ಆದರೆ 1956ರಲ್ಲಿ ರಾಜ್ಯ ಪುನರ್ ರಚನೆಯ ಕಾಯ್ದೆಯಡಿ ಕೊಡಗನ್ನು ಮೈಸೂರಿನೊಂದಿಗೆ ವಿಲೀನಗೊಳಿಸಿದ ನಂತರ ಕೊಡವ ಸಮುದಾಯದ ಅನನ್ಯ ಬೇಡಿಕೆಗಳಿಗೆ ಅಗತ್ಯ ಸ್ಪಂದನ ದೊರೆಯಲಿಲ್ಲ ಎಂದು ವಿಕ್ರಮ್ ಹೆಗ್ಡೆ ವಿವರಿಸಿದರು.

ಸ್ವಾತಂತ್ರ್ಯದ ಬಳಿಕ ಕೊಡಗಿನಿಂದ ಕೇವಲ ಒಬ್ಬರು ಕೊಡವ ಮಾತ್ರ ಸಂಸತ್ತಿಗೆ ಆಯ್ಕೆಯಾಗಿದ್ದಾರೆ.

> ಕೊಡವ ಭಾಷೆ ಕೇವಲ ಒಂದು ಭಾಷೆ ಮಾತ್ರವಲ್ಲ. ಅದು ಕೊಡವರ ಆತ್ಮಸ್ಫೂರ್ತಿ, ಇದಕ್ಕೆ ಯುಗ ಯುಗಗಳ ದೀರ್ಘ ಹಿನ್ನೆಲೆ ಇದೆ. 2017ರಲ್ಲಿ ಸಂಸದ ಬಿ.ಕೆ.ಹರಿಪ್ರಸಾದ್ ಅವರು ಕೊಡವ ಭಾಷೆಯನ್ನು ಸಂವಿಧಾನದ 8ನೇ ಅನುಸೂಚಿಗೆ ಸೇರಿಸುವ ವಿಚಾರವನ್ನು ಸಂಸತ್ತಿನಲ್ಲಿ ಎತ್ತಿದರು. ಆದರೆ ಈ ಕುರಿತು ಮುಂದೆ ಯಾವುದೇ ಕ್ರಮ ನಡೆಯಲಿಲ್ಲ. ಕೊಡವ ಭಾಷೆಗೆ ಅಧಿಕೃತ ಸ್ಥಾನಮಾನ ನೀಡಬೇಕು, ಆಡಳಿತ ಮತ್ತು ಶಿಕ್ಷಣದ ಮಾಧ್ಯಮವಾಗಿ ಬಳಸಬೇಕು. ಕೊಡವ ಸಂಸ್ಥೆಗಳಿಗೆ ಸರಿಯಾದ ಪ್ರತಿನಿಧಿ ಸಿಗಬೇಕು. ಭಾಷಾ ಪರಂಪರೆಯ ಸಂಗ್ರಹ ಮತ್ತು ಸಂರಕ್ಷಣೆಯ ಕೆಲಸ ಇನ್ನೂ ನಡೆಯಬೇಕು. – ವಿಕ್ರಮ್ ಹೆಗ್ಡೆ

1967ರಲ್ಲಿ ಸಿಎಂ ಪೂಣಚ್ಚ ಆಯ್ಕೆಯಾಗಿದ್ದು ಬಿಟ್ಟರೆ, ಒಂದೋ ಮೈಸೂರು ಅಥವಾ ಮಂಗಳೂರು ಮತಕ್ಷೇತ್ರಕ್ಕೆ ತಗಲಿ ಹಾಕಿಕೊಂಡಿದೆ. ಲಕ್ಷದ್ವೀಪದಲ್ಲಿ 64 ಸಾವಿರ ಜನರಿಗೆ ಪ್ರತ್ಯೇಕ ಸೀಟು ಇದೆ. ಕೊಡಗಿಗೂ ಪ್ರಾದೇಶಿಕ ಲೋಕಸಭಾ ಕ್ಷೇತ್ರಕ್ಕಿಂತ ಕೊಡವರಿಗಾಗಿಯೇ ಒಂದು ಮತಕ್ಷೇತ್ರ ಬೇಕಾಗಿದೆ. ಮಣಿಪುರ ಮತ್ತು ಸಿಕ್ಕಿಂನ ಮಾದರಿ ಕೊಡವರಿಗೆ ವಿಶಿಷ್ಟ ಪ್ರತಿನಿಧಿಬೇಕು ಎಂದು ಅಭಿಪ್ರಾಯಿಸಿದರು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಕೊಡವ ಜನಾಂಗೀಯ ಕೇಂದ್ರೀಕೃತ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯನ್ನು ಗಳಿಸುವತ್ತ ಸಿಎನ್‌ಸಿ ಭಾರತದ ಸಂವಿಧಾನದ ಅಡಿಯಲ್ಲಿ ಹಕ್ಕೊತ್ತಾಯ ಮಂಡಿಸುತ್ತಿದೆ. ಕೊಡವರ ಜನಾಂಗೀಯ ಹೆಗ್ಗುರುತಿನ ರಕ್ಷಣೆಯೊಂದಿಗೆ ಸಂವಿಧಾನದ ಶೆಡ್ಯೂಲ್ ಪಟ್ಟಿಯಲ್ಲಿ ವರ್ಗೀಕರಿಸುವುದರೊಂದಿಗೆ ಸೋಶಿಯಲ್ ಇಂಜಿನಿಯರಿಂಗ್ ಮೂಲಕ ಸಬಲೀಕರಣಗೊಳ್ಳುವ ಹಂಬಲ ಒಂದೆಡೆಯಾದರೆ ಕೊಡವರ ರಾಜಕೀಯ ಅಶೋತ್ತರಗಳನ್ನು ಈಡೇರಿಸಲು ವಿಶೇಷ ಪೊಲಿಟಿಕಲ್ ಡಿಸೈನ್‌ಗಾಗಿ ಸಿಎನ್‌ಸಿ ಅಹೋರಾತ್ರಿ ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಇದಕ್ಕಾಗಿ ರಾಜಕೀಯಾತ್ಮಕ, ಕಾನೂನಾತ್ಮಕ ಮತ್ತು ಸಂವಿಧಾನಾತ್ಮಕ ನಡಿಗೆಯ ಮೂಲಕ ತಾರ್ಕಿಕ ಗುರಿ ಸಾಧನೆಯತ್ತ ನಡೆಯುತ್ತಿದೆ ಎಂದು ವಿಶ್ಲೇಷಿಸಿದರು.

ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಟಿ. ನಾಣಯ್ಯ ಮಾತನಾಡಿ, ಕೊಡವರ ಸಂವಿಧಾನಿಕ ಹಕ್ಕುಗಳಿಗಾಗಿ ಕಳೆದ 35 ವರ್ಷಗಳಿಂದ ಹೋರಾಟ ನಡೆಸುತ್ತಿರುವ ಸಿಎನ್‌ಸಿ ಸಂಘಟನೆಗೆ ಎಲ್ಲಾ ರೀತಿಯ ಬೆಂಬಲ ನೀಡಬೇಕೆಂದು ಕರೆ ನೀಡಿದರು.

ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ ಮಾತನಾಡಿ, ಸಿಎನ್‌ಸಿ ಕೊಡವರ ಸಾಕ್ಷಿ ಪ್ರಜ್ಞೆಯಾಗಿ ಕಳೆದ 35 ವರ್ಷಗಳಿಂದ ಶಾಂತಿಯುತವಾಗಿ ಹಕ್ಕೊತ್ತಾಯ ಮಂಡಿಸು ತ್ತಿದೆ. ಈ ರೀತಿಯ ಉತ್ಪಾದ ಚಿಲುಮೆಯಾಗಿ ಹೋರಾಟವನ್ನು ಇಲ್ಲಿಯವರೆಗೆ ತಲುಪಿಸಿದ ನಾಚಪ್ಪ ನಮ್ಮೆಲ್ಲರ ಕಣ್ಮಣಿಯಾಗಿದ್ದಾರೆ. ಪ್ರತಿಯೊಬ್ಬ ಮಗುವು ತನ್ನ ಭವಿಷ್ಯತ್ತಿನ ಬೆಳಕಾಗಿರುವ ಸಿಎನ್‌ಸಿಯೊಂದಿಗೆ ಗುರುತಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಬಾಳೆದಿಂಡು ಕಡಿಯುವ ಮೂಲಕ ವಿಕ್ರಮ್ ಹೆಗ್ಡೆ ಅವರನ್ನು ಸಭೆಗೆ ಕರೆ ತರಲಾಯಿತು. 3 ಸುತ್ತು ಗುಂಡುಗಳನ್ನು ಹಾರಿಸಿ ಬಂದೂಕು ಹಕ್ಕಿನ ವ್ಯಾಜ್ಯ ನಡೆಸುತ್ತಿರುವ ವಿಕ್ರಮ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು. ಸೂರ್ಯ–ಚಂದ್ರ ಗುರು–ಕಾರೋಣ, ಜಲದೇವತೆ ಕಾವೇರಿ, ಪರ್ವತ ದೇವಿ, ವನ ದೇವಿ, ಭೂ ದೇವಿ ಮತ್ತು ಭಾರತ ಸಂವಿಧಾನದ ಹೆಸರಿನಲ್ಲಿ ಸಿಎನ್‌ಸಿ ಪರವಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ, ಅರೆಯಡ ಸವಿತಾ, ಬೊಟ್ಟಂಗಡ ಸವಿತಾ, ನಂದೇಟಿರ ಕವಿತಾ, ನಂದಿನೆರವಂಡ ರೇಖಾ ನಾಚಪ್ಪ, ಅಪ್ಪಚ್ಚಿರ ರೀನಾ, ಚೋಳಪಂಡ ಜ್ಯೋತಿ, ಪಟ್ಟಮಾಡ ಲಲಿತಾ, ಕಲಿಯಂಡ ಪ್ರಕಾಶ್, ಪಟ್ಟಮಾಡ ಕುಶಾ, ಚಿರಿಯಪಂಡ ಸುರೇಶ್, ಅರೆಯಡ ಗಿರೀಶ್, ಡಾ.ಮಾತಂಡ ಅಯ್ಯಪ್ಪ, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟಿರ ಲೋಕೇಶ್, ಬೇಪಡಿಯಂಡ ದಿನು, ಬೊಟ್ಟಂಗಡ ಗಿರೀಶ್ ಸೇರಿದಂತೆ ಹತ್ತಾರು ಮಂದಿ ಪಾಲ್ಗೊಂಡಿದ್ದರು.

> ಕೊಡವರು ವಿಭಜನೆಯ ಬೇಡಿಕೆಯನ್ನು ಮಾಡುತ್ತಿಲ್ಲ. ಅವರು ಗೌರವದಿಂದ ಜೀವನ ನಡೆಸುವ ಹಕ್ಕು ಕೇಳುತ್ತಿದ್ದಾರೆ. ಈ ದೇಶದ ಸೇನಾಪಡೆ, ಆಡಳಿತಾಂಗ ಮತ್ತು ಕ್ರೀಡೆಯಲ್ಲಿ ಸಾಧಿಸಿದ ಯಶಸ್ಸು ಮತ್ತು ಕೀರ್ತಿಗಾಗಿ ಭಾರತದೆಲ್ಲೆಡೆ ಕೊಡವರಿಗೆ ಗೌರವವಿದೆ. ಈ ಕಾರಣಕ್ಕಾಗಿ 5ನೇ ಅನುಸೂಚಿ, 6ನೇ ಅನುಸೂಚಿ ಅಥವಾ ಪ್ರತ್ಯೇಕ 371ನೇ ಅನುಚ್ಛೇದದಂತೆ ವ್ಯವಸ್ಥೆ ಕಲ್ಪಿಸಬಹುದೆಂಬ ವಿಚಾರವು ಅರ್ಥಪೂರ್ಣವಾಗಿದೆ. ಕೊಡವ ಜನರ ಭೂಮಿ, ಭಾಷೆ, ಸಂಸ್ಕೃತಿ ಮತ್ತು ಭವಿಷ್ಯಕ್ಕಾಗಿ ನಾವೆಲ್ಲರೂ ಒಂದುಗೂಡಬೇಕಿದೆ ಎಂದು ವಿಕ್ರಮ್ ಹೆಗ್ಡೆ ತಿಳಿಸಿದರು. ಕಳೆದ 35 ವರ್ಷಗಳಿಂದ ಸಿಎನ್‌ಸಿ ಕೊಡವಲ್ಯಾಂಡ್ ಹಕ್ಕೊತ್ತಾಯದ ಮೂಲಕ ಕೊಡವರ ಅಸ್ಮಿತೆ ಮತ್ತು ನೀತಿ ತತ್ವವನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದವರೆಗೆ ಅನಾವರಣಗೊಳಿಸಿ ಶಾಂತಿಯುತವಾಗಿ ಕೊಂಡೊಯ್ಯುವ ಮೂಲಕ ಅಧಿಕಾರ ಸ್ತಂಭ ಎಚ್ಚರಗೊಳ್ಳುವಂತೆ ಮಾಡಿದ್ದು ಶ್ಲಾಘನೀಯ ಸಾಧನೆ. –ವಿಕ್ರಮ್ ಹೆಗ್ಡೆ

ಕೊಡಗಿನ ಯುವಕ ಬೆಂಗಳೂರಲ್ಲಿ ನೇಣಿಗೆ ಶರಣು

ಸುಂಟಿಕೊಪ್ಪ, ಜೂ.19– ಏಳನೆ ಹೊಸಕೋಟೆ



ಗ್ರಾಮ ಪಂಚಾಯಿತಿ 3ನೇ ವಾರ್ಡಿನ ನಿವಾಸಿ ಸುರೇಶ್ ಹಾಗೂ ಪಂಚಾಯಿತಿ ಸದಸ್ಯೆ ಚಂದ್ರಾವತಿ ಅವರ ಪುತ್ರ ಗಗನ್(21) ನಿನ್ನೆ ರಾತ್ರಿ ಬೆಂಗಳೂರಿನಲ್ಲಿ ತಾನು ವಾಸವಿದ್ದ ಮನೆಯಲ್ಲಿಯೇ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬೆಂಗಳೂರಿನಲ್ಲಿ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದ ಗಗನ್ ರೀಲ್ಸ್ ಕೂಡ ಮಾಡುತ್ತಿದ್ದ. ಕಳೆದ ಎರಡು ದಿನಗಳಿಂದ ತಾಯಿಗೆ ಕರೆ ಮಾಡಿ ನನಗೆ ಅನಾರೋಗ್ಯವಾಗಿದ್ದು, ಬೆಂಗಳೂರಿಗೆ ಬನ್ನಿ ಎಂದು ಪದೇ ಪದೆ ಕರೆದಿದ್ದ ಎನ್ನಲಾಗಿದೆ. ಹೀಗಾಗಿ ಚಂದ್ರಾವತಿ ಅವರು ಜೂ.18 ರಂದು ರಾತ್ರಿ ಬೆಂಗಳೂರಿಗೆ ಬಸ್‌ನಲ್ಲಿ ಪ್ರಯಾಣಿಸಿದ್ದರು. ತಾನು ಬರುತ್ತಿರುವ ವಿಷಯವನ್ನು ಪುತ್ರ ಗಗನ್‌ಗೆ ತಿಳಿಸಿದ್ದರು. ಆದರೆ ಚಂದ್ರಾವತಿ ಅವರು ಬೆಂಗಳೂರು ತಲುಪುವ ಮೊದಲೇ ಪುತ್ರ ಗಗನ್ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾನೆ.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಕಂಬಿಬಾಣೆ ಹಿಂದೂ ರುದ್ರಭೂಮಿಯಲ್ಲಿ ಗುರುವಾರ ಸಂಜೆ ಮೃತನ ಅಂತ್ಯಕ್ರಿಯೆ ನಡೆಸಲಾಯಿತು.

ರಾಹುಲ್ ಗಾಂಧಿ ಹುಟ್ಟುಹಬ್ಬ ಆಚರಣೆ

ಮಡಿಕೇರಿ, ಜೂ.19– ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕ ಹಾಗೂ ಸಂಸತ್‌ನ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಕಾಂಗ್ರೆಸ್ ಪ್ರಮುಖರು ಹಾಗೂ ಕಾರ್ಯಕರ್ತರು, ಮಡಿಕೇರಿಯ ಜಿಲ್ಲಾಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ವಿ.ಜಿ. ಮೋಹನ್ ಅವರ ನೇತೃತ್ವದಲ್ಲಿ ರೋಗಿಗಳನ್ನು ಭೇಟಿಯಾದ ಪಕ್ಷದ ಪ್ರಮುಖರು ಆರೋಗ್ಯ ವಿಚಾರಿಸಿದರು. ನಂತರ ಹಣ್ಣು ಹಂಪಲನ್ನು ನೀಡಿ ಧೈರ್ಯ ತುಂಬಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ಡಿಸಿಸಿ ಸದಸ್ಯರಾದ ಪುಷ್ಪಾ ಪೂಣಚ್ಚ, ಖಲೀಲ್ ಬಾಷ, ಹಬೀಬ್, ಅರ್ಜುನ್, ಸೂರ್ಯ, ಕಿರಣ್, ಮೊಹಮ್ಮದ್ ಕೌಸರ್, ಕವನ್, ದಿನೇಶ್, ಹಜೀಜ್, ಜಾನ್ಸನ್ ಪಿಂಟೋ, ಮೋಹನ್ ಮೌರ್ಯ, ಸುಬ್ರಮಣಿ ಮತ್ತಿತರ ಪ್ರಮುಖರು ಹಾಗೂ ಕಾರ್ಯಕರ್ತರು ಹಾಜರಿದ್ದರು.



ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸುತ್ತಿರುವ ಕಾಂಗ್ರೆಸ್ ಮುಖಂಡರು.

ಮನೆ ಮುಂದೆ ನಿಂತಿದ್ದ ವ್ಯಕ್ತಿಗೆ ವಾಹನ ಡಿಕ್ಕಿ

ಗೋಣಿಕೊಪ್ಪ: ಪೊನ್ನಂಪೇಟೆಯ ಅರ್ವತೋಕ್ಲು ಮುಖ್ಯರಸ್ತೆಯ ಬದಿಯಲ್ಲಿದ್ದ ವ್ಯಕ್ತಿಗೆ ವಾಹನವೊಂದು ಡಿಕ್ಕಿಹೊಡೆದು ಪರಾರಿಯಾಗಿರುವ ಘಟನೆ ನಡೆದಿದೆ.

ಸರ್ವದೈವತ ಶಾಲೆಯ ಸಮೀಪ ಬಿ.ವಿ.ಶಶಿಧರ್ ಎಂಬುವರು ಮನೆಯ ಮುಂಭಾಗ ರಸ್ತೆ ಬದಿಯಲ್ಲಿ ನಿಂತಿರುವ ಸಂದರ್ಭ ವಾಹನವೊಂದು ಡಿಕ್ಕಿ ಹೊಡೆದು ಪರಾರಿಂತಾಗಿದೆ. ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ, ಸಿಸಿಟಿವಿಗಳನ್ನು ಪರಿಶೀಲಿಸುವ ಮೂಲಕ ತನಿಖೆ ಕೈಗೊಂಡು ಆರೋಪಿಯನ್ನು ಪತ್ತೆ ಹಚ್ಚಲು ಮುಂದಾಗಿದ್ದಾರೆ.

ಡಿಕ್ಕಿ ಹೊಡೆದ ರಭಸಕ್ಕೆ ತಲೆಯ ಭಾಗಕ್ಕೆ ಪೆಟ್ಟಾಗಿದ್ದು ಗಂಭೀರ ಸ್ವರೂಪದ ಗಾಯಗಳಾಗಿ ಗೋಣಿಕೊಪ್ಪಲು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವಿಧೋದ್ದೇಶ ಸಭಾಂಗಣಕ್ಕೆ ಭೂಮಿಪೂಜೆ

ಕುಶಾಲನಗರ: ಸರ್ಕಾರದ ಜೊತೆಗೆ ಸೇವಾ ಸಂಸ್ಥೆಗಳು ಕೈಜೋಡಿಸಿದಾಗ ಮಾತ್ರ ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಬಹುದು ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್ ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯ ಆವರಣದಲ್ಲಿ ಬಿಎಸ್‌ಇ ಸಂಸ್ಥೆಯ ಸಿಎಸ್‌ಆರ್ ಫಂಡ್‌ನಿಂದ 25 ಲಕ್ಷ ರೂ. ವೆಚ್ಚದಲ್ಲಿ ಹಮ್ಮಿಕೊಂಡಿರುವ ವಿವಿಧೋದ್ದೇಶ ಸಭಾಂಗಣದ ಗುದ್ದಲಿ ಪೂಜೆಯನ್ನು ನೆರವೇರಿಸಿ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರಿಂದ ಸುಶಿಕ್ಷಿತ ಸಮಾಜ ನಿರ್ಮಾಣವಾಗುತ್ತದೆ. ಸಂಘ–ಸಂಸ್ಥೆಗಳ ಪ್ರೋತ್ಸಾಹ, ಸಹಕಾರ ಸಿಗುವುದರಿಂದ ಸರ್ಕಾರಿ ಶಾಲೆಗಳು ಅಭಿವೃದ್ಧಿ ಹೊಂದುತ್ತವೆ ಎಂದರು.

ರೆಡ್‌ಕ್ರಾಸ್ ಸಂಸ್ಥೆ ತಾಲೂಕು ಅಧ್ಯಕ್ಷ ಎಸ್.ಕೆ.ಸತೀಶ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಂಗಧಾಮಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಶಾಲೆಯ ಉಪ ಪ್ರಾಂಶುಪಾಲ ಪರಮೇಶ್ವರಪ್ಪ, ಸಹ ಶಿಕ್ಷಕರಾದ ಎ.ಸಿ.ಮಂಜುನಾಥ್, ದಿನೇಶ್, ಗುತ್ತಿಗೆದಾರರಾದ ಶೀಬು ಹಾಜರಿದ್ದರು.

ಮಾಜಿ ಸೈನಿಕ ನಾಪತ್ತೆ; ಆತ್ಮಹತ್ಯೆ ಶಂಕೆ



ನಾಪತ್ತೆಯಾಗಿರುವ ಮಾಜಿ ಸೈನಿಕ ಗಿರೀಶ್‌ಗಾಗಿ ಶೋಧ ನಡೆಸುತ್ತಿರುವುದು.

ಮಡಿಕೇರಿ: ಚೆಟ್ಟಳ್ಳಿ ಕಂಡಕರೆ ನಿವಾಸಿ ಮಾಜಿ ಸೈನಿಕ ಗಿರೀಶ್(46) ಎಂಬವರು ನಾಪತ್ತೆಯಾಗಿದ್ದು, ಅವರ ದ್ವಿಚಕ್ರ ವಾಹನ ಗುಡ್ಡೆಹೊಸೂರು ಬಳಿಯ ತೆಪ್ಪದ ಕಂಡಿ ಕಾವೇರಿ ನದಿ ದಡದಲ್ಲಿ ಪತ್ತೆಯಾದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಕುಶಾಲನಗರ ಪಟ್ಟಣ ಠಾಣಾ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿಗಳು ದುಬಾರೆಯ ರಿವರ್ ರ್‍ಯಾಫ್ಟರ್ ಸಿಬ್ಬಂದಿಗಳ ನೆರವಿನೊಂದಿಗೆ ಕಾವೇರಿ ನದಿಯಲ್ಲಿ ಶೋಧ ಕಾರ್ಯ ನಡೆಸಿದರು.

ಕಾವೇರಿ ನದಿ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗಿರುವ ಹಿನ್ನೆಲೆಯಲ್ಲಿ ತೆಪ್ಪದ ಕಂಡಿ ತೂಗು ಸೇತುವೆ ಬಳಿ ಕಾವೇರಿ ನದಿ ಮೈದುಂಬಿಕೊಂಡು ವಿಶಾಲ ಹಾಗೂ ರಭಸವಾಗಿ ಹರಿಯುತ್ತಿದ್ದು, ನದಿಯ 2 ಕಿ.ಮೀ ದೂರದವರೆಗೂ ಶೋಧ ಕಾರ್ಯ ನಡೆಸಲಾಯಿತು.

ಸಂಜೆವರೆಗೂ ಶೋಧ ಕಾರ್ಯಾಚರಣೆ ನಡೆಸಿದರೂ ನಾಪತ್ತೆಯಾಗಿರುವ ಗಿರೀಶ್ ಕುರಿತು ಯಾವುದೇ ಸುಳಿವು ಲಭ್ಯವಾಗಿಲ್ಲ. ಗಿರೀಶ್ ಕುಶಾಲನಗರದ ಪ್ರತಿಷ್ಠಿತ ಖಾಸಗಿ ಸಂಸ್ಥೆಯೊಂದರಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಬುಧವಾರ ರಾತ್ರಿಯಿಂದ ಕಾಣೆಯಾಗಿದ್ದರು. ಈ ಕುರಿತು ಕುಶಾಲನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸಾಹಿತಿಗಳಿಂದ ಕನ್ನಡ ಸಾಹಿತ್ಯ ಅಪಾರವಾಗಿ ಬೆಳೆದಿದೆ

ಚಾಮರಾಜನಗರ: ಸಾಹಿತಿಗಳಿಂದ ಕನ್ನಡದ ಶಬ್ದ ಭಂಡಾರ, ಚಿಂತನೆ, ಸಾಹಿತ್ಯ ಅಪಾರವಾಗಿ ಬೆಳೆದಿದೆ.ಸಾಹಿತಿಗಳಿಗೆ ಕನ್ನಡಿಗರು ಸದಾ ಗೌರವವನ್ನು ನೀಡಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಸಂಸ್ಕೃತಿ ಚಿಂತಕ ಸುರೇಶ್ ಎನ್. ಋಗ್ವೇದಿ ತಿಳಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಹಿತ್ಯ ಮಂಥನ ಚಿಂತನ ಕಾರ್ಯಕ್ರಮದಲ್ಲಿ ಮಾಸ್ತಿ ಕನ್ನಡದ ಆಸ್ತಿ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಅಧಿಕಾರಿಗಳಾಗಿ, ಸಾಹಿತಿಗಳಾಗಿ ರಾಷ್ಟ್ರಕ್ಕೆ ಗೌರವವನ್ನು ತಂದವರು. ಸಣ್ಣ ಕಥೆಗಳ ಜನಕರಾಗಿ ಶ್ರೀನಿವಾಸ ಎಂಬ ಕಾವ್ಯನಾಮದಿಂದ ಕಾದಂಬರಿ,ಕಾವ್ಯ, ನಾಟಕ, ಜೀವನ ಚರಿತ್ರೆ,ಪ್ರಬಂಧ, ವಿಮರ್ಶೆ, ಸಂಪಾದನೆ, ಅನುವಾದ, ಧಾರ್ಮಿಕ ಕೃತಿಗಳು, ಜೀವನ ಚರಿತ್ರೆಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ವಿಶ್ವವಿಖ್ಯಾತಗೊಳಿಸಿದ್ದಾರೆ. ಕನ್ನಡಿಗರಿಗೆ ಮತ್ತು ಕನ್ನಡದ ಸಾಹಿತಿಗಳಿಗೆ ಆದರ್ಶ ಪುರುಷರಾಗಿದ್ದಾರೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಚಿಕ್ಕವೀರರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು.



ಸಾಹಿತ್ಯ ಮಂಥನ ಚಿಂತನ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಗಣ್ಯರು.

ಕನ್ನಡಿಗರ ಹೆಮ್ಮೆ. ಮಾಸ್ತಿಯವರ ಸಣ್ಣ ಕಥೆಗಳಾದ ರಂಗನ ಮದುವೆ, ಮಾತುಗಾರ ರಾಮಣ್ಣ ಜನಜನಿತವಾಗಿದೆ. ಮಾಸ್ತಿ ಅವರ ಕಥೆಗಳು ಜೀವನ ದರ್ಶನವನ್ನು ನೀಡುತ್ತದೆ. ಕುಶಲತೆ, ಸೌಮ್ಯತೆ, ಭಾವ ಪ್ರಧಾನ ಹಾಗೂ ವಿಶೇಷ ಜೀವನಾನುಭವಗಳನ್ನು ಕಾಣಬಹುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ರಾಜಸೇವಾಸಕ್ತ ಬಿರುದನ್ನು ಪಡೆದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ನಿಜವಾದ ಕನ್ನಡದ ಆಸ್ತಿ ಹಾಗೂ ಸಂಪತ್ತು ಆಗಿದ್ದಾರೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರತಿ ಮಂಗಳವಾರ ಸಂಜೆ ಸಾಹಿತ್ಯ ಮಂಥನ ಚಿಂತನ ಕಾರ್ಯಕ್ರಮ ನಡೆಯುತ್ತಿರುವುದು ಸಂತೋಷ ತಂದಿದೆ. ಕನ್ನಡ ಸಾಹಿತ್ಯದ ವಿಶೇಷ ಅಂಶಗಳನ್ನು ತಿಳಿಯಲು ಸಹಾಯಕವಾಗುತ್ತದೆ ಎಂದು ನಿವೃತ್ತ ಶಿಕ್ಷಕರಾದ ಸರಸ್ವತಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಬಿಕೆ ಆರಾಧ್ಯ ಮಾತನಾಡಿ, ಕನ್ನಡ ಸಾಹಿತ್ಯ ಶ್ರೀಮಂತವಾದದ್ದು. ಸಾಹಿತಿಗಳು ಕನ್ನಡಕ್ಕೆ ನೀಡಿರುವ ಕೊಡುಗೆಗಳ ಕುರಿತು ನಿರಂತರವಾಗಿ ಸಾಹಿತ್ಯ ಕಾರ್ಯಕ್ರಮಗಳನ್ನು ರೂಪಿಸಿ ಕನ್ನಡದ ಸೇವೆಯನ್ನು ಸಲ್ಲಿಸಲಾಗುತ್ತಿದೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಜೀವನ ಮತ್ತು ಸಾಹಿತ್ಯ ಕೊಡುಗೆ ಅಧ್ಯಯನ ಬಹಳ ಮುಖ್ಯವಾದದ್ದು ಎಂದರು.

ಕಾರ್ಯಕ್ರಮದಲ್ಲಿ ಎಸ್.ಲಕ್ಷ್ಮೀನರಸಿಂಹ, ಶಿವಲಿಂಗಮೂರ್ತಿ, ಪದ್ಮ ಪುರುಷೋತ್ತಮ್ ರವಿಚಂದ್ರ ಪ್ರಸಾದ್, ಕಾರ್ ಕುಮಾರ್ ಉಪಸ್ಥಿತರಿದ್ದರು.

ದೇವನಹಳ್ಳಿ ಹೋರಾಟಕ್ಕೆ ಸಹಸ್ರಾರು ರೈತರು ಬನ್ನಿ



ಹೊನ್ನೂರು ಗ್ರಾಮದಲ್ಲಿ ಮಂಗಳವಾರ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಗ್ರಾಮ ಘಟಕವನ್ನು ಉದ್ಘಾಟಿಸಿದ ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ ಮಾತನಾಡಿದರು.

ಯಳಂದೂರು, ಜೂ.19(ವಿ.ನಾಗರಾಜು)– ದೇವನಹಳ್ಳಿಯಲ್ಲಿ ರೈತರ ಜಮೀನನ್ನು ಕಬಳಿಸುವ ರಾಜ್ಯ ಸರ್ಕಾರದ ಹುನ್ನಾರವನ್ನು ಖಂಡಿಸಿ ನಡೆಯುತ್ತಿರುವ ಪ್ರತಿಭಟನೆಗೆ ಜೂ.25, ರಾಜ್ಯಾದ್ಯಂತ ಎಲ್ಲಾ ರೈತರು ಭಾಗವಹಿಸಲಿದ್ದು ಚಾಮರಾಜನಗರ ಜಿಲ್ಲೆಯಿಂದಲೂ ಸಹಸ್ರಾರು ಸಂಖ್ಯೆಯ ರೈತರು ಭಾಗವಹಿಸಬೇಕು ಎಂದು ರೈತ ಸಂಘದ ರಾಜ್ಯ ರಾಜಕೀಯ ಮಂಡಳಿ ಸದಸ್ಯೆ ಚುಕ್ಕಿ ನಂಜುಂಡಸ್ವಾಮಿ ಕರೆ ನೀಡಿದರು.

ತಾಲೂಕಿನ ಹೊನ್ನೂರು ಗ್ರಾಮದ ಮಠದ ಮುಂಭಾಗ ನಡೆದ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಹೊನ್ನೂರು ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರದ ಅಧೀನ ಸಂಸ್ಥೆ ಕೆಐಎಡಿಬಿ ರೈತರ 1770 ಎಕರೆ ಜಮೀನನ್ನು ವಶಪಡಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಇದಕ್ಕಾಗಿ ಈಗಾಗಲೇ ನೋಟೀಸ್ ಜಾರಿ ಮಾಡಲಾಗಿದೆ. ಆದರೆ ಇದಕ್ಕೆ ರೈತರ ವಿರೋಧವಿದ್ದು ಯಾವುದೇ ಕಾರಣಕ್ಕೂ ಇಲ್ಲಿ ಕೈಗಾರಿಕೆ ಸ್ಥಾಪನೆಗೆ ಅವಕಾಶ ನೀಡುವುದಿಲ್ಲ. ಹಾಗಾಗಿ ರೈತರ ಬೆಂಬಲಕ್ಕೆ ನಾವು ನಿಲ್ಲಬೇಕಿದೆ. ಈ ಉದ್ದೇಶದಿಂದ ಜೂ.25 ರಂದು ರಾಜ್ಯಾದ್ಯಂತ ರೈತರು ಬೆಂಗಳೂರಿನ ದೇವನಹಳ್ಳಿಯಲ್ಲಿ ಜಮಾವಣೆಗೊಳ್ಳುತ್ತಿದ್ದು ಇಲ್ಲಿ ಬೃಹತ್ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಬೆಂಬಲ ಸೂಚಿಸಲು ನಿರ್ಧರಿಸಿದ್ದಾರೆ. ಹಾಗಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ರೈತರು ವಾಹನಗಳನ್ನು ಮಾಡಿಕೊಂಡು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ನಮ್ಮ ದೇಶದಲ್ಲಿ ಶೇ.67 ರಷ್ಟು ಯುವಕರು ಇದ್ದಾರೆ. ಗ್ರಾಮೀಣ ಭಾಗದಲ್ಲಿ ಯುವ ರೈತರು ಹೆಚ್ಚಾಗಿದ್ದಾರೆ. ನಾವು ಮೊಬೈಲ್, ಸಾಮಾಜಿಕ ಜಾಲತಾಣಗಳಿಂದ ರೈತರ ಸಮಸ್ಯೆಗಳನ್ನು ಅರಿತು ಇದನ್ನು ನಿವಾರಿಸುವ ಕ್ರಮ ವಹಿಸಬೇಕು. ನಮ್ಮನ್ನಾಳುವ ಸರ್ಕಾರಗಳು ರೈತರಿಗೆ ಮೋಸ ಮಾಡುತ್ತಲೇ ಬರುತ್ತಿವೆ. ಈ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಪ್ರತಿಭಟಿಸಬೇಕು, ರೈತರಿಗೆ ಮಾರಕವಾಗುವ ಕಾನೂನುಗಳನ್ನು ರೂಪಿಸಿದ್ದಲ್ಲಿ ಇದನ್ನು ವಿರೋಧಿಸಬೇಕು. ಎಂದು ಕಿವಿಮಾತು ಹೇಳಿದರು.

ಸಾಹುಕಾರ್ ಎಚ್.ಎಸ್. ಮಹೇಂದ್ರ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಂಜುಕಿರಣ್ ಮಾತನಾಡಿದರು. ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಪ್ರಸನ್ನ, ಸಿದ್ದಲಿಂಗಸ್ವಾಮಿ, ಅಂಬಳೆ ಶಿವಕುಮಾರ್, ಮಾಡ್ರಳ್ಳಿ ಪಾಪಣ್ಣ, ನಟರಾಜು, ಈಶ್ವರಪ್ರಭು, ಕರಿಯಪ್ಪ, ಮಹೇಶ್, ಎ.ಎನ್. ಶಿವಪ್ರಸಾದ್, ಮಹದೇವಸ್ವಾಮಿ, ಶಾಂತಪ್ಪ ಸೇರಿದಂತೆ ನೂರಾರು ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಗಾಯಾಳುಗಳ ಆರೋಗ್ಯ ವಿಚಾರಿಸುತ್ತಿರುವ ಶಾಸಕ ಸಿ.ಪುಟ್ಟರಂಗಶೆಟ್ಟಿ.

ಗಾಯಾಳುಗಳ ಆರೋಗ್ಯ ವಿಚಾರಿಸಿದ ಶಾಸಕ ಪುಟ್ಟರಂಗಶೆಟ್ಟಿ

ಚಾಮರಾಜನಗರ : ಕೂಲಿ ಕೆಲಸಕ್ಕೆಂದು ಗುಂಡ್ಲುಪೇಟೆ ತಾಲೂಕಿನ ವಡ್ಡಗೆರೆ ಸಮೀಪ ಅಂಕಹಳ್ಳಿಗೆ ಕರೆದೊಯ್ಯುತ್ತಿದ್ದ ಗೂಡ್ಸ್ ಆಟೋ ಪಲ್ಟಿಯಾಗಿ ಚಾಮರಾಜನಗರ ತಾಲೂಕಿನ ಯಾನಗಳ್ಳಿ ಗ್ರಾಮದ ಮಹಿಳಾ ಕೂಲಿ ಕಾರ್ಮಿಕರು ಗಾಯಗೊಂಡ ಹಿನ್ನೆಲೆ ಯಡಬೆಟ್ಟ ಸಿಮ್ಸ್ ಆಸ್ಪತ್ರೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುರುವಾರ ಮಧ್ಯಾಹ್ನ ಸಿಮ್ಸ್ ಗೆ ಭೇಟಿನೀಡಿ, ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.

18 ಕೂಲಿ ಕಾರ್ಮಿಕ ಮಹಿಳೆಯರಿಗೂ ಶಾಸಕರು ವೈಯಕ್ತಿಕ ಪರಿಹಾರ ವಿತರಿಸಿದರು. ಇದೇ ವೇಳೆ ಅವರು ಆಟೋ ಮಗುಚಿ ಗಾಯಗೊಂಡಿರುವ ಯಾನಗಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಮಹಿಳೆಯರಿಗೂ ವೈದ್ಯರು ಸೂಕ್ತ ಚಿಕಿತ್ಸೆ ಒದಗಿಸಬೇಕು, ಗಾಯಾಳುಗಳು ಯಾವುದೇ ಕಾರಣಕ್ಕೂ ಧೃತಿಗೆಡಬಾರದು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಬಿ.ಕೆ ರವಿಕುಮಾರ್, ಎ.ಎಸ್.ಗುರುಸ್ವಾಮಿ, ಆಲೂರು ಪ್ರದೀಪ್, ಸ್ವಾಮಿ, ಕೋಡಿಮೋಳೆ ಪ್ರಕಾಶ್,ರಂಗಸ್ವಾಮಿ, ಗಣೇಶ್ ರಾಮಸಮುದ್ರಸ್ವಾಮಿ, ಡಾ.ಎಚ್.ಜಿ. ಮಂಜುನಾಥ್, ಡಾ.ದೇವೇಂದ್ರ, ಅಭಿಷೇಕ್, ಶಶಿಧರ್, ಶರತ್ ಕುಮಾರ್ ಇತರರಿದ್ದರು.

ಜೂಜಾಟ: ಮೂವರ ಬಂಧನ; ನಗದು, ಬೈಕ್ ವಶ



ಸರಗೂರು ಗ್ರಾಮದ ಬಂಡಿದಾರಿಯಲ್ಲಿ ಅಕ್ರಮ ಜೂಜುಕೋರರಿಂದ ವಶಪಡಿಸಿಕೊಳ್ಳಲಾದ ಬೈಕ್‌ಗಳು.

ಕೊಳ್ಳೇಗಾಲ, ಜೂ.19– ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಜೂಜಾಡುತ್ತಿದ್ದ ಜೂಜುಕೋರರನ್ನು ಪೊಲೀಸರು ಬಂಧಿಸಿ ಬಂಧಿತರಿಂದ 26 ಸಾವಿರಕ್ಕೂ ಹೆಚ್ಚಿನ ನಗದು ಹಾಗೂ 7 ಬೈಕ್ ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ಕೊಳ್ಳೇಗಾಲ ಮೋಳೆಯ ಲೋಕೇಶ್, ಹೊಂಡರಬಾಳು ಗ್ರಾಮದ ಮಹೇಶರಾಜೇ ಅರಸು, ಸರಗೂರು ಗ್ರಾಮದ ಚಿಕ್ಕಮಾದಯ್ಯ ಎಂದು ಗುರುತಿಸಲಾಗಿದೆ. ಪೊಲೀಸರ ಕಾರ್ಯಾಚರಣೆ ವೇಳೆ ಪರಾರಿಯಾದ ಆರೋಪಿಗಳಾದ ಹೊಂಡರಬಾಳು ರಂಗಸ್ವಾಮಿ, ಮಧುವನಹಳ್ಳಿ ಗ್ರಾಮದ ಗುಂಡು, ಬೀಮನಗರದ ನಾಗ, ಕೊಳ್ಳೇಗಾಲದ ಮಣಿ ಅವರಿಗಾಗಿ ಶೋಧ ನಡೆಸಲಾಗುತ್ತಿದೆ.

ಆರೋಪಿಗಳು ತಾಲೂಕಿನ ಸರಗೂರು ಗ್ರಾಮದ ಎಂ. ಮಾದಯ್ಯ ಅವರ ಜಮೀನಿನ ಸಮೀಪದ ಬಂಡಿದಾರಿಯಲ್ಲಿ ಬೈಕ್‌ಗಳನ್ನು ಸುತ್ತಲೂ ನಿಲ್ಲಿಸಿ ಲೈಟ್ ಹಾಕಿಕೊಂಡು ಜೂಜಾಟ (ಅಂದರ್–ಬಾಹರ್)ದಲ್ಲಿ ನಿರತರಾಗಿದ್ದು ಖಚಿತ ಮಾಹಿತಿ ಮೇರೆಗೆ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ತಖೀವುಲ್ಲಾ, ಸಿಬ್ಬಂದಿಗಳಾದ ರವಿಕುಮಾರ್, ವೆಂಕಟೇಶ್, ಬಿಳಿಗೌಡ, ಶಾಂತರಾಜು, ರಾಜಪ್ಪ, ದುಂಡಪ್ಪ ಪೂಜಾರಿ, ಕಾಳಯ್ಯ, ದಿನೇಶ್, ಬಸವರಾಜು, ಮಾರ್ಷಲ್ ಸೇರಿದಂತೆ ಇನ್ನಿತರರು ದಾಳಿ ನಡೆಸಿ ಜೂಜುಕೋರರನ್ನು ಬಂಧಿಸಿ, ಪರಾರಿಯಾದ 5 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಇಂದು ರಾಜ್ಯಮಟ್ಟದ ವಿದ್ಯಾರ್ಥಿ ರತ್ನ ಸಮಾರಂಭ

ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಾಮರಾಜನಗರ ವಿಶ್ವವಿದ್ಯಾಲಯ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಹಾಗೂ ರಾಜ್ಯ ಮಟ್ಟದ ವಿದ್ಯಾರ್ಥಿ ರತ್ನ ಸಮಾರಂಭವನ್ನು ಜೂ.20ರಂದು ಬೆಳಿಗ್ಗೆ 11 ಗಂಟೆಗೆ ಚಾಮರಾಜನಗರ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಈಶ್ವರ್ ಕಾರ್ಯಕ್ರಮ ಉದ್ಘಾಟಿಸುವರು. ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಅಧ್ಯಕ್ಷತೆ ವಹಿಸುವರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ರತ್ನ ಪ್ರಶಸ್ತಿ ಪ್ರದಾನ ಹಾಗೂ ಚಾಮರಾಜನಗರ ವಿವಿ ವಿದ್ಯಾರ್ಥಿಗಳನ್ನು ಸನ್ಮಾನಿಸುವರು.

ಶಿಕ್ಷಕರ ನೇಮಕಕ್ಕೆ ಒತ್ತಾಯಿಸಿ ಪೋಷಕರ ಪ್ರತಿಭಟನೆ

ಚಾಮರಾಜನಗರ, ಜೂ.19– ನಗರದ ಪಿಡಬ್ಲ್ಯೂಡಿ ಕಾಲೋನಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಿಸುವಂತೆ ಒತ್ತಾಯಿಸಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಪೋಷಕರು ಶಾಲೆಯ ಎದುರು ಪ್ರತಿಭಟನೆ ನಡೆಸಿದರು.

ಶಾಲೆಯಲ್ಲಿ ಕಾಯಂ ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳು ಪರದಾಡಬೇಕಾಗಿದೆ ಶಿಕ್ಷಕರನ್ನು ನೇಮಿಸುವಂತೆ ಹಲವು ಬಾರಿ ಶಿಕ್ಷಣ ಇಲಾಖೆಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿವರೆಗೆ ಒಟ್ಟು 320 ಮಕ್ಕಳಿದ್ದಾರೆ. ಇಷ್ಟು ಮಕ್ಕಳಿಗೆ ಮುಖ್ಯ ಶಿಕ್ಷಕರು, ಓರ್ವ ಸಹ ಶಿಕ್ಷಕರು ಹಾಗೂ ಇಬ್ಬರು ಅತಿಥಿ ಶಿಕ್ಷಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ ಒಬ್ಬ ಶಿಕ್ಷಕರು ಗೈರಾಗಿದ್ದು, ಮಕ್ಕಳ ಪಾಠ–ಪ್ರವಚನಕ್ಕೆ ತೊಂದರೆಯಾಗಿದೆ ಎಂದು ದೂರಿದರು. ಇದರಿಂದ ಶಾಲೆಯಲ್ಲಿ ಮಕ್ಕಳ ವ್ಯಾಸಂಗಕ್ಕೆ ಸಾಕಷ್ಟು ತೊಂದರೆಯಾಗಿದೆ. ಇಲಾಖೆಯ ಅಧಿಕಾರಿಗಳು ಕೂಡಲೇ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಪ್ರತಿಭಟನಾನಿರತರು ಪಟ್ಟು ಹಿಡಿದರು. ಸ್ಥಳಕ್ಕೆ ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ ಭೇಟಿ ನೀಡಿ, ಕೂಡಲೇ ಇಬ್ಬರು ಶಿಕ್ಷಕರನ್ನು ನೇಮಕ ಮಾಡಲಾಗುವುದು. ಡಿಡಿಪಿಐ ಅವರೊಂದಿಗೆ ಚರ್ಚಿಸಿ ಶಿಕ್ಷಕರ ಕೊರತೆ ಸರಿಪಡಿಸಲು ಕ್ರಮಕ್ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಕೈ ಬಿಟ್ಟು ಶಾಲೆಗೆ ಮಕ್ಕಳನ್ನು ಕಳುಹಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ರಾಜೀವ್ ಭೇಟಿ ನೀಡಿ ಪೋಷಕರ ಮನವಿ ಆಲಿಸಿದರು. ಪ್ರತಿಭಟನೆಯಲ್ಲಿ ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್‌ನಗು, ಉಪಾಧ್ಯಕ್ಷ ಮುತ್ತುರಾಮು, ಪೋಷಕರಾದ ಸೋಮೇಶ್ ನಾಯಕ, ಪ್ರವೀಣ್, ಮನು, ತ್ಯಾಗರಾಜ, ಖಲೀಂವುಲ್ಲಾ, ಮಹೇಶ್, ಮಾದೇಶ್, ಜ್ಯೋತಿ ಹಾಗೂ ವಿದ್ಯಾರ್ಥಿಗಳು ಇದ್ದರು.



ಶಿಕ್ಷಕರನ್ನು ನೇಮಿಸುವಂತೆ ಒತ್ತಾಯಿಸಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಪೋಷಕರು ಶಾಲೆಯ ಎದುರು ಪ್ರತಿಭಟನೆ ನಡೆಸಿದರು.

■ ಸತ್ಯಮೂರ್ತಿ ತೋಳಹುಣಸೆ

ಹಾಡಲ್ಲಿ ಹೊರಬಂತು 'ಪೆನ್‌ಡ್ರೈವ್' ಕಥೆ



ಪೆನ್‌ಡ್ರೈವ್ ಕಳೆದವರ್ಷ ರಾಜ್ಯದಲ್ಲಿ ಸಾಕಷ್ಟು ಸದ್ದುಮಾಡಿದ ಪದ. ಇದೀಗ ಅದೇ ಶೀರ್ಷಿಕೆ ಇಟ್ಟುಕೊಂಡು ಕನ್ನಡ ಚಿತ್ರವೊಂದು ನಿರ್ಮಾಣವಾಗಿದೆ. ಈ ಚಿತ್ರದಲ್ಲಿ ಕಾಲ್ಪನಿಕ ಇನ್‌ವೆಸ್ಟಿಗೇಶನ್ ಕಥಾಹಂದರವಿದ್ದು ಆ ಪೆನ್‌ಡ್ರೈವ್ ಘಟನೆಗೂ ನಮ್ಮ ಚಿತ್ರದ ಕಥೆಗೂ ಯಾವುದೇ ಸಂಬಂಧವಿಲ್ಲ ಎಂದು ಚಿತ್ರದ ನಿರ್ದೇಶಕ ಸೆಬಾಸ್ಟಿನ್ ಡೇವಿಡ್ ಹೇಳಿದ್ದಾರೆ. ಆದರೆ, ಚಿತ್ರ ತೆರೆಕಂಡ ಮೇಲಷ್ಟೇ ಅವರ ಬಂಡವಾಳ ಗೊತ್ತಾಗೋದು. ಈ ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಬಿಗ್‌ಬಾಸ್ ಖ್ಯಾತಿಯ ತನಿಷಾ ಕುಪ್ಪಂಡ, ಕಿಶನ್ ಹಾಗೂ ಕನಸಿನ ರಾಣಿ ಮಾಲಾಶ್ರೀ ಈ ಚಿತ್ರದ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಅಲ್ಲದೆ ಚಿತ್ರದ ಹಾಡುಗಳನ್ನು ಡಾ॥ವಿ.ನಾಗೇಂದ್ರಪ್ರಸಾದ್ ಬರೆದು, ಸಂಗೀತ ಸಂಯೋಜನೆ ಕೂಡ ಮಾಡಿದ್ದಾರೆ.

'ಪೆನ್‌ಡ್ರೈವ್' ಚಿತ್ರ ಆರಂಭವಾಗಲು ನಿರ್ಮಾಪಕ ಲಯನ್ ವೆಂಕಟೇಶ್ ಅವರೇ ಕಾರಣ. ಅನಂತರ ಹನುಮಂತರಾಜು, ಚಿತ್ರನಿರ್ಮಾಣಕ್ಕೆ ಸಾಥ್ ನೀಡಿದರು. ಸಿನಿಮಾ ಅಂದುಕೊಂಡ ಹಾಗೆಯೇ ಮೂಡಿ ಬಂದಿದೆ. ನನ್ನ ಹಿಂದಿನ ಚಿತ್ರಗಳಲ್ಲೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರವಿತ್ತು. ಇದರಲ್ಲೂ ಜನರು ಅದನ್ನು ನಿರೀಕ್ಷಿಸಬಹುದು. ನಮ್ಮ ಚಿತ್ರಕ್ಕೆ ಈ ಶೀರ್ಷಿಕೆಯಿಟ್ಟ ಮೇಲೆ ಅನೇಕ ಅನಾಮಧೇಯ ಕರೆಗಳು ಬಂದವು, ಈ ಶೀರ್ಷಿಕೆ ಇಟ್ಟಿದ್ದು ಏಕೆ? ಎಂಬ ಪ್ರಶ್ನೆಯನ್ನು ಸಾಕಷ್ಟು ಜನ ಕೇಳಿದ್ದಾರೆ. ಸಾಕಷ್ಟು ಅಡೆತಡೆಗಳನ್ನು ದಾಟಿ ನಮ್ಮ ಚಿತ್ರ ಜುಲೈ 4ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ ಎಂದು ನಿರ್ದೇಶಕ ಸೆಬಾಸ್ಟಿನ್ ಡೇವಿಡ್ ಹೇಳಿದರು.

ನಾನು ಈ ಚಿತ್ರದಲ್ಲಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು ಒಂದೊಳ್ಳೆ ತಂಡದ ಜೊತೆಗೆ ಕೆಲಸ ಮಾಡಿದ ಅನುಭವವಾಯಿತು, ಕಿಶನ್ ಅವರ ಜೊತೆಗೆ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದೇನೆ ಎಂದು ತನಿಷಾ ಕುಪ್ಪಂಡ ಹೇಳಿದರು

ನಿರ್ಮಾಪಕರಾದ ಹನುಮಂತ ರಾಜು ಹಾಗೂ ಲಯನ್ ಎಸ್. ವೆಂಕಟೇಶ್ ಮಾತನಾಡುತ್ತ, ಚಂದನ್ ಫಿಲಂಸ್ ಮೂಲಕ ರಾಜ್ಯಾದ್ಯಂತ 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗುತ್ತಿದೆ ಎಂದರು. ಸಂಗೀತ ನಿರ್ದೇಶಕ ಹಾಗೂ ಗೀತರಚನೆಕಾರ ವಿ.ನಾಗೇಂದ್ರಪ್ರಸಾದ್, ಛಾಯಾಗ್ರಾಹಕ ಪಿ.ವಿ.ಆರ್. ಸ್ವಾಮಿ, ನಟ ಕರಿಸುಬ್ಬು, ಟೈಗರ್ ವೆಂಕಟೇಶ್ ಮುಂತಾದವರು ಪೆನ್‌ಡ್ರೈವ್ ಚಿತ್ರದ ಕುರಿತಂತೆ ಮಾತನಾಡಿದರು.



ಕ್ವಾಟ್ಲೆ ಕಿಚನ್‌ನಲ್ಲಿ ಶೃತಿ–ಅನುಪಮಾಗೌಡ





ಕನ್ನಡದ ಹಿರಿಯನಟಿ ಶೃತಿ ಅವರು ಕಿರುತೆರೆಗೆ ಬಂದಿದ್ದಾರೆ. 'ಕ್ವಾಟ್ಲೆ ಕಿಚನ್' ಎಂಬ ಕಾಮಿಡಿ ಕುಕ್ಕಿಂಗ್ ಶೋ ಪ್ರಾರಂಭವಾಗಿದ್ದು, ಇದರ ತೀರ್ಪುಗಾರರಾಗಿ ಶೃತಿ ಭಾಗ ವಹಿಸುತ್ತಿದ್ದಾರೆ. ಅನುಪಮಾಗೌಡ ಅವರ ನಿರೂಪಣೆಯ ಈ ಕಾರ್ಯಕ್ರಮದಲ್ಲಿ ಅಡುಗೆಯ ಜೊತೆ ಹಾಸ್ಯದ ರಸದೌತಣವೂ ಇರುತ್ತದೆ. ಜೋಡಿಗಳ ನಡುವೆ ಅಡುಗೆ ಸ್ಪರ್ಧೆ. ಈ ಜೋಡಿಯಲ್ಲಿ ಒಬ್ಬರಿಗೆ ಅಡುಗೆ ಬಂದರೆ, ಮತ್ತೊಬ್ಬರಿಗೆ ಪಾಕಶಾಸ್ತ್ರದ ಗಂಧ ಗಾಳಿ ಗೊತ್ತಿರಲ್ಲ. ಐವರು ನಳಪಾಕ ಪ್ರವೀಣರಿಗೆ ಸಹಾಯಕರಾಗಿ ಮತ್ತೈದು ನಗೆಪಾಕ ಪ್ರವೀಣರು ಕಾರ್ಯಕ್ರಮದಲ್ಲಿರುತ್ತಾರೆ. ಕುಕ್ ಮತ್ತು ಕ್ವಾಟ್ಲೆಗಳು ಸೇರಿ ಅಡುಗೆ ಮಾಡುವಾಗ ಹುಟ್ಟುವ ತಮಾಷೆ. ತರ್ಲೆಗಳೇ ಈ ಶೋನ ಪ್ರಮುಖ ಆಕರ್ಷಣೆ. ಚಕಚಕ ಅಡುಗೆ ಮಾಡಿ ಮುಗಿಸಲು ಹೊರಟ ಪಾಕಪ್ರವೀಣರಿಗೆ ಅಡ್ಡಗಾಲಾಗಿ ನಿಲ್ಲುವುದೇ ಈ ಕ್ವಾಟ್ಲೆ ಸಹಾಯಕರು. ಟಾರ್ಚರ್ ಕೊಡಲಿಕ್ಕೆಂದೇ ಬಂದಿರುವ ಈ ಕ್ವಾಟ್ಲೆಗಳು ಜೋಕರ್‌ಗಳಾಗಿ ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತಾರೆ.

ಇಲ್ಲಿ ಕುಕ್‌ಗಳಾಗಿ ಬೆಳ್ಳುಳ್ಳಿ ಕಬಾಬ್ ಚಂದ್ರು, ಆರ್.ಕೆ. ಚಂದನ್, ದಿಲೀಪ್ ಶೆಟ್ಟಿ, ರಾಘವೇಂದ್ರ ಕೆಂಪಮ್ಮ, ಪ್ರೇರಣ ಕಂಬಂ, ಕಾವ್ಯಗೌಡ, ಶಿಲ್ಪ ಕಾಮತ್, ಶರ್ಮಿತಗೌಡ ಮತ್ತು ಸೋನಿಯಾ ಪೊನ್ನಮ್ಮ ಭಾಗವಹಿಸಲಿದ್ದಾರೆ.

ಇವರಿಗೆ ಕ್ವಾಟ್ಲೆ ಕೊಡಲೆಂದು ಲ್ಯಾಗ್ ಮಂಜು, ಧನರಾಜ್ ಆಚಾರ್, ತುಕಾಲಿ ಸಂತೋಷ್, ನಿವೇದಿತಾಗೌಡ, ಪ್ರಶಾಂತ್, ಸೂರಜ್, ಗಿಲ್ಲಿ ನಟ, ಸೋನಿ ಮುಲೇವ, ವಾಣಿಗೌಡ ದಿಶಾ ಉಮೇಶ್ ಇರುತ್ತಾರೆ.

ಇನ್ನು ಈ ವಿಶಿಷ್ಟ ಕಾರ್ಯಕ್ರಮದ ತೀರ್ಪುಗಾರರಾಗಿ ಹಿರಿಯನಟಿ ಶ್ರುತಿ ಮತ್ತು ಚೆಫ್ ಕೌಶಿಕ್ ಇರುತ್ತಾರೆ. ಕಿಚನ್ ಸ್ಟಾರ್‌ಗಳು ಮತ್ತು ಕ್ವಾಟ್ಲೆಗಳ ಮೋಜು–ಮಸ್ತಿಯ ಈ ಜಗಳ್‌ಬಂದಿ ಕಾರ್ಯಕ್ರಮವನ್ನು ನಿರೂಪಕಿ ಅನುಪಮಾಗೌಡ ಮತ್ತು ಕುರಿ ಪ್ರತಾಪ್ ನಡೆಸಿಕೊಡಲಿದ್ದಾರೆ. ಕ್ವಾಟ್ಲೆ ಕಿಚನ್ ರಿಯಾಲಿಟಿ ಶೋ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9 ಗಂಟೆಗೆ ಪ್ರಸಾರವಾಗಲಿದೆ.

ಮಲ್ಟಿಸ್ಟಾರರ್ '45' ಪ್ರಮೋಷನ್ ಹಾಡಿನಲ್ಲಿ ಉಗಾಂಡದ ಜಿಟೊ ಕಿಡ್ಸ್ ನೃತ್ಯಗಾರರು



ಡಾ. ಶಿವರಾಜಕುಮಾರ್,ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿರುವ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ನಿರ್ದೇಶನದ, ಕನ್ನಡದ ಬಹುನಿರೀಕ್ಷಿತ ಮಲ್ಟಿ ಸ್ಟಾರರ್ ಚಿತ್ರ 45 ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಈ ಚಿತ್ರದ ಪ್ರಚಾರಕ್ಕಾಗಿ ವಿಶೇಷವಾದ ಪ್ರಮೋಷನಲ್ ಹಾಡು ಅಳವಡಿಕೆಯಾಗಿದೆ. ಈ ಹಾಡಲ್ಲಿ ಶಿವಣ್ಣ, ಉಪೇಂದ್ರ ಅವರೊಂದಿಗೆ ಹೆಜ್ಜೆಹಾಕಲು ಉಗಾಂಡದಿಂದ 'ಜಿಟೊ ಕಿಡ್ಸ್' ಎಂದೇ ಹೆಸರಾಗಿರುವ ನೃತ್ಯಗಾರರ ತಂಡ ಭಾರತಕ್ಕೆ ಆಗಮಿಸಿದೆ. ಈ ಹಾಡಿನ ಕುರಿತಂತೆ ಮಾತನಾಡಿದ ನಿರ್ದೇಶಕರು, ಪ್ರಮೋಷನಲ್ ಸಾಂಗ್‌ನ್ನು ನಾವು ಸ್ವಲ್ಪ ವಿಭಿನ್ನವಾಗಿ ಮಾಡೋಣ ಎಂಬ ಉದ್ದೇಶದಿಂದ ಅದ್ಭುತ ನೃತ್ಯದಿಂದಲೇ ಹೆಸರಾಗಿರುವ 'ಜಿಟೊ ಕಿಡ್ಸ್' ತಂಡ ಡಾನ್ಸ್ ಮಾಡಲು ದೂರದ ಉಗಾಂಡದಿಂದ ಇದೇ ಮೊದಲ ಬಾರಿಗೆ ಭಾರತಕ್ಕೆ ಆಗಮಿಸಿದೆ. ಈ ಹಾಡಿನಲ್ಲಿ ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ.ಶೆಟ್ಟಿ ಹಾಗೂ ಜಿಟೊ ಕಿಡ್ಸ್ ಪಾಲ್ಗೊಳ್ಳಲಿದ್ದಾರೆ. ಇದಕ್ಕಾಗಿ ಬೆಂಗಳೂರಿನಲ್ಲಿ ಅದ್ದೂರಿ ಸೆಟ್ಟನ್ನು ಸಹ ಹಾಕಲಾಗಿದೆ. ಕನ್ನಡದಲ್ಲಿ ಎಂ.ಸಿ. ಬಿಜ್ಜು ಈ ಹಾಡನ್ನು ಬರೆದು ಅವರೇ ಹಾಡಿದ್ದಾರೆ. ಜಾನಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಲಿದ್ದಾರೆ ಎಂದರು.

ನಮ್ಮ ನಿರ್ದೇಶಕರು ಸಿನಿಮಾವನ್ನು ಪ್ರೀತಿಸುವ ರೀತಿ ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಈಗ ಪ್ರಮೋಷನ್ ಸಾಂಗನ್ನು ಅದ್ದೂರಿಯಾಗಿ ಚಿತ್ರೀಕರಣ ಮಾಡಲು ಮುಂದಾಗಿದ್ದಾರೆ. ಎಲ್ಲಾ ಕಲಾವಿದರ ಹಾಗೂ ತಂತ್ರಜ್ಞರ ಸಹಕಾರದಿಂದ '45' ಚಿತ್ರ ಚೆನ್ನಾಗಿ ಮೂಡಿಬರುತ್ತಿದೆ. ನಮ್ಮ ಚಿತ್ರ, ಭಾರತ ಅಲ್ಲದೆ ವಿದೇಶದಲ್ಲೂ ಯಶಸ್ವಿಯಾಗಲಿದೆ ಎಂಬ ವಿಶ್ವಾಸ ನನಗಿದೆ. ಆಗಸ್ಟ್ 15 ರಂದು ಚಿತ್ರ ಅದ್ದೂರಿಯಾಗಿ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕ ಎಂ.ರಮೇಶ್ ರೆಡ್ಡಿ ಸಂಭ್ರಮದಿಂದ ಹೇಳಿದ್ದಾರೆ.

ಪ್ರೇಮಿಗಳು 'ಡೆಡ್ಲಿ ಲವರ್ಸ್' ಆದ ರೋಚಕ ಕಥೆ



ತನ್ನ ಟೈಟಲ್ ಮೂಲಕವೇ ಗಮನ ಸೆಳೆಯುತ್ತಿರುವ ಚಿತ್ರ 'ಡೆಡ್ಲಿ ಲವರ್ಸ್'. ನಾಗೇಂದ್ರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. 'ಹುಲಿಯಾ' ನಿರ್ಮಾಪಕ ಗೋವಿಂದರಾಜ್ ಅವರು ಟ್ರೈಲರ್ ಲಾಂಚ್ ಮಾಡಿದರು. ನಾಗೇಂದ್ರ ಚಿತ್ರವನ್ನು ನಿರ್ಮಿಸಿದ್ದಾರೆ, ಅಖಿಲ್ ಕುಮಾರ್, ತನು ಪ್ರಸಾದ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರೇಮಾಗೌಡ, ಭಾಸ್ಕರ್, ವಿನೋದ್, ಲಹರಿ ವೇಲು ಚಿತ್ರದಲ್ಲಿ ನಟಿಸಿದ್ದಾರೆ. ಲಯಕೋಕಿಲ ಅವರ ಸಂಗೀತ ಸಂಯೋಜನೆ, ಹೆಚ್.ಎನ್.ನರಸಿಂಹಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಡೆಡ್ಲಿ ಲವರ್ಸ್ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಎ.ಆರ್.ಲೋಕೇಶ್ ಕಾರ್ಯನಿರ್ವಹಿಸಿದ್ದಾರೆ.

ನಿರ್ದೇಶಕ ಕಮ್ ನಿರ್ಮಾಪಕ ನಾಗೇಂದ್ರ ಮಾತನಾಡಿ, ಎಸ್.ಉಮೇಶ್ ಅವರ ಬಳಿ ಒಂದಷ್ಟು ದಿನ ಕೆಲಸ ಮಾಡಿ ಮೊದಲ ಬಾರಿಗೆ 'ಡೆಡ್ಲಿ ಲವರ್ಸ್' ಚಿತ್ರ ನಿರ್ದೇಶಿಸಿದ್ದೇನೆ. ಚಿತ್ರದಲ್ಲಿ ಒಟ್ಟು ಆರು ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ. ಇಬ್ಬರು ಪ್ರೇಮಿಗಳು ಅಕಸ್ಮಾತ್ ಭೂಗತ ಲೋಕಕ್ಕೆ ಎಂಟ್ರಿ ಕೊಡುತ್ತಾರೆ. ಆನಂತರ ಖಳನಾಯಕನ ಕಣ್ಣುತಪ್ಪಿಸಿ ಡ್ರಗ್ಸ್ ಮಾರಾಟದಿಂದ ಬಂದಿದ್ದ ಅಪಾರ ಪ್ರಮಾಣದ ಹಣವನ್ನು ಅಪಹರಿಸುತ್ತಾರೆ. ಈ ವಿಷಯ ಹೋಂ ಮಿನಿಸ್ಟರ್‌ವರೆಗೆ ಹೋಗುತ್ತದೆ. ನಂತರ ಅವರು ಈ ಕೇಸನ್ನು ಪತ್ತೆ ಹಚ್ಚುವ ಜವಾಬ್ದಾರಿಯನ್ನು ಎಸಿಪಿಗೆ ವಹಿಸುತ್ತಾರೆ. ಅಷ್ಟಕ್ಕೂ ಆ ಪ್ರೇಮಿಗಳಿಬ್ಬರೂ ಡೆಡ್ಲಿ ಆಗಲು ಕಾರಣವೇನು? ಇವರಿಬ್ಬರ ಹಿನ್ನೆಲೆ ಏನು? ಅಂತಿಮವಾಗಿ ಅಷ್ಟೊಂದು ಮೊತ್ತದ ಹಣ ಯಾರಿಗೆ ದಕ್ಕುತ್ತದೆ? ಇತ್ತ ಖಳನಾಯಕ ತನ್ನ ಸೇಡು ತೀರಿಸಿಕೊಂಡನಾ? ಇಲ್ಲ ಪೊಲೀಸರು ಆತನನ್ನು ಎನ್‌ಕೌಂಟರ್ ಮಾಡಿದರಾ? ಈ ಎಲ್ಲ ಕುತೂಹಲಗಳಿಗೆ ಚಿತ್ರದಲ್ಲಿ ಉತ್ತರವಿದೆ. ಮಂಚನಬೆಲೆ ಡ್ಯಾಂ, ಬೆಂಗಳೂರು ಸುತ್ತಮುತ್ತ ಡೆಡ್ಲಿ ಲವರ್ಸ್ ಚಿತ್ರದ ಚಿತ್ರೀಕರಣ ನಡೆಸಲಾಗಿದೆ ಎಂದು ಹೇಳಿದರು.

ಈಗಾಗಲೇ 18 ಸಿನಿಮಾಗಳ ನಿರ್ಮಾಣ ಮಾಡಿರುವ ಪ್ರಶಾಂತ್ ನಾಯಕ್ ಅವರು 'ತಾಂಡವ ಮೂವಿ ಮೇಕರ್ಸ್' ಮೂಲಕ 'ಡೆಡ್ಲಿ ಲವರ್ಸ್' ಚಿತ್ರವನ್ನು ವಿತರಣೆ ಮಾಡುತ್ತಿದ್ದಾರೆ. ರಾಜ್ಯಾದ್ಯಂತ ಸುಮಾರು 50ರಿಂದ 60 ಚಿತ್ರಮಂದಿರಗಳಲ್ಲಿ ಚಿತ್ರವನ್ನು ತೆರೆಗೆ ತರುತ್ತಿದ್ದಾರೆ.




ಡೆಡ್ಲಿ ಲವರ್ಸ್ ಟೀಂ.

ಸಿನಿಪದಬಂಧ–581



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಸಾಹಸಸಿಂಹನಿಗಿರುವ ಅಭಿಮಾನಿಗಳ ಬಿರುದು 7
5. ನಾವಾಡುವ ನುಡಿ 2
6. ಸ್ಟಾರ್ ಯಶ್‌ನನ್ನು ಹೀಗೆ ಕರೆಯಿರಿ 3
7. ರಾಮ್‌ಕುಮಾರ್ ಅಭಿನಯದಲ್ಲಿ ಸಿಕ್ಕ ಬೆಲೆಬಾಳುವ ಮಣಿ 2
8. ಮೈದಾನದಲ್ಲಿ "ಉರಿದ ಹಣತೆ" 5
9. ಹೆಸರಿನ ಹಿಂದೆ ಬರುವ ಗೌರವ ಸೂಚಕ ಪದ ಅನಂತ್ ನಾಗ್ ಅಭಿನಯದಲ್ಲಿದೆ 3
11. " _ _ _ ಸಿರಿಯ ಕಂಡು ಬಯಕೆ ಸಿಹಿಯ ಉಂಡು... " 3
12. ಗುರುಬ್ರಹ್ಮ ಚಿತ್ರದ ನಾಯಕಿ ಒಳ್ಳೆಯ ಹೆಣ್ಣು 3
14. ಅನುಪ್ರಭಾಕರ್, ವಿಜಯಲಕ್ಷ್ಮಿ ಅಭಿನಯದ ಹಾರರ್ ಥ್ರಿಲ್ಲರ್ ಚಿತ್ರ 5
16. ಯಾತ್ರಾ ಸ್ಥಳವೊಂದನ್ನು ನೆನಪಿಸುವ ಹಾಸ್ಯ ನಟ 2
18. ಅಜಗಜಗಿರುವ ವ್ಯತ್ಯಾಸ 3
19. ಒಲವಿನ _ _ _ 3
20. ಕೆ.ವಿ.ಜಯರಾಂ ಅವರ ಉಸುಕಿನ ಕೊಂಡಿ 7

ಮೇಲಿನಿಂದ ಕೆಳಕ್ಕೆ

1. ಕಾಶಿನಾಥ್‌ಗೆ ಆದ ಎಕ್ಸ್‌ಪೀರಿಯನ್ಸ್ 4
2. ನರಕಾಧಿಪತಿಯ ಜೊತೆ ಆತನ ಸೇವಕನೂ ಇದ್ದಾನೆ 5
3. ಶಿವಣ್ಣ ಬಲವಾದ ದೇಹವುಳ್ಳವನು 4
4. ಕನ್ನಡದ ಗೋಲ್ಡ್ ಮೆಡಲ್ 5
8. ಕಲ್ಪನಾಳ ವಿಶಾಲವಾದ ಹಾದಿ 5
10. ಡ್ರಗ್ಸ್ ಸೇವಿಸುವವನಿಗೆ ಹೀಗೆ ಹೇಳಿ 6
13. ವನವಾಸವಲ್ಲ ಯಾರಿಗೂ ತಿಳಿಯದೆ ಇರುವುದು 5
15. ರಾಕ್‌ಲೈನ್ ವೆಂಕಟೇಶ್ ನೇಗಿಲು ಹಿಡಿದಿದ್ದಾನೆ 4
17. ಗೋಲಿಬಾರ್ ಚಿತ್ರದ ನಿರ್ದೇಶಕ 4

ಸಿನಿ ಪದಬಂಧ 580ರ ಉತ್ತರ

ಈ	ಬಂ	ಧ	ಅ	ನು	ಬಂ	ಧ			ಸ	
ಬಂ			ಜ್ಞಾ			ನ		ಸು	ನಿ	ಲ್
ಧ		ಜಾ	ತ	ಕ		ಲ			ಹ	
ನ	ಗ್ಮ		ವಾ		ಲ	ಕ್ಷ್ಮೀ	ನಿ	ವಾ	ಸ	
			ಸಿ		ಗ್ನ				ನಿ	
ಭ	ರಾ	ಟೆ		ಕಂ	ಪ	ನ		ಸಾ	ಹ	ಸ
	ಗ				ತ್ರಿ		ಹೊ			
	ರಂ	ಭೆ	ಮೇ	ನ	ಕೆ		ಸ		ಭೀ	ಮ
	ಗು			ವ		ನ	ಜೀ	ರ್		ದ
ಅ	ಮೂ	ಲ್ಯ		ನೀ			ವ			ನಿ
	ಡಿ			ತ	ವ	ರಿ	ನ	ಕಾ	ಣಿ	ಕೆ

ವಿಜೇತರು: ಬಾಲರಾಜ್, ನಂ.640, 10ನೇ ಕ್ರಾಸ್, ಒಂಟಿಕೊಪ್ಪಲ್, ಮೈಸೂರು



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ

ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಮನುಷ್ಯ–ಪ್ರಕೃತಿಯ ಸಂಬಂಧದ ಕಥೆ 'ತಿಮ್ಮನ ಮೊಟ್ಟೆಗಳು'



ರಕ್ಷಿತ್ ತೀರ್ಥಹಳ್ಳಿ ಅವರ ರಚನೆ ಮತ್ತು ನಿರ್ದೇಶನದ, ಆದರ್ಶ ಅಯ್ಯಂಗಾರ್ ನಿರ್ಮಾಣದ ತಿಮ್ಮನ ಮೊಟ್ಟೆಗಳು ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು, ಪಿ.ಶೇಷಾದ್ರಿ, ಉರಗತಜ್ಞ ಗೌರಿಶಂಕರ್, ಶಿವಕುಮಾರ್ ನಾಗರನವಿಲೆ, ನಿರ್ದೇಶಕ ಕೂಡ್ಲು ರಾಮಕೃಷ್ಣ ಸೇರಿ ಟ್ರೇಲರ್ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಶ್ರೀಕೃಷ್ಣ ಪ್ರೊಡಕ್ಷನ್ಸ್ ಬ್ಯಾನರ್‌ನ ಚೊಚ್ಚಲ ನಿರ್ಮಾಣದ ಈ ಚಿತ್ರಕ್ಕೆ ಆದರ್ಶ್ ಅಯ್ಯಂಗಾರ್ ಬಂಡವಾಳ ಹಾಕಿದ್ದಾರೆ.

ವೇದಿಕೆಯಲ್ಲಿ ಮಾತನಾಡಿದ ನಿರ್ದೇಶಕ ಪಿ.ಶೇಷಾದ್ರಿ, ಈ ಚಿತ್ರವನ್ನು ಕೊಲ್ಕತ್ತಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನೋಡಿದ್ದೇನೆ. ಈಗಿನ ಪರಿಸ್ಥಿತಿಗೆ ತಕ್ಕಂತಹ ಕಥಾವಸ್ತುವನ್ನು ನಿರ್ದೇಶಕರು ಆಯ್ಕೆ ಮಾಡಿಕೊಂಡಿದ್ದಾರೆ. ಚಿತ್ರ ಚೆನ್ನಾಗಿ ಮೂಡಿಬಂದಿದೆ. ಈಗ ದಿನಕ್ಕೊಂದು ಚಿತ್ರದಂತೆ ವರ್ಷಕ್ಕೆ 360 ಚಿತ್ರಗಳು ಬಿಡುಗಡೆಯಾಗುತ್ತಿದೆ ಆದ್ದರಿಂದ ಚಿತ್ರಮಂದಿರಕ್ಕೆ ಜನರು ಬರುವ ಸಂಖ್ಯೆ ಕಡಿಮೆಯಾಗಿದೆ. ಚಿತ್ರ ಬಿಡುಗಡೆಯ ಸಂಖ್ಯೆ ಕಡಿಮೆಯಾಗಬೇಕು. ಆಗ ಇಂತಹ ಸದಭಿರುಚಿಯ ಚಿತ್ರಗಳನ್ನು ನೋಡಲು ಜನರು ಚಿತ್ರಮಂದಿರಗಳಿಗೆ ಬರುತ್ತಾರೆ ಎಂದರು.

ನಿರ್ದೇಶಕ ರಕ್ಷಿತ್ ತೀರ್ಥಹಳ್ಳಿ ಮಾತನಾಡುತ್ತ , ಇದು ನಾನೇ ಬರೆದ ಕಾಡಿನ ನೆಂಟರು ಎಂಬ ಕಥಾಸಂಕಲನದಿಂದ ಆಯ್ದ ಒಂದು ಕಥೆ, ಪಶ್ಚಿಮಘಟ್ಟದ ಕಾಡುಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುವ ಕಾಳಿಂಗಸರ್ಪದ ಕುರಿತಂತೆ ಈ ಚಿತ್ರದಲ್ಲಿ ಪ್ರಮುಖವಾಗಿ ಹೇಳಲಾಗಿದ್ದು, ಮನುಷ್ಯನಲ್ಲಿರುವ ಹಾಗೆ ಪ್ರಾಣಿಗಳಲ್ಲೂ ಬಾಂಧವ್ಯವಿದೆ. ಈ ಥರದ ಅನೇಕ ವಿಚಾರಗಳನ್ನು ಜನರ ಮುಂದಿಡುವ ಪ್ರಯತ್ನ ಮಾಡಿದ್ದೇನೆ. ಸಾಕಷ್ಟು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗಿರುವ ನಮ್ಮ ಚಿತ್ರ ಜೂನ್ 27ರಂದು ಬಿಡುಗಡೆಯಾಗುತ್ತಿದೆ ಎಂದು ಹೇಳಿದರು,

ಪ್ರಕೃತಿ ಮತ್ತು ಮನುಷ್ಯನ ನಡುವಿನ ಸೂಕ್ಷ್ಮ ಸಂವೇದನೆಗಳನ್ನೊಳಗೊಂಡ ಕಥಾವಸ್ತುವನ್ನು ನಿರ್ದೇಶಕರು ಈ ಚಿತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಹಿರಿಯ ನಟ ಸುಚೇಂದ್ರ ಪ್ರಸಾದ್ ತಿಳಿಸಿದರು. ತಿಮ್ಮನ ಪಾತ್ರಧಾರಿ ಕೇಶವ್ ಗುತ್ತಳಿಕೆ ಸಹ ತಮ್ಮ ಪಾತ್ರದ ಬಗ್ಗೆ ಮಾತನಾಡಿದರು. ಆಶಿಕಾ ಸೋಮಶೇಖರ್, ಪ್ರಗತಿ ಪ್ರಭು, ರಘು ರಾಮನಕೊಪ್ಪ ಹಾಗೂ ಸಂಗೀತ ನಿರ್ದೇಶಕ ಹೇಮಂತ್ ಜೋಯಿಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕುಪ್ಯದಲ್ಲಿ ಡಿಜಿಟಲ್ ಗ್ರಂಥಾಲಯ, ಮಾಹಿತಿ ಕೇಂದ್ರ ಉದ್ಘಾಟನೆ

●ಯುವಜನತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಯಾಗಿ: ಎಂಎಲ್‌ಸಿ ಡಾ.ಯತೀಂದ್ರ ●ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಮಸ್ಯೆ ಆಲಿಕೆ ●ಡೈರಿ ಕಟ್ಟಡ ಸಭಾಂಗಣಕ್ಕೆ ಭೂಮಿ ಪೂಜೆ

ತಿ.ನರಸೀಪುರ, ಜೂ.19– ವಿದ್ಯಾವಂತ ಯುವಜನತೆ ಡಿಜಿಟಲ್ ಗ್ರಂಥಾಲಯದ ಉಪಯೋಗ ಪಡೆದು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಲಹೆ ನೀಡಿದರು.

ತಾಲೂಕಿನ ಕುಪ್ಯ ಗ್ರಾಮದಲ್ಲಿ ಗ್ರಾಪಂ ವತಿಯಿಂದ ತೆರೆಯಲಾಗಿರುವ ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ವಿದ್ಯಾವಂತ ಯುವಕರು ಗ್ರಂಥಾಲಯಗಳಲ್ಲಿ ದಿನಪತ್ರಿಕೆ, ಕಾದಂಬರಿ, ಪುಸ್ತಕ, ಸ್ಪರ್ಧಾತ್ಮಕ ಪುಸ್ತಕಗಳನ್ನು ಓದುವ ಮೂಲಕ ಜ್ಞಾನ ಹೆಚ್ಚಿಸಿಕೊಳ್ಳುತ್ತಿದ್ದರು. ಕಾಲ ಬದಲಾದಂತೆ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿ ನೋಡಿ ತಿಳಿಯುವಂತಾಗಿದೆ. ಕುಪ್ಯ ಗ್ರಾಪಂನಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳ ಜೊತೆಗೆ ಇತರರು ಬಳಸಿಕೊಳ್ಳುವ ಮೂಲಕ ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದರು.

ನಗರಗಳಲ್ಲಿ ವಿದ್ಯಾರ್ಥಿಗಳು ಖಾಸಗಿ ಸೈಬರ್‌ಗೆ ಹೋಗುತ್ತಾರೆ ಹಾಗೂ ಅವರಿಗೆ ಬೇಕಾದ ಅರ್ಜಿಗಳನ್ನು ಸಲ್ಲಿಸುತ್ತಾರೆ. ಪ್ರಸ್ತುತ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಹಿಂದುಳಿದಿರುವ ಗ್ರಾಮೀಣ ಯುವಕರ ಪ್ರತಿಭೆ ಹೊರತರಲು ಈ ಡಿಜಿಟಲ್ ಗ್ರಂಥಾಲಯ ಬಹಳ ಉಪಯುಕ್ತವಾಗಿದೆ. ವಿಶೇಷವಾಗಿ ಐಎಎಸ್, ಐಪಿಎಸ್, ಯುಪಿಎಸ್‌ಸಿ, ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಸ್ಪರ್ಧಿಸಲು ಈ ಗ್ರಂಥಾಲಯ ಅಗತ್ಯವಾಗಿದೆ. ಇದನ್ನು ಬಳಸಿಕೊಂಡು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆಯುವ ಮೂಲಕ ಉನ್ನತ ಹುದ್ದೆ ಪಡೆಯಬಹುದು ಎಂದರು.



ಕುಪ್ಯದಲ್ಲಿ ತೆರೆಯಲಾಗಿರುವ ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನು ಉದ್ಘಾಟಿಸಿ ಎಂಎಲ್‌ಸಿ ಡಾ.ಯತೀಂದ್ರ ದಿನಪತ್ರಿಕೆ ಓದಿನಲ್ಲಿ ತಲ್ಲೀನರಾದರು.

ಜನಸ್ಪಂದನಾ ಕಾರ್ಯಕ್ರಮ: ಕುಪ್ಯ ಹಾಗೂ ಹಿಟ್ಟುವಳ್ಳಿ ಗ್ರಾಮದಲ್ಲಿ ನಡೆದ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಿದ ಡಾ.ಯತೀಂದ್ರ ಸಂಬಂಧಿಸಿದ ಅಧಿಕಾರಿಗಳಿಗೆ ಸಮಸ್ಯೆ ಬಗೆಹರಿಸುವಂತೆ ಸೂಚನೆ ನೀಡಿದರು.

ಅಹವಾಲು ಸಲ್ಲಿಕೆ ಕಾರ್ಯಕ್ರಮದಲ್ಲಿ ಪಡಿತರ ಚೀಟಿ, ಸರ್ಕಾರಿ ಬಸ್ ವ್ಯವಸ್ಥೆ, ವಂಶವೃಕ್ಷ, ನಿವೇಶನ, ರಸ್ತೆ ನಿರ್ಮಾಣ, ವಿದ್ಯುತ್ ಕಂಬ ಅಳವಡಿಕೆ, ನೌಕರಿಗಾಗಿ ಅರ್ಜಿ ಸೇರಿದಂತೆ ವಿವಿಧ ಸಮಸ್ಯೆಗಳು ಅನಾವರಣಗೊಂಡವು.

ಗ್ರಾಮದ ವೃದ್ಧೆಯೊಬ್ಬರು ತಮಗೆ ರೇಷನ್ ಕಾರ್ಡ್ ಕೊಟ್ಟಿಲ್ಲ ಎಂದು ದೂರಿದ ವೇಳೆ ಫಲಾನುಭವಿಗೆ ಪಿಂಚಣಿ ಸರ್ಟಿಫಿಕೇಟ್ ಕೊಟ್ಟಿದ್ದೇವೆ. ಮನೆಯಲ್ಲಿ ಒಬ್ಬರೇ ಇರುವುದರಿಂದ ಸಮಸ್ಯೆ ಉಂಟಾಗಿದೆ. ಹಾಗಾಗಿ ಆಕೆಗೆ ರೇಷನ್ ಕಾರ್ಡ್ ಕೊಡಿಸುವಂತೆ ಅಧಿಕಾರಿಗೆ ಸೂಚನೆ ನೀಡಿದರು.

ಕುಪ್ಯ ಗ್ರಾಪಂ ಹೆಚ್ಚು ಜನರನ್ನು ಹೊಂದಿರುವ ಗ್ರಾಮವಾಗಿದ್ದು, ಶಾಲೆ ಮತ್ತು ಫ್ಯಾಕ್ಟರಿಗೆ ಹೋಗಲು ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲ ಎಂದು ಗ್ರಾಮಸ್ಥರು ದೂರಿದ ಹಿನ್ನೆಲೆಯಲ್ಲಿ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಕಲ್ಪಿಸುವ ಜೊತೆಗೆ ಬೆಂಗಳೂರಿಗೆ ತೆರಳುವ ಬಸ್‌ಗಳು ಗ್ರಾಮದಲ್ಲಿ ನಿಲ್ಲಿಸಿ ಹೋಗಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ವ್ಯಕ್ತಿಯೊಬ್ಬರಿಗೆ ನಿವೇಶನದ ಹಕ್ಕು ಪತ್ರ ಕೊಟ್ಟಿರುವ ಜಾಗದಲ್ಲಿ ಅಂಗನವಾಡಿ ಕಟ್ಟಡ ಕಟ್ಟಲಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಅಧಿಕಾರಿಗಳಿಂದ ಯತೀಂದ್ರ ಮಾಹಿತಿ ಪಡೆದರು. ಹಕ್ಕುಪತ್ರ ಹೊಂದಿರುವ ವ್ಯಕ್ತಿಗೆ ಬದಲಿ ನಿವೇಶನ ಕೊಡಿ. ಅಕಸ್ಮಾತ್ ತಕರಾರಿದ್ದಲ್ಲಿ ಬಗೆಹರಿಸಿ ಬದಲಿ ನಿವೇಶನ ನೀಡುವಂತೆ ಪಿಡಿಓ ಗಜೇಂದ್ರಕುಮಾರ್ ಅವರಿಗೆ ಸೂಚಿಸಿದರು.

ಗ್ರಾಮದ ಮುಖ್ಯರಸ್ತೆ ಒತ್ತುವರಿ ಮಾಡಲಾಗಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ನಕ್ಷೆಯಲ್ಲಿ ಒತ್ತುವರಿ ಮಾಡಿರುವ ಜಾಗದಲ್ಲಿ ನಾಲೆ ನಿರ್ಮಿಸಲಾಗಿದೆ ಎಂದಿದೆ. ಆದರೆ ಅಲ್ಲಿ ನಿರ್ಮಾಣವಾಗಿಲ್ಲ. ಹಾಗಾಗಿ ಒತ್ತುವರಿ ತೆರವು ಮಾಡಿದರೆ ರಸ್ತೆ ಅಗಲೀಕರಣ ಮಾಡಲು ಸಾಧ್ಯವಾಗಲಿದೆ ಎಂದರು.

5.50 ಕೋಟಿ ರೂ. ವೆಚ್ಚದಲ್ಲಿ ಹಲವು ಗ್ರಾಮಗಳನ್ನು ಮಾದರಿ ಗ್ರಾಮಕ್ಕೆ ಸೇರ್ಪಡೆ ಮಾಡಲಾಗಿದೆ. ಹೊಸ ಮತ್ತು ಹಳೇ ಬಡಾವಣೆಗಳಲ್ಲಿ ವಿದ್ಯುತ್ ಕಂಬ ಅಳವಡಿಸುವ ಕೆಲಸ ನಡೆಯಬೇಕಿದೆ. ಕುಪ್ಯ ಗ್ರಾಮ ಮಾದರಿ ಗ್ರಾಮಕ್ಕೆ ಸೇರ್ಪಡೆಯಾಗಿಲ್ಲ. ಹಾಗಾಗಿ ಸೇರ್ಪಡೆ ಮಾಡಿ ವಿದ್ಯುತ್ ಕಂಬ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಭೂಮಿ ಪೂಜೆ: ಇದೇ ವೇಳೆ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದ ಡೈರಿ ಕಟ್ಟಡ ಸಭಾಂಗಣಕ್ಕೆ ಡಾ.ಯತೀಂದ್ರ ಭೂಮಿಪೂಜೆ ನೆರವೇರಿಸಿದರು. ಹಿಟ್ಟುವಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಸಮಸ್ಯೆ ಕುರಿತಂತೆ ಅರ್ಜಿ ಸಲ್ಲಿಸಿದರು. ಕೆಎಸ್‌ಆರ್‌ಸಿ ಬಸ್ ಭಾನುವಾರ ಗ್ರಾಮಕ್ಕೆ ಬರುತ್ತಿಲ್ಲ ಎಂದು ಗ್ರಾಮಸ್ಥರು ದೂರಿದ ಹಿನ್ನೆಲೆಯಲ್ಲಿ ಬಸ್ ಓಡಾಟಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಸಾರಿಗೆ ಅಧಿಕಾರಿಗೆ ಯತೀಂದ್ರ ಸೂಚನೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ನಾಲ್ವರು ವಿದ್ಯಾರ್ಥಿನಿಯರಿಗೆ ತಲಾ 10 ಸಾವಿರ ರೂ. ಪ್ರೋತ್ಸಾಹ ಧನವನ್ನು ಡಾ.ಯತೀಂದ್ರ ವಿತರಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ರಘು ಮಾತನಾಡಿದರು. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ, ಕುಪ್ಯ ಗ್ರಾಪಂ ಅಧ್ಯಕ್ಷ ಗವಿಸಿದ್ದಯ್ಯ, ಮಾಜಿ ಅಧ್ಯಕ್ಷ ರಘುಶಿವರಾಂ, ಡೇರಿ ಅಧ್ಯಕ್ಷ ಪ್ರಭಾಕರ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ, ಎಪಿಎಂಸಿ ಮಾಜಿ ನಿರ್ದೇಶಕ ಎನ್.ಅನಿಲ್‌ಕುಮಾರ್, ಶ್ರೀಮಲೆ ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರ ನಿರ್ದೇಶಕಿ ಭಾಗ್ಯಮ್ಮ, ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ಮಾಜಿ ಉಪಾಧ್ಯಕ್ಷ ಚಂದ್ರಶೇಖರ್, ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಕುರುಬರ ಸಂಘದ ಅಧ್ಯಕ್ಷ, ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್‌ಬಾಬು, ಸಿದ್ದರಾಮಯ್ಯ ಅಭಿಮಾನಿ ಬಳಗ ರಾಜ್ಯಾಧ್ಯಕ್ಷ ಉದಯ್, ವಕೀಲ ಎಂ.ಶಿವಪ್ರಸಾದ್, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ್, ತಾಪಂ ಅಧ್ಯಕ್ಷ ಅಂದಾನಿ, ಕಾಂಗ್ರೆಸ್ ಅಲ್ಪಸಂಖ್ಯಾತರ ಜಿಲ್ಲಾಧ್ಯಕ್ಷ ಮೋಸಿನ್ ಖಾನ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಸದಸ್ಯರಾದ ಗುರುಸ್ವಾಮಿ, ಆರ್.ಚೇತನ್, ಕೆ.ಗಣೇಶ್, ಮಾಜಿ ಕೆಡಿಪಿ ಸದಸ್ಯ ಎಂ.ಮಿಥುನ್, ಪಿಡಿಓ ಗಜೇಂದ್ರ ಕುಮಾರ್, ಕಾರ್ಯದರ್ಶಿ ನಾಗೇಂದ್ರ, ಜಯರಾಮ್ ಇತರರಿದ್ದರು.

ಪ್ರತಾಪ್ ಸಿಂಹ ಯಾರು?

ತಿ.ನರಸೀಪುರ: ಯತೀಂದ್ರ ಯಾರು ಎಂದಿದ್ದ ಮಾಜಿ ಸಂಸದ ಪ್ರತಾಪ್ ಸಿಂಹಗೆ ತಿರುಗೇಟು ನೀಡಿದ ಡಾ.ಯತೀಂದ್ರ ಪ್ರತಾಪ್ ಸಿಂಹ ಯಾರು? ಪ್ರತಾಪ್ ಸಿಂಹ ಯಾವ ಪಕ್ಷದಲ್ಲಿದ್ದಾರೆ? ಪ್ರತಾಪ್ ಸಿಂಹ ಯಾವ ಹುದ್ದೆಯಲ್ಲಿದ್ದಾರೆ? ಅವರಿಗೆ ನಾನು ಯಾರು ಅಂತ ಹೇಳಿ ಉತ್ತರ ಕೊಡಲಿ. ಯಾವ ಹುದ್ದೆಯಲ್ಲಿದ್ದಾರೆ ಅಂತ ನಾನು ಅವರ ಹೇಳಿಕೆಗೆ ರಿಪ್ಲೇ ಮಾಡಲಿ. ಅಂತಹವರಿಗೆಲ್ಲ ನಾನು ಪ್ರತಿಕ್ರಿಯೆ ಕೊಡಲ್ಲ ಎಂದರು.

ಕುಪ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತೀಂದ್ರ ಯಾರು ಎಂದಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ನಾನು ಉತ್ತರ ಕೊಡುವ ಅಗತ್ಯವಿಲ್ಲ ಎಂದರು.

ಮೊದಲಿನಿಂದಲೂ ನಮ್ಮ ತಂದೆಯವರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಮುಡಾ, ವಾಲ್ಮೀಕಿ ಹಗರಣದಲ್ಲಿ ಸಿಲುಕಿಸುವ ಯತ್ನ ನಡೆಯಿತು. ನನ್ನನ್ನು ಕೂಡ ಹಲವು ಬಾರಿ ಟಾರ್ಗೆಟ್ ಮಾಡಿದ್ದಾರೆ. ನಾನು ಯಾವುದೇ ಕಾರಣಕ್ಕೂ ಇಂತಹವುದಕ್ಕೆಲ್ಲಾ ಹೆದರಲ್ಲ. 5 ವರ್ಷ ತಂದೆಯವರೇ ಸಿಎಂ ಆಗಿರುತ್ತಾರೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ತಂದೆಯವರು ಇರುವ ತನಕ ನಾನು ಯಾವುದೇ ಹುದ್ದೆ ಅಲಂಕರಿಸಲ್ಲ. ತಂದೆಯವರು ತಿಳಿಸುವ ತನಕ ನಾನು ಯಾವುದೇ ಸಚಿವ ಸ್ಥಾನದ ಆಕಾಂಕ್ಷಿಯೂ ಅಲ್ಲ ಎಂದರು.

ಕಡೇಮನುಗನಹಳ್ಳಿ ಗ್ರಾಪಂಗೆ ಚಂದ್ರೇಗೌಡ ಅಧ್ಯಕ್ಷ

ಹನಗೋಡು, ಜೂ.19– ಇಲ್ಲಿಗೆ ಸಮೀಪದ ಕಡೇಮನುಗನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಚಂದ್ರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಟಿ.ಗೌರಮ್ಮ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ (ಸಾಮಾನ್ಯ) ಸ್ಥಾನಕ್ಕೆ ಚಂದ್ರೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಬಿಇಓ ಮಹದೇವ್ ಘೋಷಿಸಿದರು. ಪಿಡಿಓ ಷಡಕ್ಷರ ಸ್ವಾಮಿ, ಕಾರ್ಯದರ್ಶಿ ಸಂತೋಷ್ ಕುಮಾರ್ ಇದ್ದರು.



ಕಡೇಮನುಗನಹಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರೇಗೌಡರನ್ನು ಸದಸ್ಯರು ಅಭಿನಂದಿಸಿದರು.

ಗ್ರಾಪಂನ ಒಟ್ಟು 13 ಸದಸ್ಯರ ಪೈಕಿ ಅಧ್ಯಕ್ಷ ಚಂದ್ರೇಗೌಡ, ಉಪಾಧ್ಯಕ್ಷೆ ಆರ್.ಗೀತಾ, ಟಿ.ಗೌರಮ್ಮ, ಕಾಳೇಗೌಡ, ವೆಂಕಟೇಶ್, ಅರಸಯ್ಯ, ಪಿ.ರಾಧ, ಸುನಂದ, ಪಾರ್ವತಿ, ನಾಗರಾಜ್ ಸೇರಿದಂತೆ 10 ಮಂದಿ ಹಾಜರಾಗಿದ್ದರೆ, ಲಲಿತ, ಸುಬ್ರಹ್ಮಣ್ಯ, ಮಂಜುಳ ಗೈರಾಗಿದ್ದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಅಭಿಮಾನಿಗಳು ಗ್ರಾಪಂ ಆವರಣದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಫಸಲು ನಾಶ: ಪರಿಹಾರಕ್ಕೆ ರೈತ ಸಂಘ ಒತ್ತಾಯ

ನಂಜನಗೂಡು, ಜೂ.19– ಕಬಿನಿ ಜಲಾಶಯದಿಂದ 22 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಿದ್ದರಿಂದ ತಾಲೂಕಿನ ರಾಂಪುರ, ಹುಲ್ಲಹಳ್ಳಿ ನಾಲೆ ಬಯಲಿನಲ್ಲಿ ರೈತರು ಬೆಳೆದ ಫಸಲು ಜಲಾವೃತಗೊಂಡು ಹಾಳಾಗಿದ್ದು, ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಆಗ್ರಹಿಸಿದರು.

ನಗರದ ತಹಸೀಲ್ದಾರ್ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು ಪರಿಹಾರ ನೀಡಬೇಕೆಂದು ತಹಸೀಲ್ದಾರರಿಗೆ ಹಕ್ಕೊತ್ತಾಯ ಸಲ್ಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ತಾಲೂಕಿನಲ್ಲಿ ಕಳೆದ 20 ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ರಾಂಪುರ, ಹುಲ್ಲಹಳ್ಳಿ ನಾಲಾ ಅಚ್ಚುಕಟ್ಟು ವ್ಯಾಪ್ತಿಯ ರೈತರ 15 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದ ಭತ್ತದ ಫಸಲು ಕಟಾವು ಮಾಡಲಾಗದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎಕರೆಗೆ 25 ಸಾವಿರ ಖರ್ಚು ಮಾಡಿ ಬೆಳೆದಿದ್ದ ಭತ್ತದ ಫಸಲು ರೈತರ ಕೈ ಸೇರದೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರ ಅತಿವೃಷ್ಟಿ, ಅನಾವೃಷ್ಟಿಗಳಿಂದ ಆದ ಬೆಳೆ ನಷ್ಟ ಮತ್ತು ಪ್ರಾಣಿಗಳ ದಾಳಿಯಿಂದ ಉಂಟಾಗುವ ಪ್ರಾಣಹಾನಿಗೆ 10 ಸಾವಿರ ಕೋಟಿ ಪರಿಹಾರ ನಿಧಿ ಕಾಯ್ದಿರಿಸಬೇಕು. ಹುಲ್ಲಹಳ್ಳಿ, ರಾಂಪುರ ಅಚ್ಚುಕಟ್ಟು ಪ್ರದೇಶದಲ್ಲಿ ಆದ ಬೆಳೆ ನಷ್ಟಕ್ಕೆ ಕನಿಷ್ಠ 50 ಸಾವಿರ ಪರಿಹಾರ ಧನ ಘೋಷಿಸಬೇಕು. ಪ್ರತಿ ಬಾರಿ ಕಪಿಲಾ ನದಿ ಪ್ರವಾಹಕ್ಕೆ ಸಿಲುಕಿ ಫಸಲು ನಾಶಕ್ಕೆ ಒಳಗಾಗುತ್ತಿರುವ ರೈತರ ಕುಟುಂಬಗಳ ರಕ್ಷಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಆಗ್ರಹಿಸಿದರು.



ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್ ರಾವ್, ಇಮ್ಮಾವು ರಘು, ಶ್ವೇತ, ಮಹ ದೇವನಾಯಕ, ನಂಜುಂಡ, ಯೋಗಿ, ಶಿವಣ್ಣ, ಶಂಕರ್ ನಾಯ್ಕ, ರಂಗಸ್ವಾಮಿ ನಾಯ್ಕ, ಸಣ್ಣಶೆಟ್ಟಿ, ಗೋವಿಂದ ನಾಯ್ಕ, ಪೈಲ್ವಾನ್ ಮಹದೇವ ನಾಯ್ಕ, ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ಕಾರ್ಯ ವೈಖರಿ ದೇಶಕ್ಕೆ ಮಾದರಿ

ಕೆ.ಆರ್.ನಗರ, ಜೂ.19– ನುಡಿದಂತೆ ನಡೆಯುತ್ತಿರುವ ರಾಜ್ಯ ಸರ್ಕಾರದ ಕಾರ್ಯ ವೈಖರಿ ದೇಶಕ್ಕೆ ಮಾದರಿ ಎಂದು ತಾಲೂಕು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್ ತಿಳಿಸಿದರು.

ತಾಲೂಕಿನ ಬ್ಯಾಡರಹಳ್ಳಿಯಲ್ಲಿ ನಡೆದ ಪಂಚ ಗ್ಯಾರಂಟಿ ಅರಿವು ಶಿಬಿರದಲ್ಲಿ ಮಾತನಾಡಿದ ಅವರು, ಜನರ ಬಯಕೆಯಂತೆ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಜನಪರ ಆಡಳಿತ ನಡೆಸುತ್ತಿದೆ ಎಂದರು.

ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದ ನಂತರ ಅವುಗಳ ಪರಿಣಾಮಕಾರಿ ಜಾರಿಗೆ ಪ್ರಾಧಿಕಾರ ರಚನೆ ಮಾಡಿ ಅರ್ಹರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಿದ್ದು, ನಮ್ಮ ಸರ್ಕಾರದ ಇಂತಹ ಕೆಲಸಗಳಿಂದ ಜನತೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ ಎಂದರು.



ಶಿಬಿರದಲ್ಲಿ ಅಧ್ಯಕ್ಷ ಎಂ.ಎಸ್.ಮಹದೇವ್ ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ತಲುಪದಿದ್ದವರು ಸ್ಥಳೀಯ ಗ್ರಾಪಂ ಅಧಿಕಾರಿಗಳಿಗೆ ದೂರು ನೀಡಿ ಅವರಿಂದ ಪರಿಹಾರ ದೊರೆಯದಿದ್ದಲ್ಲಿ ಅನುಷ್ಠಾನ ಪ್ರಾಧಿಕಾರ ಮತ್ತು ತಾಲೂಕು ಆಡಳಿತದ ಗಮನಕ್ಕೆ ತರಬೇಕೆಂದು ಸಲಹೆ ನೀಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಹೊಣೆ ಹೊತ್ತಿರುವ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಣೆ ಮಾಡಿ. ಈ ಸಂಬಂಧ ಯಾವುದೇ ಸಮಸ್ಯೆಗಳಿದ್ದರೂ ನಮ್ಮ ಗಮನಕ್ಕೆ ತರಬೇಕೆಂದು ಸೂಚಿಸಿದ ಅಧ್ಯಕ್ಷರು ನಿಮಗೆ ಸಹಕಾರ ನೀಡಲು ನಾವು ಸದಾ ಸಿದ್ಧವೆಂದು ಪ್ರಕಟಿಸಿದರು.

ಸಾಲಿಗ್ರಾಮ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್ ಮಾತನಾಡಿ, ಕಳೆದ 2 ವರ್ಷಗಳಿಂದ ಪಂಚ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗಿದ್ದು, ಈ ಬಗ್ಗೆ ಜನರು ಸಂತೃಪ್ತ ಭಾವನೆ ಹೊಂದಿದ್ದು ಸರ್ಕಾರದ ಈ ಜನಪರವಾದ ಕಾರ್ಯಕ್ರಮಕ್ಕೆ ವ್ಯಾಪಕ ಬೆಂಬಲ ಸೂಚಿಸಿದ್ದಾರೆಂದು ಮಾಹಿತಿ ನೀಡಿದರು.

ಬ್ಯಾಡರಹಳ್ಳಿ ಗ್ರಾಪಂ ಅಧ್ಯಕ್ಷೆ ಈರಮ್ಮ, ಸದಸ್ಯ ಬಿ.ಎಲ್‌ಪ್ರಾಣೇಶ್, ಚಂದ್ರೇಗೌಡ, ಪ್ರಾಧಿಕಾರದ ಸೈಯದ್ ಜಾಬೀರ್, ಲತಾ, ಡಿ.ಎಸ್.ಕುಮಾರ್, ಜಯಮ್ಮ, ಯತಿರಾಜು, ಮೋಹನ್, ತಾಪಂ ಇಓ ವಿ.ಪಿ.ಕುಲದೀಪ್, ಸೆಸ್ಕಾಂ ಎಇಇ ಅರ್ಕೇಶ್ ಮೂರ್ತಿ, ಪಿಡಿಓ ಮಹೇಶ್, ಆಹಾರ ಶಿರಸ್ತೇದಾರ್ ಮಂಜುನಾಥ್, ನಿರೀಕ್ಷಕರಾದ ಡಿ.ಆರ್.ಕುಮಾರ್, ಕೆ.ಪಿ.ಸುರೇಶ್, ಗಾಯತ್ರಿ, ಗುರುಲಿಂಗಯ್ಯ, ತಾಪಂ ವ್ಯವಸ್ಥಾಪಕ ಕುಳೀಗೌಡ, ಮುಖಂಡ ರಾಮಚಾರಿ ಇದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಭತ್ತ ನಾಟಿ ಮಾಡಿ ಪ್ರತಿಭಟನೆ

ಹುಣಸೂರು, ಜೂ.19– ತಾಲೂಕಿನ ಚಿಲ್ಕುಂದ–ಮುತ್ತುರಾಯನ ಹೊಸಹಳ್ಳಿ ಮುಖ್ಯರಸ್ತೆ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿ ಚಿಲ್ಕುಂದ ಗ್ರಾಮಸ್ಥರು ರಸ್ತೆಯಲ್ಲೇ ಭತ್ತದ ಪೈರು ನಾಟಿ ಮಾಡಿ ಪ್ರತಿಭಟನೆ ನಡೆಸಿದರು.

ಶಾಲೆಗೆ ತೆರಳುತ್ತಿದ್ದ ಮಗು ರಸ್ತೆಯ ಗುಂಡಿಗೆ ಆಯತಪ್ಪಿ ಬಿದ್ದಿದ್ದರಿಂದ ಆಕ್ರೋಶಗೊಂಡ ಗ್ರಾಮದ ಯುವಕರು, ಮಹಿಳೆಯರು ನೀರು ನಿಂತ ಗುಂಡಿಗಳಲ್ಲಿ ಭತ್ತ ಪೈರು ನಾಟಿ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಚಿಲ್ಕುಂದ–ಮುತ್ತುರಾಯನ ಹೊಸಹಳ್ಳಿಗೆ ತೆರಳುವ ಮುಖ್ಯ ರಸ್ತೆ ಇದಾಗಿದ್ದು, ಮಡಿಕೇರಿ ಹೆದ್ದಾರಿಯಿಂದ ಗ್ರಾಮದೊಳಗಿಂದ ಹೋಗುವ 500 ಮೀಟರ್ ರಸ್ತೆಯು ಅಲ್ಲಲ್ಲಿ ಗುಂಡಿ ಬಿದ್ದಿದೆ. ಇದೀಗ ಜಡಿಮಳೆ ಬೀಳುತ್ತಿದ್ದು, ಹೊಂಡಗಳಲ್ಲಿ ನೀರು ನಿಂತು ಪುಟ್ಟ ಕೆರೆಯಂತಾಗಿದೆ. ಜನರು, ಶಾಲಾ ವಿದ್ಯಾರ್ಥಿಗಳು, ವಾಹನ ಸವಾರರು, ಕೆಲಸಕ್ಕೆ ತೆರಳುವ ಕೂಲಿ ಕಾರ್ಮಿಕರು ಈ ರಸ್ತೆಯನ್ನೇ ಅವಲಂಬಿಸಿದ್ದು, ಓಡಾಡಲು ಆಗದ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.



ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗುಂಡಿ ಮುಚ್ಚಬೇಕು. ರಸ್ತೆಯಲ್ಲಿ ನೀರು ನಿಲ್ಲದಂತೆ ಕ್ರಮವಹಿಸಬೇಕು. ಅಲ್ಲದೇ ರಸ್ತೆ ಅಭಿವೃದ್ಧಿಪಡಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಇಳಯರಾಜ, ಮಲ್ಲೇಶ್, ರಾಹುಲ್, ನಿವಾಸಿಗಳಾದ ಭಾಗ್ಯಮ್ಮ, ವಿಕಾಸ್, ಸಾಗರ್, ಶ್ರೀನಿವಾಸ್, ರಾಮು, ದೇವಯ್ಯ, ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೆ.ಆರ್.ನಗರದಲ್ಲಿ ರಾಹುಲ್ ಗಾಂಧಿ ಹುಟ್ಟುಹಬ್ಬ ಆಚರಣೆ



ಕೆ.ಆರ್.ನಗರದ ಬಸವೇಶ್ವರ ಬಡಾವಣೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ರಾಹುಲ್ ಗಾಂಧಿ ಅವರ 55ನೇ ಹುಟ್ಟುಹಬ್ಬದ ಅಂಗವಾಗಿ ಯುವ ಕಾಂಗ್ರೆಸ್ ವತಿಯಿಂದ ಲೇಖನ ಸಾಮಾಗ್ರಿಗಳನ್ನು ವಿತರಿಸಲಾಯಿತು. ಯುವ ಕಾಂಗ್ರೆಸ್ ಅಧ್ಯಕ್ಷ ಕೆಂಚಿ ಮಂಜು, ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯದರ್ಶಿ ಮೋಹನ್, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಹೇಮಂತ್, ಯುವ ಕಾಂಗ್ರೆಸ್ ಮುಖಂಡರಾದ ಮೋಹನ್, ವೇಣುಗೋಪಾಲ್, ಮುತ್ತುರಾಜ್, ಗೌತಮ್ ಜಾಧವ್, ದರ್ಶನ್, ಪಾಲಾಕ್ಷ, ಶಾಲೆಯ ಮುಖ್ಯ ಶಿಕ್ಷಕಿ ರಮಾಮಣಿ, ಶಿಕ್ಷಕರಾದ ಡಿ.ಟಿ.ಕುಮಾರ್ ಇತರರಿದ್ದರು.

ಮುಸುಕಿನ ಜೋಳಕ್ಕೆ ಕೇದಿಗೆ ರೋಗ: ನಿಯಂತ್ರಣಕ್ಕೆ ಸಲಹೆ

ಹೆಚ್.ಡಿ.ಕೋಟೆ, ಜೂ.19– ಮುಸುಕಿನ ಜೋಳ ಬೆಳೆಗೆ ಕೇದಿಗೆ (ಬೂಜು) ರೋಗ ಬಾಧೆ ಹೆಚ್ಚುತ್ತಿದ್ದು, ನಿಯಂತ್ರಣಕ್ಕೆ ರೈತರು ಮುಂದಾಗಬೇಕು ಎಂದು ಸಸ್ಯರೋಗ ಶಾಸ್ತ್ರಜ್ಞರಾದ ಡಾ.ಆರ್.ಎನ್.ಪುಷ್ಪಾ ತಿಳಿಸಿದ್ದಾರೆ.



ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಕೃಷಿ ಚಟುವಟಿಕೆಗಳು ಆರಂಭವಾಗಿದ್ದು, ಜಿಲ್ಲೆಯ ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು ತಾಲೂಕುಗಳಲ್ಲಿ ಮುಸುಕಿನ ಜೋಳ ಬೆಳೆ ಬಿತ್ತನೆಯಾಗಿ, ಬೆಳವಣಿಗೆ ಹಂತದಲ್ಲಿರುತ್ತದೆ. ಇತ್ತೀಚಿನ ಹವಾಮಾನ ವೈಪರೀತ್ಯ ಹಾಗೂ ಚಂಡಮಾರುತದ ಪರಿಣಾಮ ಮುಸುಕಿನ ಜೋಳದಲ್ಲಿ ಕೇದಿಗೆ ರೋಗ ಉಲ್ಬಣಗೊಳ್ಳುತ್ತಿದ್ದು, ಇದರಿಂದ ಇಳುವರಿ ನಷ್ಟವಾಗಬಹುದು. ಆದ್ದರಿಂದ ರೈತರು ತ್ವರಿತವಾಗಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

ರೋಗ ಲಕ್ಷಣಗಳು: ಎಲೆಗಳ ತಳಭಾಗದಲ್ಲಿ ಬಿಳಿ ಶಿಲೀಂಧ್ರದ ಬೆಳವಣಿಗೆ ಕಂಡುಬರುತ್ತದೆ. ಶಿಲೀಂಧ್ರ ಬೆಳೆದ ಭಾಗದ ಮೇಲ್ಭಾಗದಲ್ಲಿ ಗರಿ ಹಳದಿ ಬಣ್ಣಕ್ಕೆ ತಿರುಗಿ, ರೋಗ ಎಲ್ಲಾ ಗರಿಗಳಿಗೂ ಹರಡುತ್ತದೆ. ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ. ರೋಗ ಉಲ್ಬಣಗೊಂಡರೆ ತೆನೆ ವಿಕಾರ ವಾಗಿ ಪರಾಗ ಉತ್ಪತ್ತಿಯಾಗದೆ ತೆನೆಯಲ್ಲಿ ಚಿಕ್ಕ ಚಿಕ್ಕ ಎಲೆಯ ಆಕಾರದ ಬೆಳವಣಿಗೆ ಕಂಡುಬರುತ್ತದೆ. (ಇದನ್ನು ಹುಚ್ಚು ತೆನೆ ಎಂದೂ ಕರೆಯಲಾಗುತ್ತದೆ). ಇದರಿಂದ ಕಾಳು ಕಟ್ಟದೆ ಇಳುವರಿ ನಷ್ಟವಾಗುತ್ತದೆ. ಆದ್ದರಿಂದ ರೈತರು ರೋಗ ಲಕ್ಷಣ ಕಂಡ ಕೂಡಲೇ ಅಜಾಕ್ಸಿಸ್ಟ್ರೋಬಿನ್+ಡೈಫೆನ್ ಕೊನಜೋಲ್ ಸಂಯುಕ್ತ ಶಿಲೀಂಧ್ರ ನಾಶಕವನ್ನು ಪ್ರತಿ 1 ಲೀಟರ್ ನೀರಿಗೆ 1.5 ಮಿ.ಲೀ. ನಂತೆ (ಎಕರೆಗೆ 200ಮಿ.ಲೀ.) ಹಾಗೂ15 ದಿನಗಳ ನಂತರ ಮೆಟಲಾಕ್ಸಿಲ್ 8+ ಮ್ಯಾಕೋಜೆಬ್ 64 ಸಂಯುಕ್ತ ಶಿಲೀಂಧ್ರ ನಾಶಕವನ್ನು ಪ್ರತಿ 1 ಲೀಟರ್ ನೀರಿಗೆ 2 ಗ್ರಾಂ. ನಂತೆ (ಎಕರೆಗೆ 600 ಗ್ರಾಂ.) ಮಿಶ್ರಣ ಮಾಡಿ ಗರಿಗಳ ತಳಭಾಗ ಹಾಗೂ ಮೇಲ್ಭಾಗಕ್ಕೂ ಸಿಂಪಡಿಸಬೇಕು. ಜೊತೆಗೆ ಪ್ರತಿ ಎಕರೆಗೆ 100 ಕಿ.ಗ್ರಾಂ. 10:26:26 ರಸಗೊಬ್ಬರವನ್ನು ಹಾಕುವುದರಿಂದ ಇಳುವರಿ ನಷ್ಟ ತಪ್ಪಿಸಬಹುದು ಎಂದು ತಿಳಿಸಿದ್ದಾರೆ.

ಬಿತ್ತನೆಗೆ ಮೊದಲು ಪ್ರತಿ 1 ಕಿಗ್ರಾಂ ಬಿತ್ತನೆ ಬೀಜಕ್ಕೆ 3 ಗ್ರಾಂ 8 ಡಬ್ಲ್ಯು ಪಿ+ ಮ್ಯಾಕೋಜೆಬ್ 64 ಸಂಯುಕ್ತ ಶಿಲೀಂಧ್ರ ನಾಶಕದಿಂದ ಬೀಜೋಪಚಾರ ಮಾಡಿ ಬಿತ್ತುವುದರಿಂದ ಶೇ.30–40ರಷ್ಟು ರೋಗ ನಿರ್ವಹಣೆಯಾಗುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿರುವ ಕೇದಿಗೆ ರೋಗ ನಿರೋಧಕತೆ ಶಕ್ತಿ ಹೊಂದಿರುವ ಎಂ.ಎ.ಹೆಚ್. 14–5, 20.2.5.–1137, 20.2.5.–2049, 20.2.5 14–138. 20.2.15–84 ಬೆಳೆಯುವುದು ಸೂಕ್ತ. ಹೆಚ್ಚಿನ ಮಾಹಿತಿಗೆ ಮೊ. 9980366789 ಸಂಪರ್ಕಿಸಬಹುದು.

ಕೋಟ್ಯಾಂತರ ರೂ. ಬಾಕಿ ಕಂದಾಯ ವಸೂಲಿ ಮಾಡಿ

ಪುರಸಭಾ ಸ್ಥಾಯಿ ಸಮಿತಿ ಸಭೆಯಲ್ಲಿ ಅಧ್ಯಕ್ಷ ಪ್ರಕಾಶ್ ಸೂಚನೆ

ತಿ.ನರಸೀಪುರ, ಜೂ.19– ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಕೋಟ್ಯಾಂತರ ರೂ. ಕಂದಾಯ ಬಾಕಿ ಇದ್ದು, ಕೂಡಲೇ ವಸೂಲಿ ಮಾಡಬೇಕು ಎಂದು ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಸೂಚಿಸಿದರು.

ಗುರುವಾರ ನಡೆದ ಪ್ರಥಮ ಸ್ಥಾಯಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಟ್ಟಣದಲ್ಲಿರುವ ಪೆಟ್ರೋಲ್ ಬಂಕ್, ಅಕ್ಕಿ ಗಿರಣಿ, ಕಲ್ಯಾಣ ಮಂಟಪ ಸೇರಿದಂತೆ ವಾಣಿಜ್ಯ ಕೇಂದ್ರಗಳು ಕೋಟ್ಯಾಂತರ ರೂ. ಕಂದಾಯ ಬಾಕಿ ಉಳಿಸಿಕೊಂಡಿದ್ದು, ಅಧಿಕಾರಿಗಳು ತಕ್ಷಣ ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.

ಪುರಸಭೆಯಿಂದ ಈ ವಾಣಿಜ್ಯ ಕೇಂದ್ರಗಳಿಗೆ ನೀರು, ಚರಂಡಿ, ವಿದ್ಯುತ್ ಸೇರಿದಂತೆ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಿ ಕೊಡುತ್ತಿದ್ದರೂ ಕಂದಾಯ ಏಕೆ ಕಟ್ಟುತ್ತಿಲ್ಲ. ಅಧಿಕಾರಿಗಳು ಏಕೆ ಕಂದಾಯ ವಸೂಲಿ ಮಾಡಲು ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿ ತರಾಟೆ ತೆಗೆದುಕೊಂಡರು.



ತಿ.ನರಸೀಪುರದಲ್ಲಿ ಪ್ರಥಮ ಸ್ಥಾಯಿ ಸಭೆ ನಡೆಯಿತು.

ಈ ಹಿಂದೆ ಟೌನ್ ಪಂಚಾಯತ್ ವ್ಯವಸ್ಥೆ ಇತ್ತು. ಇದೀಗ ಆಲಗೂಡು ಮತ್ತು ಭೈರಾಪುರ ಸೇರಿಸಿ ಪುರಸಭೆಯನ್ನಾಗಿ ಪರಿವರ್ತಿಸಲಾಗಿದೆ. ಪುರಸಭಾ ವ್ಯಾಪ್ತಿಯಲ್ಲಿ ಪುರಸಭೆಗೆ ಸೇರಿದ ನಿವೇಶನಗಳು, ಸಿಎ ನಿವೇಶನಗಳು ಎಷ್ಟಿವೆ, ಎಲ್ಲೆಲ್ಲಿ ಇವೆ ಎಂಬುದರ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ 15 ದಿನದಲ್ಲಿ ಅವುಗಳ ಸಂಪೂರ್ಣ ಮಾಹಿತಿ ಸಿದ್ಧಪಡಿಸಿ ಸ್ಥಾಯಿ ಸಮಿತಿಗೆ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೊತೆಗೆ ಪಟ್ಟಣದಲ್ಲಿ ಸಾರ್ವಜನಿಕರ ಬಳಕೆಗೆ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಅವುಗಳು ಎಲ್ಲೆಲ್ಲಿ ಇವೆ. ಅವುಗಳಲ್ಲಿ ಎಷ್ಟು ಚಾಲನೆಯಲ್ಲಿವೆ. ಎಷ್ಟು ಸ್ಥಗಿತಗೊಂಡಿವೆ. ಅವುಗಳ ಸ್ಥಿತಿಗತಿ ಏನು ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಎಲ್ಲಾ ಶೌಚಾಲಯಗಳು ಸ್ವಚ್ಛತೆಯಿಂದ ಕೂಡಿದ್ದು, ಸಮರ್ಪಕವಾಗಿ ಜನರು ಬಳಸುವಂತಿರಬೇಕು ಎಂದರು.

ಅಲ್ಲದೆ ಪಟ್ಟಣದ ಜೋಡಿ ರಸ್ತೆಯಲ್ಲಿ ನಡೆಯುತ್ತಿರುವ ಯುಜಿ ಕೇಬಲ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಾರ್ವಜನಿಕರು ಮತ್ತು ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ತಿಳಿಸಿದರು.

ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಮಾಜಿ ಅಧ್ಯಕ್ಷರಾದ ಟಿ.ಎಂ.ನಂಜುಂಡಸ್ವಾಮಿ, ಎನ್.ಸೋಮು, ಎಸ್.ಮದನ್ ರಾಜ್, ಪ್ರೇಮ ಮರಯ್ಯ, ಪಿ.ಶೋಭಾರಾಣಿ, ರೂಪ ಪರಮೇಶ್, ಇಂಜಿನಿಯರ್ ಚಂದ್ರಶೇಖರ್, ಲೆಕ್ಕಾಧಿಕಾರಿ ವಿನಯ್, ವ್ಯವಸ್ಥಾಪಕ ಮಹೇಂದ್ರ, ಜಯಲಕ್ಷ್ಮಮ್ಮ ಉಪಸ್ಥಿತರಿದ್ದರು.

> ಪಟ್ಟಣದ ಸೇಂಟ್ ಮೇರಿಸ್ ಶಾಲೆ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಶಾಲಾ ಮಕ್ಕಳು, ಪೋಷಕರು ಮತ್ತು ಶಿಕ್ಷಕರು ಶಾಲೆಗೆ ಬರಲು ಪರದಾಡುವ ಸ್ಥಿತಿ ನಿರ್ಮಾಣವಾಗಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿಲ್ಲವೇಕೆ? ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾಲೂಕಿನ ರಸ್ತೆ ದುರಸ್ತಿಗೆ ಮತ್ತು ಅಭಿವೃದ್ಧಿಗೆ 10.40 ಕೋಟಿ ರೂ. ಮಂಜೂರು ಮಾಡಿದ್ದು, ಅದರಲ್ಲಿ ಈ ರಸ್ತೆಯನ್ನು ಸಂಪೂರ್ಣ ದುರಸ್ತಿಗೊಳಿಸಿ ಅಭಿವೃದ್ಧಿಪಡಿಸಿ.
> – ಸಿ.ಪ್ರಕಾಶ್, ಅಧ್ಯಕ್ಷ, ಪುರಸಭಾ ಸ್ಥಾಯಿ ಸಮಿತಿ

ನಾಳೆ ಅದ್ಧೂರಿ ಹನುಮ ಜಯಂತಿ ಶೋಭಾಯಾತ್ರೆ



ಸುದ್ದಿಗೋಷ್ಠಿಯಲ್ಲಿ ಕೃಷ್ಣ ಜೋಯಿಸ್ ಮಾತನಾಡಿದರು.

ನಂಜನಗೂಡು, ಜೂ.19– ಶ್ರೀವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ನಗರದಲ್ಲಿ ಜೂ.21ರಂದು ಹನುಮ ಜಯಂತಿ ಪ್ರಯುಕ್ತ ವಿವಿಧ ಜನಪದ ಕಲಾ ತಂಡಗಳೊಡನೆ ಅದ್ಧೂರಿಯಾಗಿ ಹನುಮ ಜಯಂತಿ ಶೋಭಾ ಯಾತ್ರೆ ನಡೆಸಲಾಗುವುದು ಎಂದು ಬಳಗದ ಮುಖಂಡ ಕೃಷ್ಣ ಜೋಯಿಸ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12 ಗಂಟೆಗೆ ನಗರದ ಶ್ರೀಕಂಠೇಶ್ವರ ದೇವಾಲಯದ ಮುಂಭಾಗ ಶಾಸಕ ದರ್ಶನ್, ಚೆನ್ನಬಸವ ಸ್ವಾಮೀಜಿ, ಹೈಕೋರ್ಟ್ ವಕೀಲ ಅರುಣ್ ಶ್ಯಾಮ್ ಜೀ ಹಾಗೂ ಮಾಜಿ ಶಾಸಕ ಬಿ.ಹರ್ಷವರ್ಧನ್ ಹನುಮಾನ ಬೃಹತ್ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಲಿದ್ದಾರೆ. ನಗರದ ಪ್ರಮುಖ ಬೀದಿಗಳಲ್ಲಿ ಸಾಗುವ ಮೆರವಣಿಗೆಯಲ್ಲಿ ಕೇರಳದ ಚಂಡೆ, ವೀರಗಾಸೆ, ಕಂಸಾಳೆ, ನಂದಿ ಕಂಬ, ಡೋಲು ಕುಣಿತ ಮುಂತಾದ ಜಾನಪದ ಕಲಾ ತಂಡಗಳು, ಹನುಮನ ಟ್ಯಾಬ್ಲೊ, ಮೂವಿಂಗ್ ರಾಮ ಚಂದ್ರನ ಮೂರ್ತಿಗಳು ಪಾಲ್ಗೊಳ್ಳಲಿವೆ ಎಂದರು.

ಗೋಷ್ಠಿಯಲ್ಲಿ ಬಳಗದ ಸುನೀಲ್ ಕುಮಾರ್, ನಿತಿನ್, ಶ್ರೀಕಾಂತ್ ಜೋಯಿಷ್, ಅರ್ಜುನ್, ಆನಂದ್ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರಿ ಸಿಲ್ಕ್ ಸ್ಯಾರಿ ಮಾರಾಟ ಮಳಿಗೆಯಲ್ಲಿ 18.75 ಲಕ್ಷ ರೂ. ಅವ್ಯವಹಾರ

ಕಾಳಿದಾಸ ರಸ್ತೆ ಮಾರಾಟ ಮಳಿಗೆಯ ಆರು ಸಿಬ್ಬಂದಿ, ನಿವೃತ್ತ ಅಧಿಕಾರಿ ವಿರುದ್ಧ ವಂಚನೆ ಆರೋಪ, ಜಯಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಜೂ.19(ಆರ್‌ಕೆ)– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ (ಕೆಎಸ್‌ಐಸಿ) ಮಾರಾಟ ಮಳಿಗೆಯಲ್ಲಿ ಏಳು ಮಂದಿ ಸಿಬ್ಬಂದಿ 18.75 ಲಕ್ಷ ರೂ. ಅವ್ಯವಹಾರ ನಡೆಸಿರುವುದು ಬೆಳಕಿಗೆ ಬಂದಿದೆ.

ಮಾರಾಟ ಮಳಿಗೆಯಲ್ಲಿ ಉಸ್ತುವಾರಿ ಮಾರಾಟ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿ, ಈಗ ನಿವೃತ್ತರಾಗಿರುವ ಜೆ.ಯಶವಂತ ಕುಮಾರ್, ಹೊರಗುತ್ತಿಗೆಯ ನೌಕರರಾದ ಮಾರಾಟ ಸಹಾಯಕರಾದ ಎಂ.ಬಿ.ರೇವಂತ್‌ಕುಮಾರ್, ಪ್ರತಿಮಾ ಎಸ್., ಎಂ.ವಿ.ಶೋಭಾ, ಅಮ್ಜದ್ ಅಹಮದ್, ಮೊಹಮದ್ ಅಮೀರ್ ಮತ್ತು ಅನು ಗ್ರಾಹಕರು ಪಾವತಿಸಿದ ಹಣವನ್ನು ಕೆಎಸ್‌ಐಸಿ ಬ್ಯಾಂಕ್ ಖಾತೆಗೆ ಜಮಾ ಮಾಡದೇ ವಂಚಿಸಿರುವ ಆರೋಪ ಕೇಳಿಬಂದಿದೆ.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ ಉಸ್ತುವಾರಿ ಪ್ರಧಾನ ವ್ಯವಸ್ಥಾಪಕ ಎಸ್.ಜಿ.ಸಿದ್ದಲಿಂಗ ಪ್ರಸಾದ್ ಅವರು ಜೂ.14ರಂದು ನೀಡಿದ ದೂರಿನನ್ವಯ 7 ಮಂದಿ ನೌಕರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಸೆಕ್ಷನ್ 316(5), 318(3), 336(2), 336(3) ಮತ್ತು 190 ರಡಿ ಪ್ರಕರಣ ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಇನ್‌ಸ್ಪೆಕ್ಟರ್ ಕುಮಾರ್, ತನಿಖೆ ಕೈಗೊಂಡಿದ್ದಾರೆ.

2024ರ ಸೆಪ್ಟೆಂಬರ್ 2ರಿಂದ 2025ರ ಮೇ 31ರವರೆಗೆ ಜೆ.ಯಶವಂತಕುಮಾರ್, ಇತರೆ 6 ಮಂದಿ ಹೊರಗುತ್ತಿಗೆ ಮಾರಾಟ ಸಹಾಯಕರೊಂದಿಗೆ ಸೇರಿಕೊಂಡು ನಕಲಿ ರಶೀದಿಗಳನ್ನು ಸೃಷ್ಟಿಸಿಕೊಂಡು ಸರ್ಕಾರಿ ನೌಕರ ಗ್ರಾಹಕರಿಗೆ ಸಾಲದ ಕಂತುಗಳಲ್ಲಿ ಸಿಲ್ಕ್ ಸೀರೆಗಳನ್ನು ಮಾರಾಟ ಮಾಡಿ ಸದರಿ ಕಂತಿನ ಹಣವನ್ನು ಕೆಎಸ್‌ಐಸಿ ಖಾತೆಗೆ ಜಮಾ ಮಾಡದೇ ಒಟ್ಟು 18,75,000 ರೂ. ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಸಿದ್ದಲಿಂಗ ಪ್ರಸಾದ್ ದೂರಿನಲ್ಲಿ ತಿಳಿಸಿದ್ದಾರೆ.

ಕಾಳಿದಾಸ ರಸ್ತೆಯ ನಂ. 140, 2ನೇ ಮಹಡಿಯಯಲ್ಲಿ 2024ರ ಜೂನ್ 2ರಿಂದ 2025ರ ಮೇ 31ರವರೆಗೆ ಉಸ್ತುವಾರಿ ಮಾರಾಟ ಅಧಿಕಾರಿಯಾಗಿ ಕೆಲಸ ಮಾಡಿದ್ದ ಯಶವಂತಕುಮಾರ್ 2025ರ ಮೇ 31ರಂದು ಸೇವೆಯಿಂದ ನಿವೃತ್ತರಾಗಿದ್ದಾರೆ. ನಂತರ ಫಿನಿಷಡ್ ಮೆಟೀರಿಯಲ್ಸ್ ಉಸ್ತುವಾರಿ ಉಗ್ರಾಣಾಧಿಕಾರಿಯಾದ ವೆಂಕಟೇಶ್ ಅವರನ್ನು ಅಂದೇ ನೇಮಕ ಮಾಡಲಾಗಿತ್ತು.

ಅಂದು ಅಧಿಕಾರ ವಹಿಸಿಕೊಂಡ ವೆಂಕಟೇಶ್ ಅವರು ಯಶವಂತಕುಮಾರ್‌ನಿಂದ ಮಳಿಗೆ ದಾಸ್ತಾನು, ಕ್ಯಾಷ್, ಇನ್‌ಸ್ಟಾಲ್‌ಮೆಂಟ್ ಚೆಕ್‌ಗಳು ಹಾಗೂ ದಾಖಲಾತಿಗಳ ಉಸ್ತುವಾರಿಯನ್ನು ಪಡೆದುಕೊಳ್ಳುವಾಗ 1,11,500 ರೂ. ಮೊತ್ತದ ಸಂಸ್ಥೆ ಬ್ಯಾಂಕ್ ಅಕೌಂಟ್‌ಗೆ ಈ ಮೊದಲೇ ನೋಂದಾಯಿಸಬೇಕಿದ್ದ 4 ಬಾಕಿ ಚೆಕ್‌ಗಳು ಕಂಡುಬಂದಿದ್ದು, ಈ ಬಗ್ಗೆ ಪರಿಶೀಲಿಸಲಾಗಿ ನೌಕರರು ಕೆಎಸ್‌ಐಸಿಗೆ ವಂಚಿಸಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ 7 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಇನ್‌ಸ್ಪೆಕ್ಟರ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ: 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್ ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕನ್ನಡ ಪುನಶ್ಚೇತನ ಶಿಬಿರ ಸಮಾರೋಪ

ವಿದ್ವಾನ್ ಎನ್.ಕೆ. ಮಹದೇವನ್ ನಾದಸ್ವರ ಆಲಾಪನೆ ಮೆರುಗು



52ನೇ ಕನ್ನಡ ಪುನಶ್ಚೇತನ ಶಿಬಿರ ಸಮಾರೋಪದಲ್ಲಿ ವಿದ್ವಾನ್ ಎನ್.ಕೆ. ಮಹದೇವನ್ ನಾದಸ್ವರ ಸಂಗೀತ ಕಾರ್ಯಕ್ರಮ ನೀಡಿದರು.

ಮೈಸೂರು, ಜೂ.19(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ 15 ದಿನಗಳ ಕಾಲ ನಡೆದ 52ನೇ ಕನ್ನಡ ಪುನಶ್ಚೇತನ ಶಿಬಿರ ವಿದ್ವಾನ್ ಎನ್.ಕೆ. ಮಹದೇವನ್ ಅವರ ನಾದಸ್ವರ ಆಲಾಪನೆಯೊಂದಿಗೆ ಯಶಸ್ವಿಯಾಯಿತು.

ವಿವಿಧ ಪದವಿ ಕಾಲೇಜು ವಿದ್ಯಾರ್ಥಿಗಳ ತಮಟೆ, ನಗಾರಿ ವಾದನದೊಂದಿಗೆ ಆರಂಭಗೊಂಡ ಶಿಬಿರದ ಕಡೆಯ ದಿನದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಂಗಳವಾದ್ಯದ ಮೂಲಕ ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸುವ ಸಂಕಲ್ಪ ಮಾಡಲಾಯಿತು.

ಕನ್ನಡ, ಸಾಹಿತ್ಯ, ಪರಂಪರೆ, ಪ್ರಜಾಪ್ರಭುತ್ವ ಹಾಗೂ ಪ್ರಚಲಿತ ವಿದ್ಯಮಾನಗಳ ಕುರಿತು ವಿಶೇಷ ಉಪನ್ಯಾಸಗಳಿಂದ ಕೂಡಿದ್ದ ಶಿಬಿರದ ಕೊನೆಯ ದಿನ ವಿದ್ವಾನ್ ಎನ್.ಕೆ. ಮಹದೇವನ್, ವಿಶೇಷ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸುವ ಮೂಲಕ ಶಿಬಿರಾರ್ಥಿಗಳಿಗೆ ಬೀಳ್ಕೊಡುಗೆ ನೀಡಿದರು.

ಈ ವೇಳೆ ಶಿಬಿರದ ಸಂಯೋಜಕರೂ ಆದ ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು ಮಾತನಾಡಿ, ಕನ್ನಡ ಪುನಶ್ಚೇತನ ಶಿಬಿರವೂ ಯಶಸ್ವಿಯಾಗಿದೆ. 34 ಸಂಪನ್ಮೂಲ ವ್ಯಕ್ತಿಗಳು, ಕನ್ನಡ ಸಾಹಿತ್ಯ ಪರಂಪರೆ, ಪ್ರಚಲಿತ ವಿದ್ಯಮಾನ ಕುರಿತು ಪ್ರಬಂಧಗಳನ್ನು ಮಂಡಿಸಿದ್ದಾರೆ. ಗಂಭೀರವಾದ ವಿಷಯಗಳನ್ನು ಚರ್ಚಿಸಿ, ಪರಿಹಾರ ಕಂಡುಕೊಳ್ಳುವ ಮೂಲಕ ಶಿಬಿರಾರ್ಥಿಗಳು ಪುನಶ್ಚೇತನಗೊಂಡಿದ್ದಾರೆ ಎಂದರು.

ಕಲಿಕೆ ನಿರಂತರ: ಶಿಬಿರದ ಅಧ್ಯಕ್ಷತೆ ವಹಿಸಿದ್ದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ.ಹೆಚ್.ಪಿ.ಜ್ಯೋತಿ ಮಾತನಾಡಿ, ಕಲಿಕೆ ನಿರಂತರವಾದ ಪ್ರಕ್ರಿಯೆ. ಕಲಿಯುವ ಆಸಕ್ತಿ ಇದ್ದರೆ ಜೀವನಪರ್ಯಂತ ಕಲಿಯಬಹುದು. ತಮ್ಮ ಕ್ಷೇತ್ರಗಳಲ್ಲಿ ನೈಪುಣ್ಯತೆ ಸಾಧಿಸಿರುವ ಪ್ರತಿ ವ್ಯಕ್ತಿಗೂ ಪುನಶ್ಚೇತನ ಅಗತ್ಯ ಎಂದರಲ್ಲದೆ ಮೈಸೂರು ವಿವಿ ಮಾನಸಗಂಗೋತ್ರಿ ಆವರಣವನ್ನು ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಿದೆ. ಅದರಂತೆ ಮಾಳವಿಯ ಮಿಷನ್ ಆವರಣವನ್ನು ಪ್ಲಾಸ್ಟಿಕ್ ಮುಕ್ತವನ್ನಾಗಿಸುವ ಗುರಿ ಹೊಂದಿದ್ದೇವೆ ಎಂದು ಹೇಳಿದರು.

ನಂತರ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಎಲ್. ನಂಜುಂಡಸ್ವಾಮಿ, ಸಂಶೋಧಕ ಹೆಚ್.ಎಸ್.ಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ರೋಟರಿ ಐಡಿಯಲ್ ಜಾವಾ ಶಾಲೆಗೂ ಬಾಂಬ್ ಬೆದರಿಕೆ!

ಮೈಸೂರು, ಜೂ.19(ಎಂಕೆ)– ಬೆಂಗಳೂರು, ಹಾಸನ ಮತ್ತು ಉಡುಪಿ ಜಿಲ್ಲೆಗಳ ಹಲವು ಶಾಲೆಗಳ ನಂತರ ಮೈಸೂರಿನ ಕೆಲ ಶಾಲೆಗಳಿಗೆ ಹುಸಿ ಬಾಂಬ್ ಇ–ಮೇಲ್ ಸಂದೇಶ ಕಳುಹಿಸುವುದು ಹೆಚ್ಚಾಗುತ್ತಿದ್ದು, ಜೆಎಲ್‌ಬಿ ರಸ್ತೆಯಲ್ಲಿನ ರೋಟರಿ ಐಡಿಯಲ್ ಜಾವಾ ಶಾಲೆಗೂ ಬಾಂಬ್ ಬೆದರಿಕೆ ಇ–ಮೇಲ್ ಬಂದಿದೆ.

ನಿನ್ನೆ(ಬುಧವಾರ) ಮಧ್ಯಾಹ್ನ 12 ಗಂಟೆ ಸುಮಾರಿಗೆ ಬನ್ನೂರು ಮುಖ್ಯ ರಸ್ತೆಯ ಜ್ಞಾನ ಸರೋವರ ಇಂಟರ್‌ನ್ಯಾಷನಲ್ ಶಾಲೆಗೆ ಬಾಂಬ್ ಬೆದರಿಕೆಯ ಇ–ಮೇಲ್ ಬಂದಂತೆಯೇ ಗುರುವಾರ ಬೆಳಗ್ಗೆ 10.11 ಗಂಟೆಗೆ ರೋಟರಿ ಐಡಿಯಲ್ ಜಾವಾ ಶಾಲೆಯ ಕಚೇರಿ ಇ–ಮೇಲ್ ವಿಳಾಸಕ್ಕೆ Bomb blast in your school - do not take this email lightly - justice for the rape victim in Hydrabad ಸಂದೇಶ ಕಳುಹಿಸಲಾಗಿದೆ. ಪ್ರಭಾಕರ್ ಡಿವಿಜಿಪಿ ಎಂಬ ಹೆಸರಿನ ವ್ಯಕ್ತಿಯ ಮೇಲ್‌ನಿಂದ ಬೆದರಿಕೆ ಸಂದೇಶ ಕಳುಹಿಸಲಾಗಿದ್ದು, ಮೂರು ಮೊಬೈಲ್ ಸಂಖ್ಯೆಗಳನ್ನೂ ನೀಡಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದೊಂದಿಗೆ ಭೇಟಿ ನೀಡಿದ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು ಪರಿಶೀಲನೆ ನಡೆಸಿದ್ದಾರೆ. ಬಾಂಬ್ ಬೆದರಿಕೆ ಸಂದೇಶದ ಹಿನ್ನೆಲೆ ಪರಿಶೀಲನೆ ನಡೆಸಲಾಗಿದ್ದು, ಯಾವುದೇ ಬಾಂಬ್ ಪತ್ತೆಯಾಗಿಲ್ಲ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದೇವೆ ಎಂದು ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರಾಹುಲ್ ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ

ಚಾಮರಾಜ ಕ್ಷೇತ್ರದಲ್ಲಿ ಆರೋಗ್ಯ, ನೇತ್ರ ತಪಾಸಣಾ ಶಿಬಿರ; ನೋಟ್‌ಬುಕ್ ವಿತರಣೆ

ಮೈಸೂರು, ಜೂ.19– ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪಡುವಾರಹಳ್ಳಿಯ ದಂಡಿನ ಮಾರಮ್ಮ ದೇವಸ್ಥಾನದ ಬಳಿ ಏರ್ಪಡಿಸಿದ್ದ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಶಾಸಕ ಕೆ.ಹರೀಶ್‌ಗೌಡರೂ ಆರೋಗ್ಯ ತಪಾಸಣೆ ಮಾಡಿಸಿಕೊಂಡು, ಯುವ ಕಾಂಗ್ರೆಸ್ ಸೇವಾ ಕಾರ್ಯವನ್ನು ಬಣ್ಣಿಸಿದರು. ಬಳಿಕ ಸರ್ಕಾರಿ ಶಾಲೆ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಈ ವೇಳೆ ಚಾಮರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಡಿ.ಎಂ.ನಿಶಾಂತ್ ಪಟೇಲ್, ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಯುವ ಕಾಂಗ್ರೆಸ್ ಮೈಸೂರು ಉಸ್ತುವಾರಿ ದೀಪಕ್(ರಾಜಾಹುಲಿ), ಮಾಜಿ ಮೇಯರ್ ರಾಜೇಶ್ವರಿ ಪುಟ್ಟಸ್ವಾಮಿ, ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್, ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಕುಮಾರ್, ಲಕ್ಕನ್, ದಿಲೀಪ್, ಪವನ್, ವಿನಯ್, ಸಂಜಯ್, ಚಂದ್ರು ಹಾಗೂ ವಿಷ್ಣುಪ್ರಿಯ, ಮಲ್ಲೇಶ್, ಕಿರಣ್, ಮಾದೇವ್, ವಿನೋದ್, ಪ್ರವೀಣ್ ಡಿಂಪಲ್, ಪ್ರಮೋದ್, ರಾಘು, ವರುಣ್, ಅರ್ಜುನ್ ದರ್ಶನ್ ಮತ್ತಿತರರಿದ್ದರು.





ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಮಕ್ಕಳಿಗೆ ನೋಟ್ ಬುಕ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ಪಾಲಿಕೆಯಿಂದ ಗಿಡ ನೆಡುವ ಕಾರ್ಯಕ್ರಮ

ಮೈಸೂರು, ಜೂ.19(ಎಂಟಿವೈ)– ಅಮೃತ್ ಯೋಜನೆಯಡಿ ವಿವಿಧ ಮಹಿಳಾ ಸ್ವಸಹಾಯ ಸಂಘಗಳ ಕಾರ್ಯಕರ್ತರ ನೆರವಿನಿಂದ ಮೈಸೂರು ಮಹಾನಗರ ಪಾಲಿಕೆ ನಾಲ್ಕು ಕೆರೆಗಳ ಆವರಣದಲ್ಲಿ 145 ಗಿಡ ನೆಟ್ಟು ಪೋಷಿಸಲು ಕ್ರಮ ಕೈಗೊಂಡಿದೆ.

ಕೇಂದ್ರದ ಅಮೃತ್ ಮಿಷನ್ ಯೋಜನೆಯೊಂದಿಗೆ ದೀನ್‌ದಯಾಳ್ ಜನ್ ಅಜೀವಿಕ ಯೋಜನೆ–ಶಹರಿ ಕಾರ್ಯಕ್ರಮದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರೊಂದಿಗೆ ವಿಶ್ವ ಪರಿಸರ ದಿನದ ಅಂಗವಾಗಿ ಡೇ–ನಲ್ಮ್ ಘಟಕದಿಂದ 'ತಾಯಿಯ ಹೆಸರಿನಲ್ಲಿ ಒಂದು ಗಿಡ'(ಏಕ್ ಪೇಡ್ ಮಾ ಕಿ ನಾಮ್) ನೆಡುವ ಕಾರ್ಯಕ್ರಮವನ್ನು ದೇಶದಾದ್ಯಂತ ಆಯೋಜಿಸಲಾಗಿದ್ದು, ಮೈಸೂರು ಮಹಾನಗರ ಪಾಲಿಕೆ ಮೈಸೂರಿನ ನಾಲ್ಕು ಕೆರೆ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಸಿತು.

ಗಿಡ ನೆಡುವ ಕಾರ್ಯಕ್ರಮಕ್ಕಾಗಿ ವಿವಿಧ ಮಹಿಳಾ ಸ್ವಸಹಾಯ ಸಂಘಗಳ 40 ಮಹಿಳೆಯರನ್ನು ಆಯ್ಕೆ ಮಾಡಿ, ಅವರಿಗೆ ಟಿ–ಶರ್ಟ್, ಟೋಪಿ ನೀಡುವ ಮೂಲಕ ಗಿಡ ನೆಡುವ ಅಭಿಯಾನಕ್ಕೆ ಬಳಸಿಕೊಳ್ಳಲಾಯಿತು. ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿ ಆವರಣದಿಂದ 10 ಮಂದಿ ಮಹಿಳಾ ಸಂಘದ ಕಾರ್ಯಕರ್ತರೊಂದಿಗೆ ಪಾಲಿಕೆ ಸಿಬ್ಬಂದಿ ತಂಡ ಪ್ರತ್ಯೇಕ ತಂಡಗಳಲ್ಲಿ ನಿಗದಿತ ಕೆರೆಗಳಿಗೆ ತೆರಳಿ ಗುರುತಿಸಲ್ಪಟ್ಟ ಸ್ಥಳದಲ್ಲಿ ಗಿಡ ನೆಟ್ಟು, ನೀರೆರೆದರು.


ಮೈಸೂರಿನ ಸರಸ್ವತಿಪುರಂ ಈಜು ಕೊಳದ ಬಳಿಯಿರುವ ಕಲ್ಯಾಣಿ ಏರಿಯಲ್ಲಿ ಗಿಡ ನೆಡುವ ಅಭಿಯಾನಕ್ಕೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಗಿಡ ನೆಡುವ ಮೂಲಕ ಚಾಲನೆ ನೀಡಿದರು. ಬಳಿಕ ಹೊಂಗೆ, ಕಾಡು ಬಾದಾಮಿ ಸೇರಿದಂತೆ ವಿವಿಧ ಜಾತಿಗೆ ಸೇರಿದ 30 ಗಿಡಗಳನ್ನು ಈಜು ಕೊಳದ ಕಲ್ಯಾಣಿ ಬಳಿ ನೆಡಲಾಯಿತು.

ಬಳಿಕ ಬೋಗಾದಿ ಕೆರೆಯಲ್ಲಿ 50, ಅಜ್ಜಯ್ಯನಹುಂಡಿ ಕೆರೆ ಬಳಿ 50 ಹಾಗೂ ಲಲಿತಾದ್ರಿಪುರದ ಪುನೀತ್ ರಾಜ್‌ಕುಮಾರ್ ಪಾರ್ಕ್ ಬಳಿ 15 ಗಿಡ ನೆಡಲಾಯಿತು. ಒಟ್ಟು ನಾಲ್ಕು ಕೆರೆಗಳಿಂದ 145 ಗಿಡ ನೆಡಲಾಗಿದ್ದು, ಅವುಗಳ ಪಾಲನೆ, ಪೋಷಣೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಸಂದರ್ಭದಲ್ಲಿ ಉಪಾಯುಕ್ತರು(ಅಭಿವೃದ್ಧಿ) ಸಿಂಧು, ಡೇ–ನಲ್ಮ್ ಸಮುದಾಯ ಸಂಘಟಕರು ಕಾಂತರಾಜು, ಅಭಿಯಾನ ವ್ಯವಸ್ಥಾಪಕರು ಡಾ.ಜೆ.ಎಸ್.ಭೈರಲಿಂಗಯ್ಯ, ಜೆಇ ರಾಮಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂ ಈಜುಕೊಳದ ಸಮೀಪದ ಕಲ್ಯಾಣಿ ಬಳಿ ಅಮೃತ್ ಯೋಜನೆಯಡಿ ವಿವಿಧ ಮಹಿಳಾ ಸ್ವಸಹಾಯ ಸಂಘಗಳ ಕಾರ್ಯಕರ್ತರ ನೆರವಿನಿಂದ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಗಿಡನೆಡುವ ಅಭಿಯಾನಕ್ಕೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಚಾಲನೆ ನೀಡಿದರು.

ಯೋಗ ತರಬೇತಿ ಶಾಲೆಗಳ ಜಿಎಸ್‌ಟಿ ಕಡಿತಕ್ಕೆ ಸಂಸದ ಯದುವೀರ್ ಮನವಿ



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಂಸದ ಯದುವೀರ ಒಡೆಯರ್ ಭೇಟಿ ಮಾಡಿದ ಸಂದರ್ಭ.

ಮೈಸೂರು, ಜೂ.19(ಪಿಎಂ)– ನಮ್ಮ ರಾಜ್ಯ, ದೇಶ ಹಾಗೂ ವಿಶ್ವಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲು ಸಕಲ ಸಿದ್ಧತೆ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಯೋಗ ತರಬೇತಿ ನೀಡುವ ಶಾಲೆಗಳಿಗೆ ವಿಧಿಸುತ್ತಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮರು ಪರಿಷ್ಕರಿಸಬೇಕೆಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ಈ ಸಂಬಂಧ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದ ಸಂಸದರು, ಜಿಎಸ್‌ಟಿ ಕಡಿಮೆಗೊಳಿಸಲು ಮನವಿ ಮಾಡಿದರು. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ಯೋಗ ಈಗ ಎಲ್ಲೆಡೆ ಹೆಚ್ಚು ಪ್ರಚಲಿತವಾಗಿದೆ. ಯೋಗದ ಬಗ್ಗೆ ಪ್ರಚಾರ ಮತ್ತು ಉತ್ತೇಜನ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲೂ ನಡೆಯುತ್ತಿದೆ ಎಂದು ಸಂಸದರು ವಿವರಿಸಿದರು.

ನಮ್ಮ ಮೈಸೂರು ವಿಶ್ವದ ಯೋಗ ರಾಜಧಾನಿ ಎಂದೇ ಕರೆಯಲ್ಪಡುತ್ತದೆ. ಯೋಗವು ಕೇವಲ ದೈಹಿಕ ಕಸರತ್ತು ಮಾತ್ರವಲ್ಲ, ಮಾನಸಿಕ, ಆಧ್ಯಾತ್ಮಿಕ ಸ್ಥಿತಿಗತಿಯನ್ನು ಹೆಚ್ಚಿಸುತ್ತಿದೆ. ಯೋಗ ಈಗ ಆರೋಗ್ಯಕರ ಜೀವನ ಶೈಲಿಯಾಗಿದೆ. ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಯೋಗಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಅವರ ನಿರಂತರ ಪ್ರಯತ್ನದಿಂದ ಈಗ ಜೂನ್ 21 ಅಂತಾರಾಷ್ಟ್ರೀಯ ಯೋಗ ದಿನ ಎಂದು ಆಚರಿಸಲಾಗುತ್ತಿದೆ ಎಂದು ಯದುವೀರ್ ಸ್ಪಷ್ಟಪಡಿಸಿದ್ದಾರೆ.

ಇಂತಹ ಯೋಗವನ್ನು ಹೇಳಿಕೊಡುವ ಸಣ್ಣ ಮತ್ತು ಸಮುದಾಯ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಅಥವಾ ಅತಿ ಕಡಿಮೆ ಶುಲ್ಕದಲ್ಲಿ ಯೋಗ ತರಬೇತಿ ಸೇವೆ ನೀಡುತ್ತಿವೆ. ಈ ಯೋಗ ಶಾಲೆಗಳನ್ನು ಫಿಟ್‌ನೆಸ್ ಸೆಂಟರ್ ಅಥವಾ ಜಿಮ್‌ಗಳ ಸಾಲಿನಲ್ಲಿ ಸೇರಿಸಿ ಶೇ.18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದರಿಂದ ಈ ಯೋಗ ಸಂಸ್ಥೆಗಳಿಗೆ ತೀವ್ರ ಸಮಸ್ಯೆ ಉಂಟಾಗುತ್ತಿದೆ ಎಂದು ಸಂಸದರು ಮನವಿ ಪತ್ರದಲ್ಲಿ ಮನವರಿಕೆ ಮಾಡಿದ್ದಾರೆ.

ಸಚಿವರಿಂದ ಭರವಸೆ: ಮನವಿ ಸ್ವೀಕರಿಸಿದ ಕೇಂದ್ರ ಹಣಕಾಸು ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದಷ್ಟು ಬೇಗ ಈ ಕುರಿತು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದು ಯದುವೀರ್ ಮಾಹಿತಿ ನೀಡಿದ್ದಾರೆ.

ಎಂ. ಮಹಾದೇವಸ್ವಾಮಿ



ಮೈಸೂರು: ಪ್ರೊ. ಡಿ. ನಾಗಣ್ಣ ಅವರ ಮಾರ್ಗದರ್ಶನದಲ್ಲಿ ಎಂ. ಮಹಾದೇವಸ್ವಾಮಿ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸೀವೇಜ್ ಫಾರಂನಲ್ಲಿ ಸಿಬಿಜಿ ಸ್ಥಾವರ ಸ್ಥಾಪನೆ

● ಮೈಸೂರು ಪಾಲಿಕೆ–ಬಿಪಿಸಿಎಲ್ ಒಡಂಬಡಿಕೆ ● ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದನೆ



ಮೈಸೂರಿನ ವಿದ್ಯಾರಣ್ಯಪುರಂ ಸೀವೇಜ್ ಫಾರಂನಲ್ಲಿ ಬಯೋಗ್ಯಾಸ್(ಸಿಬಿಜಿ) ಸ್ಥಾವರ ಸ್ಥಾಪನೆ ಯೋಜನೆಗೆ ಮೈಸೂರು ಮಹಾನಗರ ಪಾಲಿಕೆ ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್(ಬಿಪಿಸಿಎಲ್) ನಡುವೆ ಗುರುವಾರ ಒಪ್ಪಂದ ಮಾಡಿಕೊಳ್ಳಲಾಯಿತು.

ಮೈಸೂರು, ಜೂ.19(ಎಸ್‌ಬಿಡಿ)– ಮೈಸೂರಿನ ವಿದ್ಯಾರಣ್ಯಪುರಂ ಸೀವೇಜ್ ಫಾರಂನಲ್ಲಿ ಸಂಕುಚಿತ ಜೈವಿಕ ಅನಿಲ (ಸಿಬಿಜಿ) ಸ್ಥಾವರವನ್ನು ಸ್ಥಾಪಿಸುವ ಸಂಬಂಧ ಮೈಸೂರು ಮಹಾನಗರ ಪಾಲಿಕೆ ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಬಿಪಿಸಿಎಲ್) ನಡುವೆ ಇಂದು ಅಧಿಕೃತವಾಗಿ ಒಪ್ಪಂದ ಮಾಡಿಕೊಳ್ಳಲಾಯಿತು.

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ, ಬಿಪಿಸಿಎಲ್ ಅಧಿಕಾರಿಗಳಾದ ಜೈವಿಕ ಇಂಧನ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಅನಿಲ್‌ಕುಮಾರ್, ಜನರಲ್ ಮ್ಯಾನೇಜರ್(ಸಿಬಿಜಿ) ಆರ್.ಶಶಿಪ್ರಕಾಶ್, ಡಿಜಿಎಂ ಸಂಜಯ್ ಠಾಕೂರ್, ರಿಟೇಲ್ ಕರ್ನಾಟಕದ ರಾಜ್ಯ ಮುಖ್ಯಸ್ಥ ಬೀರುಂ ಸುಖೇಶ್, ರಿಟೇಲ್ ಮೈಸೂರು ಟೆರಿಟರಿ ಮ್ಯಾನೇಜರ್ ಕನ್ವಾಲ್‌ಜ್ಯೋತ್‌ಸಿಂಗ್ ಜೈವಿಕ ಅನಿಲ(ಬಯೋಗ್ಯಾಸ್) ಸ್ಥಾವರ ಯೋಜನೆ ಒಪ್ಪಂದಕ್ಕೆ ಪಾಲಿಕೆ ಆಯುಕ್ತರ ಕಚೇರಿಯಲ್ಲಿ ಸಹಿ ಹಾಕಿದರು.

ಮಹತ್ವದ ಯೋಜನೆ: ಕೈಗೆಟಕುವ ಸಾರಿಗೆ ಕಡೆಗೆ ಸುಸ್ಥಿರ ಪರ್ಯಾಯ ಸೃಷ್ಟಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸತತ್(ಸಸ್ಟೆನಬಲ್ ಆಲ್ಟ್ರನೇಟಿವ್ ಟುವರ್ಡ್ಸ್ ಅಫರ್ಡಬಲ್ ಟ್ರಾನ್ಸ್‌ಪೋರ್ಟ್) ಯೋಜನೆಯಡಿ ರಾಜ್ಯದಲ್ಲಿ ಕೈಗೊಂಡಿರುವ ಸಿಬಿಜಿ ಸ್ಥಾವರ ಒಪ್ಪಂದ ಇದಾಗಿದೆ. 60–66 ಕೋಟಿ ರೂ. ಅಂದಾಜು ಮೊತ್ತದ ಸಿಬಿಜಿ ಸ್ಥಾವರದಲ್ಲಿ 150 ಟಿಪಿಡಿ(ದಿನವಹಿ ಟನ್) ಬಯೋಗ್ಯಾಸ್ ಉತ್ಪಾದಿಸುವ ಗುರಿ ಹೊಂದಲಾಗಿದೆ.

ಹಲವು ಪ್ರಯೋಜನ: ಮೈಸೂರು ನಗರದಲ್ಲಿ ನಿತ್ಯ ಸುಮಾರು 600 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಸೀವೇಜ್ ಫಾರಂನಲ್ಲಿ ರಾಶಿ ಹೆಚ್ಚುತ್ತಲೇ ಇದೆ. ಈ ವೇಳೆ ಬಯೋಗ್ಯಾಸ್ ಘಟಕಕ್ಕೆ ನಿತ್ಯ 150ಕ್ಕೂ ಹೆಚ್ಚು ಟನ್ ಹಸಿ ತ್ಯಾಜ್ಯ ಬಳಕೆ ಮಾಡುವುದರಿಂದ ರಾಶಿ ಬೀಳುವುದು ತಪ್ಪುತ್ತದೆ. ಉಪಯೋಗಿಸಿದ ನಂತರ ಉಳಿಯುವ ತ್ಯಾಜ್ಯವನ್ನು ಗೊಬ್ಬರವಾಗಿ ಬಳಸಬಹುದು. ಈ ಘಟಕದಿಂದ ಪಾಲಿಕೆಗೆ ರಾಯಲ್ಟಿ ದೊರೆಯುವುದರ ಜೊತೆಗೆ ಉತ್ಪಾದಿಸುವ ಶುದ್ಧ–ಸುಸ್ಥಿರ ಸಿಬಿಜಿಯನ್ನು ಪಾಲಿಕೆ ವಾಹನಗಳಿಗೆ ಸಬ್ಸಿಡಿಯಲ್ಲಿ ಪಡೆಯುವ ಅವಕಾಶವಿದೆ. ಪರಿಸರ ಮಾಲಿನ್ಯ ನಿಯಂತ್ರಣ ದೃಷ್ಟಿಯಿಂದಲೂ ಈ ಯೋಜನೆ ಪರಿಣಾಮಕಾರಿಯಾಗಿದೆ.

2 ವರ್ಷದಲ್ಲಿ ಕಾರ್ಯಾರಂಭ: ಕೇಂದ್ರ ಸರ್ಕಾರವು ಸತತ್ ಯೋಜನೆಯಡಿ ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳ ಸಹಯೋಗದಲ್ಲಿ ದೇಶದ ವಿವಿಧೆಡೆ ಸಿಬಿಜಿ ಘಟಕ ಸ್ಥಾಪನೆಗೆ ಮುಂದಾಗಿದೆ. ಕೊಚ್ಚಿ, ತಿರುವನಂತಪುರಂ, ಕೋಝಿಕ್ಕೋಡ್ ಇನ್ನಿತರ ನಗರಗಳಲ್ಲಿ ಯೋಜನೆ ಪ್ರಗತಿಯಲ್ಲಿದೆ. ಕರ್ನಾಟಕದಲ್ಲಿ ಮೈಸೂರು ಹಾಗೂ ಹುಬ್ಬಳ್ಳಿಯಲ್ಲಿ ಪಿಪಿಪಿ ಮಾದರಿಯಲ್ಲಿ ಘಟಕ ಆರಂಭಿಸಲಾಗುತ್ತಿದೆ. ಇದೀಗ ರಾಜ್ಯದಲ್ಲೇ ಮೊದಲಿಗೆ ಮೈಸೂರಿನಲ್ಲಿ ಸಿಬಿಜಿ ಘಟಕ ಸ್ಥಾಪನೆಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇನ್ನು 2 ವರ್ಷದಲ್ಲಿ ಘಟಕ ಕಾರ್ಯಾರಂಭಿಸುವ ವಿಶ್ವಾಸ ಹೊಂದಲಾಗಿದೆ.

> ಈ ಸಿಬಿಜಿ ಸ್ಥಾವರವು ಮೈಸೂರಿನ ತ್ಯಾಜ್ಯ ಮತ್ತು ಇಂಧನ ಅಗತ್ಯಗಳಿಗೆ ಪರಿವರ್ತಕ ಪರಿಹಾರವಾಗಿದೆ. ಶುದ್ಧ ಇಂಧನ ಉತ್ಪಾದನೆಯೊಂದಿಗೆ ಘನತ್ಯಾಜ್ಯ ವಿಲೇವಾರಿಗೆ ಸಹಕಾರಿಯಾಗಲಿದೆ. ಈ ಮೂಲಕ ನಮ್ಮ ನಗರವನ್ನು ಶೂನ್ಯ–ತ್ಯಾಜ್ಯ ಸುಸ್ಥಿರತೆಯತ್ತ ಕೊಂಡೊಯ್ಯಬಹುದಾಗಿದೆ.
> – ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

> ಸತತ್ ದೃಷ್ಟಿಕೋನದಡಿ ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಜಂಟಿಯಾಗಿ ಕೈಗೊಂಡಿರುವ ಈ ಯೋಜನೆಯು ಇಂಧನ ನಾವೀನ್ಯತೆ, ಪರಿಸರ ಕಾಳಜಿಯನ್ನು ಒಳಗೊಂಡಿದೆ. ಇದು ಭಾರತದಲ್ಲಿ ಹಸಿರು ಸಾರಿಗೆ ಪರಿವರ್ತನೆಗೆ ಬೆಂಬಲ ನೀಡುವ ಬಿಪಿಸಿಎಲ್‌ನ ಬದ್ಧತೆಗೆ ಸಾಕ್ಷಿಯಾಗಿದೆ.
> –ಪಿ.ಅನಿಲ್‌ಕುಮಾರ್, ಬಿಪಿಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕ

ಹುಟ್ಟುಹಬ್ಬದ ಶುಭಾಶಯಗಳು



ಕೆ ರಾಜು

ಮೈಸೂರು ಜಿಲ್ಲಾ ರಕ್ಷಣಾವೇದಿಕೆಯ ಕಾರ್ಮಿಕ ಉಪಾಧ್ಯಕ್ಷ, ಭೈರಾಪುರ

ತಾಯಿ ಚಾಮುಂಡೇಶ್ವರಿಯ ಆಯಸ್ಸು ಆರೋಗ್ಯ ರಾಜಕೀಯ ಭವಿಷ್ಯ ನೀಡಲಿ ಎಂದು ಹಾರೈಸುವ

ತಬಲ ರಾಚಪ್ಪ, ನಾಗರಾಜು, ನಂಜುಂಡಸ್ವಾಮಿ, ತಬಲ ಮೇಕರ್ ಮೂರ್ತಿ, ವೆಂಕಟರಾಜು, ಮಾಜು, ಪುಟ್ಟಸಂದರ, ಲೋಕೇಶ್, ಕಾಂತರಾಜು, ಮಹೇಶ್, ಮಹದೇವ್, ಐಬಿ ಶಿವು.

27ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಜ್ಯೋತಿ ಮತ್ತು ಶಿವಮಲ್ಲು,

ಗ್ರಾಮಪಂಚಾಯಿತಿ ಸದಸ್ಯರು, ಹಳೇಕೆಸರೆ, ಮೈಸೂರು

ಶುಭಕೋರುವವರು:

ಶಿವಪ್ರಸಾದ್ ಎಸ್.ಜೆ, ಶಿವಶಂಕರ್ ಎಸ್.ಜೆ, ಕುಟುಂಬವರ್ಗದವರು, ಸ್ನೇಹಿತರು, ಬಂಧುಮಿತ್ರರು ಹಾಗೂ ಹಳೇಕೆಸರೆ ಗ್ರಾಮಸ್ಥರು



ಕರ್ನಾಟಕ ರಾಜ್ಯ ರೈತ ಸಂಘ
ರೈತ ಪರ್ವ ಸಂಘದ ರಾಜ್ಯ ಕಾರ್ಯದರ್ಶಿ

ಚಾಮರಾಜ್, ಮಂಡಕಳ್ಳಿ ಇವರಿಗೆ
ಜನುಮದಿನದ ಶುಭಾಶಯಗಳು

ಶುಭ ಕೋರುವರು: ಕರ್ನಾಟಕ ರಾಜ್ಯ ರೈತ ಪರ್ವ ರೈತ ಸಂಘದ ತಾಲೂಕು ಅಧ್ಯಕ್ಷರು ಶ್ರೀಮತಿ ಚಾಂದಿನಿ ಕಿರಣ್ ಕುಮಾರ್ ಹಾಗೂ ಕಾರ್ಯದರ್ಶಿ ಸ್ವಾಮಿ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ) ಕೆ.ಪಿ.ಪಿ–ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ-ಟೆಂಡರ್ ಸಂಖ್ಯೆ: 04/2025-26 ದಿನಾಂಕ: 19.06.2025

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ನ ಜೊತೆಗೆ ಸಲ್ಲಿಸುವುದು. ಕಾಮಗಾರಿಗಿಟ್ಟ ಮೊತ್ತ ರೂ.12.50 ಲಕ್ಷಗಳ 01 ಸಂಖ್ಯೆಯ ತಾಂತ್ರಿಕ ಸಮಾಲೋಚಕರನ್ನು ನೇಮಿಸುವ ಕಾಮಗಾರಿ ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ವಿವರ, ಟೆಂಡರ್ ಕ್ವರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: **26–06–2025 ಸಾಯಂಕಾಲ 05.30 ಗಂಟೆ** ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: **27–06–2025 ಸಾಯಂಕಾಲ 05.00 ಗಂಟೆಯವರೆಗೆ** ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ: **30–06–2025 ಬೆಳಿಗ್ಗೆ 11.30 ಗಂಟೆ,** ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

PROPERTY FOR SALE

EAST FACING SITE
Opposite to Park
9 Mtrs Road
Measuring East West : 30 ft, North South: 25 ft
Total : 750 sq ft
Location : Bogadi

8867770007

100% TEAK WOOD
FACTORY FINISH DOORS & FRAMES
@ FACTORY DEPOT RATES



10 YEARS WARRANTY* ISI
9845426862
9901291267

G9 projects
Designing your Dreams
MUDA APPROVED LAYOUT

BOOK PLOT @ ₹2LAKHS, REST IN EMI - A SMART MOVE TOWARD PROPERTY



HERITAGE CITY
Site Value
₹ 20,00,000
Marketed by Vee2 Developers

8088707707 Ring Road, Uttanahalli Mysuru

තಂದೆ ತಾಯಿ ಆಶೀರ್ವಾದ

30ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ವಸಂತ ಹಾಗೂ ಶ್ರೀ ನಿಂಗರಾಜ್

ಕಾರುಣ್ಯ ರಿಷಿಕ್ ಗೌಡ

25ನೇ ವರ್ಷದ ವಾರ್ಷಿಕೋತ್ಸವ

ಶ್ರಿ ಭೈರವೇಶ್ವರ ಹಳ್ಳದ ಮಿಲಿಟರಿ ಹೋಟೆಲ್

ಕೆ.ಆರ್.ಎಸ್. ರಸ್ತೆ, ಕುಂಬಾರಕೊಪ್ಪಲು ಗೇಟ್, ಮೈಸೂರು

ಪ್ರೀತಿಯ ಗ್ರಾಹಕರಿಗೆ ಧನ್ಯವಾದಗಳು ರಾಹುಲ್ ಗೌಡ

INDIAN COUNCIL OF ASTROLOGICAL SCIENCES [ICAS]
MYSURU CHAPTER STARTS 45th BATCH
Courses are: JYOTISH PRAVEENA, JYOTISH VISHARADA AND VASTU
Classes are conducted both in Kannada and English by experienced Faculties
New Batch Starts from 29.06.2025 Sunday & Classes are held every Sunday
Classes are Conducted at Acharya iiT, Mysore
Online and Special Classes are also conducted
For Details Contact:- 9448058965/ 9448816493/ 9535859348

DESIGNED TO MAKE EVERY SPACE BEAUTIFUL
2 BHK
HOME INTERIORS @
₹2.9 LAKHS
HOME SPACE MART
Kushalnagar • Mysuru • Bengaluru
For Site Vist :
9108923123

HP HYLAND PROPERTIES

ಕೇವಲ ₹749/ ಪ್ರತಿ ಚದರ ಅಡಿ

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
88840 71010
90713 86615

ಸವಿನೆನಪು



ನೀವು ನಮ್ಮನ್ನು ಅಗಲಿ 5 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿದೆ.
ದುಃಖತಪ್ತರು: ಲೇಟ್ ಲಕ್ಷ್ಮಿ ಹಾಗೂ ಲೇಟ್ ಚಂದ್ರು, ಅಣ್ಣಂದಿರು- ಮಂಜುನಾಥ್ ಸಿ, ಮನೋಜ್ ಸಿ ಹೊನ್ನಯ್ಯ ಕುಟುಂಬ ವರ್ಗದವರು ಯರಗನಹಳ್ಳಿ ಗ್ರಾಮಸ್ಥರು.

ಸಂಜನಾ
ನಿಧನ (20.6.2020)

FLAT FOR SALE
at TILAKNAGAR, MYSORE
2 BHK (East Facing),
2 Bathrooms, 1 Balcony,
1 Dry Balcony, 1 covered car parking, 1100sq.ft., Super Built up area.
Rs. 59 Lakhs (Negotiable)
Call : 95189 06122 / 84089 43566

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ

ನಮ್ಮ ಮನೆಯಲ್ಲಿ ಅಡುಗೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಸ್ಯಹಾರಿ ಮತ್ತು ಮಾಂಸಹಾರಿ. ಸಮಯ: ಬೆಳಗ್ಗೆ 8 ರಿಂದ ಸಂಜೆ 6

ಮೊ:9606862226

FOR RENT

Two bed room house, FIRST FLOOR with AEH & One attached bathroom, solar & UPS facilities, East facing, # 470, 13th main road, Saraswathipuram, Mysore - 9 preference to bank and Govt officials

9880126722

IMKTA Since 2003

IMKTA TEACHER TRAINING COURSES INDIA MYSORE

www.imkta.in

22 years of success in PreSchool Teacher Training and Placements



CELEBRATING 22 YEARS ANNIVERSARY

Diploma in Montesssori / Primary Teacher Training

For SSLC, PUC or any degree candidates
Campus interviews & placements assistance
Alpha International School — Online Course available
Manandavadi Road, Near Ring Road Signal Junction, Srirampura, Mysore
+91 7829937469

mysserae KALENI SILK INDUSTRY

FACTORY SALE

ಅಪ್ಪಟ ಚಿನ್ನದ ಜರಿಯ ಸೀರೆಗಳು

100% PURE SILK / GOLD ZARI SARIS

UP TO 30% DISCOUNT

KALENI SILK INDUSTRY
#263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

ಸವಿನೆನಪು



ಸಂಜನಾ
ನಿಧನ (20.6.2020)

ನೀವು ನಮ್ಮನ್ನು ಅಗಲಿ 5 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿದೆ.
ದುಃಖತಪ್ತರು: ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಲೇಟ್ ಸಿದ್ದೇಗೌಡ ಜನಾರ್ಧನ್ ಹಾಗೂ ಪೂರ್ಣಿಮಾ, ದೀಕ್ಷಿತ್, ಧನುಷ್, ಅತ್ತೆ ಮಾವಂದಿರು, ಅಣ್ಣ ತಮ್ಮಂದಿರು ಹಾಗೂ ಹೊನ್ನಯ್ಯ ಕುಟುಂಬ ವರ್ಗ, ಯರಗನಹಳ್ಳಿ, ಮೈಸೂರು

ರತ್ನ ಪ್ಯಾರ ಮೆಡಿಕಲ್ ಕಾಲೇಜು
ಕುವೆಂಪುನಗರ, ಮೈಸೂರು

ADMISSION OPEN
- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail
9886654463

HIGH STYLE
SAREE | KURTHIS | JEWELLERY | HOME DECOR



June 20th and 21st
(Friday & Saturday)
10:00 AM to 8:00 PM

Hotel Regenta Central Javaji
Opp. Speech & hearing library
Mysore

+91 98864 03050
+91 9731134440

ONE DISTRICT ONE PRODUCT — EK BHARAT SHRESHTHA BHARAT

ಗುಜರಾತ್ ಕರಕುಶಲ ಉತ್ಸವ

20 – 29 ಜೂನ್ 2025
ಬೆಳಿಗ್ಗೆ 10.00 ರಿಂದ ಸಂಜೆ 9.00
ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್
ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಮೈಸೂರು–570 016



ಗರ್ಭಾ ನೃತ್ಯದ ಸೊಗಡು ಡಾಲ್ ತಲ್ವಾರ್ ರಾಸ್ ನ ಜೊತೆ ಗುಜರಾತಿನ ಸಂಸ್ಕೃತಿಯ ಸೊಬಗನ್ನು ಆಸ್ವಾದಿಸುತ್ತಾ ಸಂಭ್ರಮಕ್ಕೆ ಸಾಕ್ಷಿಯಾಗಲು ನಿಮಗಿದೋ ಸ್ವಾಗತ

ವೈವಿಧ್ಯಮಯ ಕರಕುಶಲ ವಸ್ತುಗಳು, ದೇಶೀ ವಿನ್ಯಾಸ ವಸ್ತ್ರಗಳು, ಮನಮೋಹಕ ಆಭರಣಗಳು, ಗೃಹಾಲಂಕಾರ ಪರಿಕರಗಳು, ನವೀನ ಮಾದರಿಯ ಸಾಂಪ್ರದಾಯಿಕ ಗುಜರಾತಿ ಕಸೂತಿ ಕುಸುರಿಗಳು ಹಾಗೂ ಇನ್ನಷ್ಟು ಕಲಾತ್ಮಕ ಆಕರ್ಷಣೆಗಳು ಕಣ್ಮನ ಸೆಳೆಯಲಿವೆ. ಗುಜರಾತ್ ಹೆಮ್ಮೆಯ "ಪಟೋಲ ಸೀರೆ", ಬಾಂಧಿನಿ (ಟೈ ಮತ್ತು ಡೈ) ಬ್ಲಾಕ್ ಪ್ರಿಂಟ್, ಕಛ್ ಕಸೂತಿ / ಎಂಬ್ರಾಯಿಡ್ರಿ, ಕಛ್ ಮಡ್ ಮಿರರ್ ವರ್ಕ್, ಕಛ್ ಜ್ಯುವೆಲರಿ, ಕೈಮಗ್ಗ ಉತ್ಪನ್ನಗಳು, ಬೀಡ್ ವರ್ಕ್, ಮಡಿಕೆಗಳು, ಚನ್ನಪಟ್ಟಣ, ಚರ್ಮದ ಉತ್ಪನ್ನಗಳು, ಬೆಡ್‌ಶೀಟ್ ಮತ್ತು ಕುಶನ್ ಕವರ್ ಹಾಗೂ ಇನ್ನಿತರ ಆಕರ್ಷಣೆಯ ಕಸೂತಿ ಕರಕುಶಲವಸ್ತುಗಳು.

ವಿಶೇಷ ಕರಕುಶಲ ವಸ್ತುಗಳ ನೈಜ ಪ್ರಾತ್ಯಕ್ಷಿಕೆ, ಕ್ರಿಯಾಶೀಲತೆಯುಳ್ಳ ಕರಕುಶಲಕರ್ಮಿಗಳಿಂದ ನೇರವಾಗಿ ಗ್ರಾಹಕರಿಗೆ

ವಿಶೇಷ ಆಕರ್ಷಣೆ : ಗುಜರಾತಿನ ಕಲಾವಿದರಿಂದ ಸಾಂಪ್ರದಾಯಿಕ ಸಾಂಸ್ಕೃತಿಕ ಕಲೆ ಗರ್ಭಾ ನೃತ್ಯ
20 ರಿಂದ ಜೂನ್ 22ರ ಸಂಜೆ ಗಂಟೆ 6 ರಿಂದ 8ರ ತನಕ
ಪಾರ್ಕಿಂಗ್ ಹಾಗೂ ಪ್ರವೇಶ ಉಚಿತ
+91 9844550845, +91 8197583261

Organized by Executive Director Indext-c Govt. of Gujarat, Gandhinagar (INDEXT-c) | Supported by : Sports, Youth & Cultural Activities Department Govt. of Gujarat | Sponsored by : Commissioner & Secretary Cottage and Rural Industries Govt. of Gujarat, Gandhinagar | URBAN HAAT — In Association with : JSS Mahavidyapeetha JSS Mysore Urban Haat Mysuru